ಹಿತ್ತಲ ಗಿಡ

ಚಾತುರ್ಮಾಸಿಕ

ಪೈರು 10, ಕೊಯಿಲು 1, ಜನವರಿ-ಏಪ್ರಿಲ್, 2004

ರೈತ ವಿಜ್ಞಾನಿ, ವಿದ್ಯಾರ್ಥಿ,
ಸ್ವಯಂ ಸೇವಾ ಸಂಸ್ಥೆ
ಮತ್ತು ವ್ಯಕ್ತಿಗಳ
ಸಾಮೂಹಿಕ ಪ್ರಯತ್ನ

ಕರ್ನಾಟಕದ ಮಲೆನಾಡಿನಲ್ಲಿ 12ನೇ ಶೋಧಯಾತ್ರೆ



ಈ ಸಂಚಿಕೆಯಲ್ಲಿ

ದೇಶೀಯ ಹತೋಟಿ	4	ನಳಪಾಕ, ಜೀವ ವೈವಿಧ್ಯ, ಕೂಚು ಭಟ್ಟ	18
ಪುಣ್ಯಾ ಕೋಟಿ	5	ದೇಶೀಯ ಜಾಣ್ಮೆ	19
ಮಲೆನಾಡ ಶೋಧ ಯಾತ್ರೆ	6	ಪ್ರತಿಕ್ರಿಯೆ	20

ಜನರಿಗೆ ಪ್ರತಿಫಲ ನೀಡುವಂತಹ ಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ರೈತ ಶಕ್ತಿ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹನಿ ಬೀ ಬಳಗ

ಹಿತ್ತಲ ಗಿಡ

Honey Bee (*English*)
Prof. Anil K.Gupta, Indian Institute of Management,
Vastrapur, Ahmedabad - 380 015, Ph: 079-6307241
email: anilg@nifindia.org, honeybee@sristi.org

Abeja (*Spanish*)
Mario Mejia Gutierrez, Carrera 43 No.10-50 Apto.502
Telefono: 3368531 Cali, Valle, Colombia, mariomejia@hotmail.com

Ama Akha Pakha (*Oriya*)
Dr. Balaram Sahu, 3R BP 5/2, BP Colony, Unit-8,
Bhubaneswar - 751 012, Orissa, balaram_sahu@hotmail.com

Chayan (*Bengali*)
Dr.D.K.Bagchi, Head, Agricultural Science Unit, Indian Statistical
Institute, 203, Barrackpore Trunk Road, Calcutta - 700 035
dkbagchi@isical.ac.in

Loksarvani (*Gujarati*)
Dilip Koradiya, SRISTI P.O.Box 15050
Ahmedabad, Gujarat - 380015, loksarvani@sristi.org

Makhir (*Pahari*)
Dr.A.Chandan, ERA, Khundian, District Kangra,
Himachal Pradesh - 176030, makhir@epatra.com

Num Vali Velanmai (*Tamil*)
P. Vivekanandan, 45, TPM Nagar, Virattipathu
Tamil Nadu - 625 010, numvali@vsnl.com

Sujh-Bujh Aas Paas Ki (*Hindi*)
Shalini Sharma, H-12 ODS Flats Lajpat Nagar 4
New Delhi - 110024, sujhbuj@sristi.org

Tenetiga (Telugu)
Prof.(Mrs.) P. Geervani, 201, Dream Apartment, Road No.3
Banjara Hills, Hyderabad, Andra Pradesh - 500 034

ಸಂಪಾದಕೀಯ

ಮಲೆನಾಡಿನಲ್ಲಿ 12ನೇ ಶೋಧ ಯಾತ್ರೆ


"ಬರಿದೇ ಬಾಹ್ಯ ಶೋಧನೆಯಲ್ಲ, ಆಂತರಿಕವಾಗಿಯೂ ಕೂಡ, ಎರಡೂ ನಿಟ್ಟಿನಲ್ಲಿ ಶೋಧನೆ ನಡೆಸುವುದೇ 'ಶೋಧಯಾತ್ರೆ'ಯ ಉದ್ದೇಶ"ವೆಂದು ಪ್ರೊ. ಗುಪ್ತ ವ್ಯಾಖ್ಯಾನಿಸುತ್ತಾರೆ. ಪ್ರೊ. ಅನಿಲ್ ಗುಪ್ತರವರ ತಂಡ ವರ್ಷಕ್ಕೆರಡು ಬಾರಿ ತೀವ್ರ ಚಳಿ ಮತ್ತು ತೀವ್ರ ಸೆಖೆ ಕಾಲದಲ್ಲಿ, ದೇಶದ ಹಲವೆಡೆ ಹತ್ತಾರು ದಿನ ಪಾದ ಯಾತ್ರೆ ಮಾಡುತ್ತಾ, ಗ್ರಾಮಾಂತರ ಬದುಕನ್ನು ಹಸನು ಮಾಡುವಲ್ಲಿ, ಪರಿಸರ, ಜೀವ ವಿವಿಧತೆ ರಕ್ಷಣೆಯಲ್ಲಿ ಪ್ರತಿಫಲಾಪೇಕ್ಷೆ ಇಲ್ಲದೇ ತಣ್ಣನೆ ತಮ್ಮದೇ ಆದ ಕಾಣ್ಕೆ ನೀಡುತ್ತಿರುವ ಸ್ಥಳೀಯ ಪರಿಣಿತರು ಮತ್ತು ತಳಮಟ್ಟದ ಅನುಶೋಧಕರನ್ನು ಹುಡುಕಿ ಅವರನ್ನು ಸ್ಥಳದಲ್ಲೇ ಸನ್ಮಾನಿಸುವ ಈ ಆಧುನಿಕ 'ದಂಡೀ ಯಾತ್ರೆ' ಶುರು ಮಾಡಿ ಕೆಲವಾರು ವರ್ಷಗಳೇ ಕಳೆದಿರುತ್ತದೆ. ಇಂತಹ 11 ಯಾತ್ರೆಗಳು ಈಗಾಗಲೇ ಮುಗಿದಿರುತ್ತವೆ. ಆದರೆ ನಮ್ಮ ಕರ್ನಾಟಕದಲ್ಲಿ ಈ ಯಾತ್ರೆ ಇದುವರೆಗೂ ಏರ್ಪಾಟಾಗದಿರುವುದಕ್ಕೆ ಪ್ರೊಫೆಸರ್ ಆಗಾಗ್ಗೆ ಜ್ಞಾಪಿಸುತ್ತಲೇ ಇದ್ದರು. ಅಂತೂ ಈ ಸಾರಿ, ಮಲೆನಾಡ ಮಿತ್ರರಾದ ನರಸಿಂಹ ಭಂಡಾರಿ ಮತ್ತು ರತ್ನಾಕರರನ್ನು ಹುರಿದುಂಬಿಸಿ, ಸಕಾಲದಲ್ಲಿ ಪತ್ರಕರ್ತ ಮಿತ್ರ ಪ್ರಭಾಕರ ಕಾರಂತರ ಮಾರ್ಗದರ್ಶನ ದೊರೆತು ಕಳೆದ ನವೆಂಬರ್‌ನಲ್ಲಿ ಈ ನಿಟ್ಟಿನಲ್ಲಿ ಹರಿಹರಪುರದಲ್ಲಿ ಒಂದು ಪೂರ್ವಭಾವಿ ಸಭೆ ಏರ್ಪಾಟಾಗುವಂತಾಯ್ತು. ಇದರಲ್ಲಿ ನಾನು ಮತ್ತು ಕೃಷ್ಣನ್ ಅಯ್ಯರ್ ಭಾಗವಹಿಸಿ, 12ನೇ ಶೋಧಯಾತ್ರೆಯ ರೂಪರೇಶೆಗಳನ್ನು ತಯಾರಿಸಿ, ಕಾರಂತರ ನೇತೃತ್ವದಲ್ಲಿ, ಭಂಡಾರಿ, ರತ್ನಾಕರರ ಜೊತೆಗೆ, ಸಾರಿಗೆ ಸಹಕಾರದ ಧುರೀಣ ಚಿಕ್ಕೇಗೌಡರು, ಬೆಳವಿನಕುಡಿಗೆ ರಾಜಶೇಖರ್, ಕಮ್ಮರಡಿ ಸುರೇಶ್ ಮತ್ತಿತರನ್ನೊಳಗೊಂಡ ಒಂದು ಶೋಧಯಾತ್ರೆ ನಿರ್ವಹಣಾ ಸಮಿತಿ ರಚಿಸಲಾಯ್ತು. ಆ ಸಂದರ್ಭದಲ್ಲೇ, ಗುಡ್ಡೇತೋಟದ ಅನಂತ ರಾವ್‌ರವರು ಉದ್ಘಾಟನಾ ಸಮಾರಂಭದ ಹೊಣೆಗಾರಿಕೆ ಹೊರುವುದಾಗಿ ಆಶ್ವಾಸನೆ ನೀಡಿದ್ದು ಮಾತ್ರವಲ್ಲದೆ ನಮಗೆ ಈ ಬಗ್ಗೆ ಧೈರ್ಯ ನೀಡಿ, ಹುರಿದುಂಬಿಸಿ ಮುನ್ನಡೆಯುವಂತೆ ಮಾಡಿದರು. ನಂತರ, ಕಾರಂತರ ನೇತೃತ್ವದ ಈ ತಂಡಕ್ಕೆ ಅಲ್ಲಲ್ಲೇ ಸ್ಥಳೀಯವಾಗಿ ಬೆಳುವಿನಕುಡಿಗೆ ಸುಬ್ರಹ್ಮಣ್ಯ, ಶೃಂಗೇರಿ ಪಾಂಡುರಂಗ, ಬೇಗಾನೆ ಕಾಡಪ್ಪ ಗೌಡರು, ಅಗಲಿ ನಾಗೇಶ್, ಕಡ್ತೂರಿನ ಅನ್ನಪೂರ್ಣ ಮೋಹನ್, ಹಾಲ್ಮುತ್ತೂರಿನ ರೇವತಿ ಅನಂತಮೂರ್ತಿ, ಬಂಡಿಗಡಿ ಶ್ರೀಕಂಠ ಜೋಯ್ಸ್, ಬಡಿಯಣ್ಣ, ಹೊಲಗೋಡು ಉಪೇಂದ್ರ ನಾಯಕ್, ಬೊಮ್ಲಾಪುರ ವಿಜಯಕುಮಾರ್, ಕತ್ತಲಗಿರಿ ರತ್ನಾಕರ್ ಹೀಗೆ ಹತ್ತಾರು ಉತ್ಸಾಹಿ ಧುರೀಣರ ಪಡೆಯೇ ಕೈ ಜೋಡಿಸಿತು. ಹಾಗೇ ಸ್ಥಳೀಯ ಮ್ಯಾಮ್‌ಕೋಸ್, ಲಯನ್ಸ್, ರೋಟರಿ, ಜೇಸಿ, ಸ್ವಸಹಾಯ ಸಂಘ ಇತರ ಸಂಸ್ಥೆಗಳೆಲ್ಲವುಗಳ ಸಕ್ರಿಯ ಸಹಕಾರ ಕೂಡ ದೊರೆಯಿತು. ಸಾರಿಗೆ ಸಹಕಾರಿ ಮಿತ್ರ ಚಿಕ್ಕೇಗೌಡರು, ಸನ್ಮಾನಿತರಿಗಾಗಿ ವಿಶೇಷ ರೀತಿಯ ನೆನಪಿನ ಕಾಣಿಕೆಗಳನ್ನು ತಯಾರಿಸಿಕೊಡಲು ಮುಂದೆ ಬಂದರು. ಇದಕ್ಕೆ ಪೂರ್ವಭಾವಿಯಾಗಿ ಭಂಡಾರಿ, ರತ್ನಾಕರ, ರಾಜಶೇಖರ ಮತ್ತಿತರ ಮಿತ್ರರು ಯಾತ್ರೆಯ ನಕ್ಷೆ ರೂಪಿಸಿ ಪ್ರತೀ ಹಳ್ಳಿಗೂ ಹೋಗಿ

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore
SRISTI (Society for Research and Initiatives for Sustainable Technologies and Institutions), Ahmedabad
NIF (National Innovation Foundation, India), New Delhi

ಪಟ್ಟಿಯನ್ನು ಮೊದಲೇ ತಯಾರಿಸಿಟ್ಟುಕೊಂಡಿದ್ದರು. ಇವೆಲ್ಲವುಗಳ ಪರಿಣಾಮವಾಗಿ, ಅತ್ಯಂತ ಚೊಕ್ಕವಾಗಿ, ವ್ಯವಸ್ಥಿತ ರೀತಿಯಲ್ಲಿ ಕಳೆದ ಡಿಸೆಂಬರ್ 25 ಬೆಳಗ್ಗೆ ಗುಡ್ಡೇತೋಟದ ಅನಂತ ರಾವ್‌ರವರ ಸ್ವಗೃಹ ಚಿತ್ರಕೂಟದಲ್ಲಿ ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದ ಧರ್ಮಾಧಿಕಾರಿ ಶ್ರೀ ಭೀಮೇಶ್ವರ ಜೋಷಿಯವರು ಹಸಿರು ನಿಶಾನೆ ತೋರಿಸುವುದರೊಂದಿಗೆ ಈ 12ನೇ ಶೋಧಯಾತ್ರೆ ವಿಧ್ಯುಕ್ತವಾಗಿ ಉದ್ಘಾಟನೆಯಾಯಿತು.

ಏಳು ದಿನಗಳ ಈ ಶೋಧಯಾತ್ರೆಗೆ ಕರ್ನಾಟಕದ ಮತ್ತು ಸ್ಥಳೀಯವಾಗಿ 70-80 ಜನರ ಜೊತೆಗೆ ಗುಜರಾತು, ರಾಜಸ್ಥಾನ, ತಮಿಳ್ನಾಡು, ಒರಿಸ್ಸಾ, ಅಸ್ಸಾಂ ಹೀಗೆ 70ಕ್ಕೂ ಅಧಿಕ ಯಾತ್ರಿಗಳು ಹೊರ ರಾಜ್ಯದಿಂದ ಬಂದು ಸೇರಿದರು. ಇದರಲ್ಲಿ ಕಳೆದ 10 ಶೋಧಯಾತ್ರೆಗಳಲ್ಲಿ ಭಾಗವಹಿಸಿದ ಗುಜರಾತಿನ ಬಿನ್ನಿಬಾಂದು, ಎಂಟು ಯಾತ್ರೆಗಳಲ್ಲಿ ಭಾಗವಹಿಸಿದ ಅಮೃತ್ ಬಾಪು ಕೂಡ ಸೇರಿರುತ್ತಾರೆ. ಸುಮಾರು 135 ಕಿ.ಮೀ. ದೂರ ಕ್ರಮಿಸಿದ ಈ ಏಳು ದಿನಗಳಲ್ಲಿ 29 ಹಳ್ಳಿ/ಸಣ್ಣ ಪಟ್ಟಣಗಳಲ್ಲಿ ಸಭೆ ನಡೆಸಿ, 255 ಜನರನ್ನು ಸನ್ಮಾನಿಸಲಾಗಿರುತ್ತದೆ. ಜೊತೆಗೆ 10 ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಜೀವ ವಿವಿಧತೆ ಸ್ಪರ್ಧೆ, 5 ಹಳ್ಳಿಗಳಲ್ಲಿ ಮಹಿಳೆಯರಿಗೆ ಮಲೆನಾಡ ನಾಟಿ ಅಡಿಗೆಗಳ ಸ್ಪರ್ಧೆ ಮತ್ತು ಮಲೆನಾಡ ಕಲಾಸಂಪತ್ತಿನ ಸ್ಪರ್ಧೆಯನ್ನು ಏರ್ಪಡಿಸಲಾಗಿರುತ್ತದೆ. ಇವರಲ್ಲಿ ಶೇ 20ರಷ್ಟು ಮಹಿಳೆಯರಾಗಿರುವುದೊಂದು ವಿಶೇಷವಾಗಿದ್ದರೆ, ಅವರಲ್ಲಿ ಮೂವರು ನೂರು ವಸಂತಗಳನ್ನು ಸವೆಸಿದ ಧೀರ್ಘಾಯುಷಿಗಳಾಗಿರುವುದೂ ಇನ್ನೂ ವಿಶೇಷವಾಗಿರುತ್ತದೆ. ಮಲೆನಾಡಿನ ಆ ನಿತ್ಯ ಹರಿದ್ವರ್ಣ ಕಾಡು, ಪ್ರಕೃತಿಯ ರಮಣೀಯ ದೃಶ್ಯ, ಜೀವ ವೈವಿಧ್ಯತೆಗಳಿಂದ ಶೋಧಯಾತ್ರಿಗಳು ಬೆಕ್ಕಸ ಬೆರಗಾಗಿದ್ದರೆ, ಊರು ಊರುಗಳಲ್ಲಿ ಜನ ತೋರುತ್ತಿದ್ದ ಪ್ರೀತಿ, ಆದರ, ಸತ್ಕಾರ ಗಳಿಂದ ಅಷ್ಟೇ ಪುಲಕಿತರಾಗಿರುತ್ತಾರೆ.



ಶೋಧಯಾತ್ರೆಯಲ್ಲಿ ಸನ್ಮಾನಿತರ ವಿಂಗಡಣೆ

ಪತ್ರಿಕಾ ಮಾಧ್ಯಮದವರಿಗೆ ಈ ಯಾತ್ರೆ ವರದಿ ದೃಷ್ಟಿಯಿಂದ ಹೊಸತೊಂದು ಸವಾಲು ನೀಡಿದ್ದು, ನಮ್ಮ ಪತ್ರಕರ್ತ ಮಿತ್ರ ಕಾರಂತರಂತೂ ಪ್ರತೀ ದಿನದ ಯಾತ್ರೆಯನ್ನು ಸ್ವಯಂ ನೋಡಿ ಅನುಭವಿಸುತ್ತಾ ಕನ್ನಡ ಪ್ರಭ, ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ವಿಶೇಷ ವರದಿ ಸಲ್ಲಿಸುತ್ತಿದ್ದರು. ಇದನ್ನು ವಿಶೇಷವಾಗಿ ದಾಖಲಿಸಲು ದೂರದರ್ಶನದ 'ಸುರಭಿ' ತಂಡ ಬಂದಿದ್ದರೂ, ಈ ನಿಟ್ಟಿನಲ್ಲಿ ಅಷ್ಟೇನೂ ನಿಷ್ಟೆಯಿಂದ ಕೆಲಸ ಮಾಡಿದಂತೆ ಕಾಣಲಿಲ್ಲ. ಇಡೀ ಶೋಧಯಾತ್ರೆಯಲ್ಲಿ ಸೇರಿ ಸಂಪೂರ್ಣ ಅನುಭವಿಸಬೇಕೆಂಬ ತೀರ್ಮಾನದಿಂದ ನಾನಂತೂ ಪೋಟೋ, ದಾಖಲಾತಿಗಳ ರಗಳೆಗೇ ಇಳಿಯಲಿಲ್ಲ. ಆದಾಗ್ಯೂ, ಕಾರ್ಯಕ್ರಮಗಳ ಉಸ್ತುವಾರಿ, ಯಾತ್ರಿಗಳ ಊಟ ತಿಂಡಿ, ನಿದ್ರೆ ವಿಚಾರವಾಗಿ ಆಗಾಗ ತಲೆ ಕೆಡಿಸಿಕೊಳ್ಳಬೇಕಾಗಿ ಬಂದಿದ್ದರಿಂದ ನನ್ನ ಈ ಪೂರ್ಣಾನುಭವ ವ್ರತಕ್ಕೆ ಭಂಗ ಬರುತ್ತಲೇ ಇತ್ತು. ಪ್ರೊಫೆಸರ್ ಅಂತೂ ಯಾತ್ರಾಧಿಪತ್ಯದ ಹೊಣೆಗಾರಿಕೆಯ ನಡುವೆಯೆ ಮೆತ್ತಗೆ, ತಮ್ಮ ಡಿಜಿಟಲ್ ಕ್ಯಾಮಾರದ ಮೂಲಕ ವ್ಯಕ್ತಿ, ಸ್ಥಳ, ಘಟನೆಗಳೆಲ್ಲವನ್ನು ಸೆರೆ ಹಿಡಿಯುತ್ತಲೆ, ಅವಧಾನಿಗಳಂತೆ ಬೇರೆಲ್ಲಾ ಜವಾಬ್ದಾರಿಗಳನ್ನೂ ನಿಭಾಯಿಸುತ್ತಾ ಹೆಜ್ಜೆ ಹಾಕುತ್ತಿದ್ದರು.

ವ್ಯಕ್ತಿ, ದೃಶ್ಯ ಮತ್ತು ಘಟನೆಗಳು



ಹೀಗೆ ಹಾದ ಸ್ಥಳಗಳು, ಸನ್ಮಾನಿಸಿದ ವ್ಯಕ್ತಿಗಳು, ಕಂಡನುಭವಿಸಿದ ದೃಶ್ಯ ಘಟನೆಗಳಲ್ಲಿ ಯಾವುದು ಹೆಚ್ಚು ಯಾವುದು ಕಡಿಮೆ ಎಂದು ತೀರ್ಮಾನಿಸುವುದು ಮೂರ್ಖತನ ವಾದೀತು. ಆದರೂ ಕೂಡ, ಹರಿವ ತುಂಬು ನದಿಯಿಂದ ಬೊಗಸೆಯಷ್ಟು ನೀರಾರಿಸಿ ಕೊಳ್ಳುವಂತೆ, ಕೆಲವು ಮಾತ್ರ ವಿಶೇಷವಾಗಿ ಮನದಾಳದಲ್ಲಿ ನಿಲ್ಲುವಂತಹವಾಗಿರುತ್ತವೆ.

ಸನ್ಮಾನಿತರಲ್ಲಿ ಗಾರೆ ವೃತ್ತಿಯ ದಿಟ್ಟ ಮಹಿಳೆ ಲೋಕನಾಥಪುರದ ಸೀತಾಲಕ್ಷ್ಮಿ, ಘಟನೆಗಳಾಧರಿತ ಪತ್ರಿಕಾವರದಿಗಳ ಸಂಕಲನಕಾರ ಜಯಪುರದ ಶೇಷಗಿರಿ, ನಿಸ್ವಾರ್ಥ ಶಿಕ್ಷಕ ಇಜ್ಜುವಾಸು, ಹೆಗ್ಗ ಬತ್ತದ ಸಂರಕ್ಷಕ ಗುಡ್ಡೆ ಕೊಪ್ಪದ ರವೀಂದ್ರ, ಹುಚ್ಚು ನಾಯಿ ರೋಗ ಹರಡುವುದನ್ನು ತಡೆಯುವ ರಾಮಕೃಷ್ಣಾಚಾರಿ, ಅನಕ್ಷರಸ್ತನಾಗಿಯೂ ಎಲ್ಲ ಎಲೆಕ್ಟ್ರಾನಿಕ್ ಉಪಕರಣಗಳ ರಿಪೇರಿ ಮಾಡುವ ಉರುಗುಡಿಗೆ ಮಂಜಯ್ಯ, ಅಂಗವೈಕಲ್ಯವಿದ್ದರೂ ಆತ್ಮವಿಶ್ವಾಸದಿಂದ ದುಡಿದು ಅಡಿಕೆ ತೋಟ ಮಾಡಿರುವ ಹರಿಜನ ಬಾಲಕ ಅಗರವಳ್ಳಿ ಶ್ರೀನಿವಾಸ್, ಕೈಯನ್ನೇ ಕಾಲಾಗಿಸಿ ಮಗನನ್ನು ಕೂಲಿ ಮಾಡಿ ಸಾಕಿ ಬೆಳೆಸಿದ ಬೆಳವಿನ ಕುಡಿಗೆ ಚೆನ್ನಮ್ಮ, ಜಾನುವಾರು ಮೂಳೆ ಚಿಕಿತ್ಸಕ ಕೋಟೆ ತೋಟದ ತಿಮ್ಮಪ್ಪ ಹೆಗಡೆ, ಅಡಿಕೆಯಿಂದ ಔಷಧೀಯ ಲಘು ಪಾನೀಯ ತಯಾರಿಸಿರುವ ಶೃಂಗೇರಿಯ ವಾಸುದೇವ ಉರಾಳ್, ಘಟಸರ್ಪಗಳನ್ನು ಹಿಡಿದು ಮಣಿಸುವ ಶೃಂಗೇರಿಯ ಕೆಂಚಣ್ಣ, ಅಡಿಕೆ ಸುಲಿಯುವ ಯಂತ್ರದ ಶೋಧಕ ಹೆಗ್ಗದ್ದೆ ಕೃಷ್ಣಮೂರ್ತಿ ಭಟ್, ಸೀಮೆ ಸುಣ್ಣದ ಕಲಾಕಾರ ಹುಲುಗಾರು ಮಹೇಶ, ಸ್ಪರ್ಶಮಾತ್ರದಿಂದ ಬೇರು ಹುಳದ ದುಂಬಿಯ ಲಿಂಗ ನಿರ್ಧರಿಸುವ ಬೇಗಾನೆಯ ಕೃಷ್ಣಮೊಯಿಲಿ ಮತ್ತು ಶತಾಯುಷಿ ಮಹಿಳೆಯರಾದ ಅಗಳಗಂಡಿ ಚೀರಮ್ಮ, ತೆಂಗಿನ ಮನೆ ಪುಟ್ಟಹುಡುಗಿ, ಕಮ್ಮರಡಿ ಅಕ್ಕಮ್ಮ ಗಮನ ಸೆಳೆದಿರುವಂತಹವರು. ಹಾಗೇ ಇಬ್ಬರು ನಾಟೀ ಕೀಟ (ಬೇರು ಹುಳದ ಬಗ್ಗೆ) ಶಾಸ್ತ್ರಜ್ಞ ರಾದ ಅಗಲಿ ನಾಗೇಶ್ ಮತ್ತು ಬೇಗಾನೆ ಕಾಡಪ್ಪನವರು ಈ ನಿಟ್ಟಿನಲ್ಲಿ ನೆಡೆಸುತ್ತಿರುವ ತರಬೇತಿ ಮತ್ತು ವಿಸ್ತರಣಾ ಕಾರ್ಯ, ಅಪಘಾತದಲ್ಲಿ ಸೊಂಟದ ಕೆಳಗಿನ ಸಂಪೂರ್ಣ ಸ್ವಾಧೀನ ಕಳೆದುಕೊಂಡಿದ್ದರೂ ಮಾನಸಿಕ ಸ್ಥಿರತೆಯಿಂದ ಹುಲುಗಾರಿನ ಚಂದ್ರಶೇಖರ್ ಸಹಜವಾಗಿ ಬದುಕುತ್ತಿರುವ ರೀತಿ ಮತ್ತು ನೀರಿನ ಬವಣೆ ನಿವಾರಣೆಗಾಗಿ ಸ್ವಯಂ ತಾವೇ ಬಾವಿ ತೋಡಿ ಯಶಸ್ವಿಯಾಗಿರುವ ಹರಿಹರಪುರದ ಬಡ ಚಾಂದ್ ಹುಸೇನ್ ದಂಪತಿಗಳ ಸ್ಥೈರ್ಯ ವಿಶೇಷವಾಗಿ ಗಮನ ಸೆಳೆಯುವಂತಾಯ್ತು. ಸಾಮೂಹಿಕ ಪ್ರಯತ್ನದಲ್ಲಿ ವಿಶ್ವ ತೀರ್ಥ ಬಾಲಿಕಾ ಪ್ರೌಢಶಾಲೆಯ ಅಧ್ಯಾಪಕರ ಪ್ರತಿಫಲಾಪೇಕ್ಷರಹಿತ ಸೇವೆ, ನಾಟೀ ಬತ್ತದ ತಳಿಗಳನ್ನುಳಿಸುತ್ತಿರುವ ಚಕ್ಕೋಡು ಬೈಲಿನ 'ಪುನರ್ನವ ಬೀಜ ನಿಧಿ ಕೇಂದ್ರ' ಎಲ್ಲಕ್ಕಿಂತ ಮಿಗಿಲಾಗಿ ಸಹಕಾರವನ್ನು ಅರ್ಥಪೂರ್ಣವಾಗಿ ಸಾಕಾರಗೊಳಿಸಿದ ಕೊಪ್ಪದ 'ಸಾರಿಗೆ ಸಹಕಾರ' ನೌಕರರ ಸಾಧನೆ ಎಲ್ಲರ ಕಣ್ಣು ತೆರೆಸುವಂತೆ ಮಾಡಿರುವುದರಲ್ಲಿ ಸಂಶಯವಿರದು.

ಸನ್ಮಾನಿತರಲ್ಲಿ ಸುಮಾರು ಅರ್ಧದಷ್ಟು ಮಂದಿ ನಾಟಿ ವೈದ್ಯರಾಗಿದ್ದು ಹಲವರು ಹುಚ್ಚು ನಾಯಿ ಕಡಿತಕ್ಕೆ, ಹಾವು ಕಡಿತಕ್ಕೆ ಹಾಗೆ ಸರ್ಪಸುತ್ತು (Herpis)ನಂತಹ ಕಾಯಿಲೆಗಳಿಗೆ ಗಿಡಮೂಲಿಕೆ, ಬೇರು, ಸಸ್ಯಗಳಿಂದ ಪರಿಣಾಮಕಾರಿ ಔಷಧಿ

ಕೊಡುವಂತಹವರಾಗಿರುತ್ತಾರೆ. ಇವರ ಸಸ್ಯ ಸಂಪತ್ತಿನ ಬಗೆಗಿನ ದೇಶೀಯ ಜ್ಞಾನ ಅಪಾರ. ಪಶ್ಚಿಮ ಘಟ್ಟದ ಮಲೆನಾಡ ಪ್ರಾಂತ್ಯ ಜೀವ ವಿವಿಧತೆಯ ತವರಾಗಿದ್ದು ಸಹಜವಾಗಿಯೇ ಈ ಸಂಪತ್ತಿನ ಆಧಾರದ ಮೇಲೆ ಇಲ್ಲಿನ ನಾಟೀ ವೈದ್ಯರು ಅಲೋಪತಿ ವೈದ್ಯ ಪದ್ಧತಿಯಲ್ಲಿ ಔಷಧಿ ಕಷ್ಟ ಸಾಧ್ಯವಾದ ಸಮಸ್ಯೆ ಮತ್ತು ಕಾಯಿಲೆಗಳಿಗೆ ಪರಿಹಾರ ಕೊಡಬಲ್ಲವರಾಗಿರುತ್ತಾರೆ. ಇನ್ನುಳಿದ ಪುರಸ್ಕೃತರು ಕಲಾವಿದರು, ಆದರ್ಶ ವ್ಯಕ್ತಿಗಳೂ, ದೀರ್ಘಾಯುಷಿಗಳೂ ಇತರೇ ಕ್ಷೇತ್ರಕ್ಕೆ ಸಂಬಂಧಿಸಿರುವವರಾಗಿರುತ್ತಾರೆ. ಇವರ ಸಾಧನೆಗಳು ನಮ್ಮ 'ಹಿತ್ತಲಗಿಡ', 'ಹನೀ ಬೀ ಜಾಲ' ಹಾಗೇ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ವ್ಯಾಖ್ಯೆಯ ವ್ಯಾಪ್ತಿಗೆ ಬರುವ 'ತಳಮಟ್ಟದ ಅನುಶೋಧನೆ' ಅಥವಾ 'ಪಾರಂಪರಿಕ ಜ್ಞಾನ' ಪ್ರಕಾರಗಳಿಗೆ ಬೀಳುವಂತಹದ್ದಲ್ಲದಿರಬಹುದು. ಆದರೆ, ಇಲ್ಲಿ ಸಾಮಾನ್ಯರಲ್ಲಿ ಹುದುಗಿರುವ ನಿಸ್ವಾರ್ಥತೆ, ಸೇವೆ, ಛಲ, ಧೈರ್ಯ, ಸಾಂಘಿಕ ಪ್ರಯತ್ನ ಹೀಗೆ ಉಚ್ಛ ಜೀವನ ಮೌಲ್ಯಗಳು ಅಡಕವಾಗಿದ್ದು ಇಂತಹಾ ವ್ಯಕ್ತಿಗಳು ಗ್ರಾಮೀಣ ಬದುಕು ಹಸನಾಗಿರಲು ವಿಶೇಷ ಕಾಣ್ಕೆ ನೀಡುತ್ತಿರುವುದರಿಂದ ಇವರನ್ನೂ ಹುಡುಕಿ ಪುರಸ್ಕರಿಸಲು ತೀರ್ಮಾನಿಸಲಾಯಿತು. ಇದು ಪ್ರೊಫೆಸರ್ ಗುಪ್ತಾರ ಶೋಧಯಾತ್ರೆ ಪ್ರಯೋಗಕ್ಕೊಂದು ಹೊಸ ಆಯಾಮ ಒದಗಿಸಿರುತ್ತದೆ.


ಈ ವ್ಯಕ್ತಿಗಳ ರೀತಿಯಲ್ಲೇ ಹಲವಾರು ಸ್ಥಳ, ಕಾರ್ಯಕ್ರಮ ಮತ್ತು ಘಟನೆಗಳೂ ಪ್ರಮುಖವಾಗಿರುತ್ತವೆ. ಮೊದಲ ದಿನ ಸಂಜೆ ಕೋಟೇ ತೋಟದ ಸಮೀಪದ ಬೆಟ್ಟ ಏರಿ ಕಲ್ಲು ಗೋಪುರದ ಮೂಲಕ ರಮಣೀಯ ಸೂರ್ಯಾಸ್ತ ವೀಕ್ಷಣೆ, ನಂತರ ರಾತ್ರಿಯಲ್ಲಿ ದಾರಿ ತಪ್ಪಿಸಿಕೊಂಡಿದ್ದು, ಹಿರೇಹಳ್ಳಿಯಲ್ಲಿ ರಾತ್ರಿ ನಡೆಸಿದ ಕರಡಿ ನೃತ್ಯ, ಅಗಳಗಂಡಿ ಮತ್ತು ಕಡ್ತೂರಿನ ಶಾಲಾಮಕ್ಕಳು ಆಯೋಜಿಸಿದ್ದ ಜೀವ ವೈವಿಧ್ಯ ಸಂಗ್ರಹ, ಬೆಳವಿನ ಕುಡಿಗೆಯಲ್ಲಿ ಸಂಜೆ ಗ್ರಾಮಸ್ಥರು ತಾಳ ಮದ್ದಳೆಗಳಿಂದ ಶೋಧಯಾತ್ರೆಗಳನ್ನು ಸ್ವಾಗತಿಸಿದ ರೀತಿ, ಅದೇ ರೀತಿ ಕಮ್ಮರಡಿ ಶಾಲಾಮಕ್ಕಳು ಕವಾಯಿತಿ ಮೂಲಕ ಬರಮಾಡಿಕೊಂಡಿದ್ದು, ಬೆಳುವಿನ ಕುಡಿಗೆ, ಕಮ್ಮರಡಿ ಮತ್ತು ಸಸಿಮನೆಯಲ್ಲಿ ಏರ್ಪಡಿಸಿದ್ದ ಮಲೆನಾಡ ವಿಶೇಷ ತಿಂಡಿ ತಿನಿಸುಗಳ ಅಡಿಗೆ ಸ್ಪರ್ಧೆಗಳು, ಮಾವಿನ ಕಟ್ಟೆಯ ಯುವಕರು ಮೈನವಿರೇಳುವ ರೀತಿಯಲ್ಲಿ ನಡೆಸಿದ ಬೆಂಕಿ ಉರಿಯುವ ಕೋಲಿನ ಆಟ, ಹಾಗೇ ಹಾಲ್ಮುತ್ತೂರಿನಲ್ಲಿ ರಾತ್ರಿ ಮೈದಾನದಲ್ಲಿ ಧಗ ಧಗ ಉರಿಯುವ ಬೆಂಕಿ ನಡುವೆ ನಡೆಸಿದ ಸಭೆ ಮತ್ತು ಅಲ್ಲಿನ ಗ್ರಾಮಸ್ಥರು ಪರಿಚಯಿಸಿದ ಅಂಟಿಗೆ ಪಂಟಿಗೆ ಪದ್ಯ, ಹರಿಹರಪುರದಲ್ಲಿ ಮಹಿಳೆಯರು ಸುಮಾರು 2 ಕಿ.ಮಿ. ದೂರದಷ್ಟು ರಸ್ತೆ ಸಾರಿಸಿ 106 ರಂಗೋಲಿ ಹಾಕಿ ಶೋಧಯಾತ್ರಿಗಳನ್ನು ಪೂರ್ಣಕುಂಭದ ಮೂಲಕ ಸ್ವಾಗತಿಸಿದ ರೀತಿ, ಅಲ್ಲಿ ತುಂಗಾ ನದಿಯ ತೂಗಾಡುವ ಸೇತುವೆ ದಾಟಿದ್ದು, ಜಂಬಿಟಿಗೆಯಲ್ಲಿ ದೇವಸ್ಥಾನದ ಅದ್ಭುತ ಕೆತ್ತನೆ ಇವೆಲ್ಲಕ್ಕಿಂತ ಮುಖ್ಯವಾಗಿ, ಯಾತ್ರಾರ್ಥಿಗಳಿಗೆ ಡಿಸೆಂಬರ್ 27ರ ಸಂಜೆ ಶೃಂಗೇರಿ ಶ್ರೀ ಭಾರತೀ ತೀರ್ಥ ಸ್ವಾಮಿಯವರ ದರ್ಶನ ದೊರೆತಿದ್ದು ಬಹಳ ಕಾಲ ನೆನಪುಳಿಯುವಂತಹವು. ಹಾಗೇ ಶೃಂಗೇರಿಯಲ್ಲಿ ಕೆಂಚಣ್ಣ ಸನ್ಮಾನಕ್ಕೆ ಕೆಲವೇ ಗಂಟೆಗಳ ಮೊದಲು ಹಿಡಿದಿದ್ದ 16 ಅಡಿಗಳ ಭೀಕರ ಘಟ ಕಾಳಿಂಗ ಸರ್ಪವನ್ನು ಚೀಲದಿಂದ ನಿಧಾನವಾಗಿ ಎಳೆದು ಪ್ರದರ್ಶನ ಮಾಡಿದ್ದಂತೂ ಒಮ್ಮೆ ಯಾತ್ರಿಗಳ ಹೃದಯ ಬಡಿತವನ್ನೇ ನಿಲ್ಲುವಂತೆ ಮಾಡಿತು. ಹುಲುಗಾರಿನ ಚಂದ್ರಶೇಖರ್ ಪೌರಾಣಿಕ ಮಹತ್ವದ ಸೀತಾ ದೀಪದ *(Linociera malabarica)* ಎಲೆಯನ್ನು ದೀಪ ಹಚ್ಚಿ ಉರಿಸಿದ್ದಂತೂ ಯಾತ್ರಿಗಳ ಆಶ್ಚರ್ಯಕ್ಕೆ ಎಡೆಯೇ ಇಲ್ಲದಂತೆ ಮಾಡಿರುತ್ತದೆ. ಇವೆಲ್ಲಕ್ಕಿಂತ ಮಿಗಿಲಾಗಿ, ಭೋಜನದ ವಿಚಾರದಲ್ಲಿ ಕೋಟೆ ತೋಟ, ಬೆಳುವಿನಕುಡಿಗೆ, ಸಸಿಮನೆ, ಅಗಲಿ, ಕಮ್ಮರಡಿ, ಹಾಲ್ಮುತ್ತೂರು ಮತ್ತಿತರೆಡೆ ನೀಡಿದ ಸತ್ಕಾರ, ತಿನಿಸಿದ ಊಟ, ಅಡಿಗೆಗಳು ಶೋಧಯಾತ್ರಿಗಳನ್ನು ಬಹಳ ಕಾಲ ಮೆಲುಕು ಹಾಕುವಂತೆ ಮಾಡಿರುತ್ತದೆ.

ಶೋಧಯಾತ್ರೆ ಸಾಧಿಸಿದ್ದೇನು?

ಈ ಮೇಲೆ ತಿಳಿಸಿದ ವಿಚಾರಗಳ ಮೂಲಕ 12ನೇ ಶೋಧಯತ್ರೆಯ ಹೊರ ದರ್ಶನವಾದರೆ, ಇದರ ಒಳ ದರ್ಶನದತ್ತವೂ ಮುಖ ಮಾಡುವುದು ಅಗತ್ಯವಾಗಿರುತ್ತದೆ. ಈ ಏಳೂ ದಿನಗಳಲ್ಲಿ ಯಾತ್ರೆ ಹೋದೆಡೆಯಲ್ಲೆಲ್ಲ ಜನ ಹೊಸ ಭರವಸೆ ಮತ್ತೆ ನಿರೀಕ್ಷೆಯಿಂದ ಎದುರು ನೋಡುತ್ತಿದ್ದುದನ್ನು ಮಾತ್ರ ನಾವು ಮರೆ ಮಾಚುವಂತಿಲ್ಲ. ಮಲೆನಾಡಿನ ಜೀವನ ಪಶ್ಚಿಮ ಘಟ್ಟದ ಪರಿಸರ, ಜೀವ ವಿವಿಧತೆಯ ಜೊತೆಗೆ ಅಡಿಕೆ ಆಧಾರಿತ ಆರ್ಥಿಕತೆ ಮತ್ತು ತನ್ನದೇ ಆದ ವಿಶಿಷ್ಠ ಸಂಸ್ಕೃತಿಗಳ ನಡುವೆ ತಳುಕು ಹಾಕಿಕೊಂಡಿರುತ್ತದೆ. ಜಾಗತೀಕರಣದ ಬಿರುಗಾಳಿಗೆ ಸಿಕ್ಕ ದೇಶೀಯ ಸಂಸ್ಕೃತಿಗಳು ಎಲ್ಲೆಡೆ ಅಲುಗಾಡುತ್ತಿವೆ. ಇದಕ್ಕೆ ಮಲೆನಾಡ ಸಂಸ್ಕೃತಿ ಅಪವಾದವಲ್ಲ. ಇಲ್ಲಿನ ಆರ್ಥಿಕತೆಯ ಬೆನ್ನೆಲುಬಾಗಿರುವ ಅಡಿಕೆ, ಕಾಫಿ ಬೆಳೆಗಳೂ ಇಂದು ತೀವ್ರ ಸಂಕಷ್ಟಕ್ಕೆ ಒಳಗಾಗಿವೆ. ಬೇರು ಹುಳ, ಹಳದಿ ರೋಗಗಳ ಕಾಟ, ಬೆಲೆ ಇಳಿತ ಮುಖ್ಯವಾಗಿ ಗುಟ್ಕಾದಂತಹ ಮೌಲ್ಯವರ್ಧಿತ ಉತ್ಪನ್ನಗಳ ನಿಷೇಧದ ಪರಿಣಾಮವಾಗಿ ಅಡಿಕೆ ಕೃಷಿಯಂತೂ ಇಂದು ನೆಲ ಕಚ್ಚುವಂತಾಗಿದೆ. ಪರಿಸರ ಮತ್ತು ಜೀವ ವಿವಿಧತೆ ನಾಶ ಜಗತ್ತಿನಾದ್ಯಂತ ಜರುಗುತ್ತಿದ್ದರೆ ಇದು ಪಶ್ಚಿಮ ಘಟ್ಟದಲ್ಲಿ ಗಂಭೀರ ರೂಪ ತಳೆಯುತ್ತಿದೆ ಎನ್ನಬಹುದು. ಇದರ ಸಾಂಕೇತಿಕ ದರ್ಶನ ಅಲ್ಲಲ್ಲಿ ಪ್ಲಾಸ್ಟಿಕ್ ಚೀಲ, ಗುಟ್ಕಾ ಪ್ಯಾಕೆಟ್, ನೀಲಗಿರಿ, ಅಕೇಶಿಯಾದಂತಹಾ ಏಕತಳಿಯ ಕಾಡುಗಳ ಮೂಲಕ ಯಾತ್ರಾರ್ಥಿಗಳಿಗಾಗುತ್ತಲೇ ಇತ್ತು. ಈ ಎಲ್ಲಾ ನಿಟ್ಟಿನಿಂದ, ಮಲೆನಾಡ ಜನರಲ್ಲಿ ಈ ಶೋಧಯಾತ್ರೆಯಿಂದ ಕೆಲ ನಿರೀಕ್ಷೆ ಮತ್ತು ಭರವಸೆಗಳು ಮೂಡುವಂತಾಗಿದ್ದರೆ ಅದು ಸಹಜವೇ ಆಗಿರುತ್ತದೆ. ಈ ದೃಷ್ಟಿಯಿಂದ ಕೆಳಗಿನ ಕನಿಷ್ಠ ಕಾರ್ಯಕ್ರಮಗಳತ್ತ ಗಮನ ಹರಿಸುವುದು ಸೂಕ್ತವಾಗಿರುತ್ತದೆ.

1) ಈ ಶೋಧಯಾತ್ರೆಯಲ್ಲಿ ಸನ್ಮಾನಿತರಾದವರಲ್ಲಿ ಬಹುಪಾಲು ಮಂದಿ ನಾಟಿ ವೈದ್ಯರಾಗಿದ್ದು ಇವರ ದೇಶೀಯ ಜ್ಞಾನ ಮತ್ತು ಈ ಜ್ಞಾನ ಅವಲಂಬಿತವಾಗಿರುವ ಸಸ್ಯ, ಬೇರು, ಗಿಡ ಮೂಲಿಕೆಗಳ 'ಜೀವ ವೈವಿದ್ಯ'ವನ್ನು ಉಳಿಸಿ ಗಟ್ಟಿ ಮಾಡುವುದು ಈಗ ಅಗತ್ಯವಾಗಿರುತ್ತದೆ. ಈ ಮೂಲಕ ಈ ಬಡ ಜನರಿಗೆ ಸ್ವಲ್ಪ ಪ್ರತಿಫಲ ದೊರಕಿ ಅವರ ಜೀವನ ಭದ್ರತೆಯನ್ನು ಗಟ್ಟಿ ಮಾಡುವ ಸಾಧ್ಯತೆಯಿರುತ್ತದೆ. ಇಲ್ಲಿ ಈ ನಾಟೀ ವೈದ್ಯರ ಔಷಧಿ ಪ್ರಕಾರಗಳ ಮೌಲ್ಯವರ್ಧನೆ, ವಾಣಿಜ್ಯೀಕರಣಗಳಿಂದ ಹಿಡಿದು ಈ ಬಗ್ಗೆ 'ಬೌದ್ಧಿಕ ಸನದಿನ ಹಕ್ಕಿ'ನ (Intellectual Property Rights) ವಿಚಾರಗಳೂ ಅಡಕವಾಗಿರುತ್ತದೆ. ಪ್ರೊಫೆಸರ್ ಗುಪ್ತಾರ ನೇತೃತ್ವದ 'ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ' ಈ ನಿಟ್ಟಿನಲ್ಲಿ "ಗ್ಯಾನ್" (ತಳಮಟ್ಟದ ಅನುಶೋಧನೆಗಳ ಅಭಿವೃದ್ಧಿ ಜಾಲ) (GIAN - Gross Roots Innovation Augmentation Network)ದ ಒಂದು 'ಸಾಂಸ್ಥಿಕ' ಪರಿಕಲ್ಪನೆಯನ್ನು ಮುಂದಿಟ್ಟಿರುತ್ತದೆ. ಇಂತಹದ್ದೊಂದು ಪ್ರತ್ಯೇಕ 'ಗ್ಯಾನ್' ಸಂಸ್ಥೆಯನ್ನು ನಮ್ಮ ಪಶ್ಚಿಮ ಘಟ್ಟದ ಆಶ್ರಯದಲ್ಲಿ ಸೇವೆ ಸಲ್ಲಿಸುತ್ತಿರುವ ನಾಟಿ ವೈದ್ಯರಿಗಾಗಿಯೇ ವಿಶೇಷವಾಗಿ ಸ್ಥಾಪಿಸುವತ್ತ ಅವಶ್ಯಕವಾಗಿ ಚಿಂತಿಸಬೇಕಾಗಿದೆ.

2) ಪಶ್ಚಿಮ ಘಟ್ಟದಾದ್ಯಂತ ರೈತರ ಹೊಲಗಳಲ್ಲಿ ಹೆಗ್ಗಬತ್ತದಂತಹ ನೂರಾರು ನಾಟೀ ತಳಿಗಳು, ಹಾಗೇ ಮನೆ ಮನೆಗಳ ಹಿತ್ತಲುಗಳಲ್ಲಿ ತರಕಾರಿ, ಹೂವು, ಹಣ್ಣು



ಶೇಷಗಿರಿಯವರ ಶೋಧಯಾತ್ರೆಯ ಪತ್ರಿಕಾ ಸಂಕಲನ

ಮತ್ತು ಔಷಧಿ ಸಸ್ಯಗಳ ತಳಿ ವೈವಿಧ್ಯ (agrobiodiversity) ಅಲ್ಲಲ್ಲಿ ಇನ್ನೂ ಉಳಿದಿರುತ್ತದೆ. ಇವುಗಳನ್ನು ಉಳಿಸಿ ಮತ್ತಷ್ಟು ಬೆಳೆಸಲು ತುರ್ತು ಕ್ರಮಗಳು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಚಕ್ಕೋಡ ಬೈಲಿನ "ಪುನರ್ನವ ಬೀಜ ನಿಧಿ ಕೇಂದ್ರ" ಬತ್ತದ ತಳಿ ಉಳಿಸುವತ್ತ ಪ್ರಯತ್ನ ನಡೆಸುತ್ತಿದೆ. ಈ ರೀತಿ ತಳಿ ವೈವಿಧ್ಯದ ಸಂರಕ್ಷಣೆಯನ್ನು ಆಹಾರ ಭದ್ರತೆ (Food Security) ಮತ್ತು ರುಚಿ, ಆರೋಗ್ಯ, ಅಡಿಗೆ ದೃಷ್ಟಿಕೋನಗಳಿಂದ 'ಪೌಷ್ಠಿಕಾಂಶತೆ' ಭದ್ರತೆ (Nutritional Security)ಗಳನ್ನೆಲ್ಲಾ ಗಟ್ಟಿ ಮಾಡುವ ದೃಷ್ಟಿಯಿಂದಲೂ ನೋಡಬೇಕಾಗಿದೆ. ಇದಕ್ಕಾಗಿ ನಮ್ಮ 'ಗ್ರೀನ್ ಫೌಂಡೇಷನ್' ಮುಖ್ಯಸ್ಥರಾದ ಶ್ರೀಮತಿ ವನಜಾ ರಾಂಪ್ರಸಾದ್ ಅಲ್ಲಲ್ಲಿ ತಳಿ ನಿಧಿ (Gene Banks)ಗಳನ್ನು ಸ್ಥಾಪಿಸಿದ್ದರೆ' ಹೈದರಾಬಾದಿನ 'ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿ'ಯ ಮಿತ್ರ ಸತೀಶ್‌ರವರು ಕಾಳು ನಿಧಿ (Grain Bank) ಸ್ಥಾಪಿಸಿ ಪ್ರಯೋಗ ನಡೆಸುತ್ತಿರುವರು. ಈ ಎಲ್ಲವುಗಳ ಅನುಭವದ ಆಧಾರದ ಮೇಲೆ, ಮಲೆನಾಡಿನ ಹೊಲ ಮತ್ತು ಹಿತ್ತಲುಗಳಲ್ಲಿರುವ ವಿಶಿಷ್ಠ ತಳಿಗಳನ್ನುಳಿಸುವ ಕಾರ್ಯ ಇಂದು ತಕ್ಷಣಾ ಪ್ರಾರಂಭ ಆಗಬೇಕಾಗಿದೆ. ಶೋಧಯಾತ್ರೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ ವಿ.ಗ್ರಾಂ. ಸಂಘದಂತಹ ಸಂಘ ಸಂಸ್ಥೆಗಳು ಈ ಕಾರ್ಯವನ್ನು ಅವಶ್ಯಕವಾಗಿ ಕೈಗೆತ್ತಿಕೊಳ್ಳಬಹುದು.

3) ಹಾಗೇ ಪಶ್ಚಿಮ ಘಟ್ಟದಾದ್ಯಂತ ಊರು, ಹೊಲ, ಅರಣ್ಯ, ನದಿ ನೀರುಗಳಲ್ಲಿ ಅಳಿದುಳಿದಿರುವ ಸಸ್ಯ, ಪ್ರಾಣಿ, ಪಶು ಪಕ್ಷಿಗಳ ವೈವಿಧ್ಯವನ್ನು ವ್ಯವಸ್ಥಿತ ರೀತಿಯಲ್ಲಿ ದಾಖಲಿಸಿ ಸಂರಕ್ಷಿಸಬೇಕಾಗಿದೆ. ಈ ನಿಟ್ಟಿನಲ್ಲಿ "ಜನತಾ ಜೀವ ವೈವಿಧ್ಯ ದಾಖಲಾತಿ" (People Bio-diversity Registry) ಪ್ರಯೋಗಗಳು ಇಂದು ವಿವಿಧೆಡೆ ದೇಶದಾದ್ಯಂತ ನಡೆಯುತ್ತಿದೆ. ಆದರೆ, ಈ ಸಂಪತ್ತಿನ ಮೇಲಿನ ಸ್ಥಳೀಯರ ಹಕ್ಕನ್ನು ಗಟ್ಟಿ ಮಾಡಿ ಅವರಿಗೆ ಪ್ರತಿಫಲ ದೊರಕುವ ವಿಚಾರವಾಗಿ ಇದರಲ್ಲಿ ಕೊರತೆ ಇದೆ ಎಂಬ ಟೀಕೆ ಕೇಳಿ ಬರುತ್ತಿದೆ. ಇವೆಲ್ಲವನ್ನೂ ಸರಿಪಡಿಸಿ, ಮಲೆನಾಡಿನಾದ್ಯಂತ ಅಳಿದುಳಿದಿರುವ ಜೀವ ವೈವಿಧ್ಯದ ವ್ಯವಸ್ಥಿತ ರೀತಿಯ ದಾಖಲಾತಿ ನಡೆಸಬೇಕಾಗಿದೆ. ಈ ಕಾರ್ಯಕ್ಕೆ ಆಯಾ ಪ್ರದೇಶದ ಪಂಚಾಯ್ತ್ ರಾಜ್ ಸಂಸ್ಥೆಗಳು ಸ್ವಯಂ ಸೇವಾ ಸಂಸ್ಥೆಗಳೊಡನೆ ಕೈಜೋಡಿಸಿ ಮುಂದೆ ಬರಬೇಕಾಗಿದೆ.

4) ಜೀವ ವಿವಿಧತೆ ಮತ್ತು ಪರಿಸರ ಉಳಿಯಬೇಕಾದಲ್ಲಿ ಈ ಬಗ್ಗೆ ಎಳೆಯರಲ್ಲಿ ಕುತೂಹಲ, ಆಸಕ್ತಿ, ಶ್ರದ್ಧೆಗಳು ಅತ್ಯಗತ್ಯವಾಗಿದೆ. ಶಾಲಾ ಮಕ್ಕಳಲ್ಲಿ ಜೀವ ವೈವಿಧ್ಯದ ಬಗ್ಗೆ ಸ್ಪರ್ಧೆ, ಸಭೆ, ಸಮಾರಂಭಗಳನ್ನೇರ್ಪಡಿಸುವುದು ಅತ್ಯಂತ ಸೂಕ್ತ ಕ್ರಮವಾಗಿರುತ್ತದೆ. ಈಗ್ಗೆ ಕೆಲ ವರ್ಷಗಳ ಹಿಂದೆ 'ಹಿತ್ತಲಗಿಡ' ಕಮ್ಮರಡಿಯ ಸುತ್ತ ಮುತ್ತಲಿನ ಪ್ರೌಢ ಶಾಲೆ ಮಕ್ಕಳಿಗೆ ಇಂತಹದ್ದೊಂದು ಸ್ಪರ್ಧೆ ಏರ್ಪಡಿಸಿತ್ತು. ಈ 12ನೇ ಶೋಧಯಾತ್ರೆಯಲ್ಲೂ ಈ ಪ್ರಯತ್ನ ಕೆಲವು ಶಾಲೆಗಳಲ್ಲಿ ನಡೆಸಲಾಗಿತ್ತು. ಇದು ವ್ಯವಸ್ಥಿತ ರೀತಿಯಲ್ಲಿ ಮಲೆನಾಡಿನ ಪ್ರತೀ ಶಾಲೆಗಳಲ್ಲೂ ನಡೆದು, ಈ ಮೂಲಕವೂ ಜೀವ ವೈವಿಧ್ಯದ ದಾಖಲಾತಿಯ ಪ್ರಯತ್ನ ನಡೆಸಬಹುದಾಗಿದೆ.

5) ಮಲೆನಾಡಿನ ಸಂಸ್ಕೃತಿಯ ಸತ್ವ ಅಡಗಿರುವುದು ಅಲ್ಲಿನ ಅಡಿಗೆ, ತಿಂಡಿ, ಭೋಜನಗಳ ಮೂಲಕ ನಡೆಸುವ ಸತ್ಕಾರದಲ್ಲಿ ಎನ್ನಬಹುದು. ಇದರ ಪ್ರತ್ಯಕ್ಷ ಅನುಭವ ಶೋಧಯಾತ್ರಿಗಳಿಗೆ ಸಂಪೂರ್ಣವಾಗಿ ಆಗಿರುತ್ತದೆ. ಇಲ್ಲಿನ ಹಣ್ಣು, ತರಕಾರಿ, ಕಾಯಿ, ಪಲ್ಯೆ, ಗಿಡ ಮೂಲಿಕೆಗಳನ್ನು ಬಳಸಿ ವಿಶಿಷ್ಠ ರೀತಿಯ ಅಡಿಗೆ, ತಿಂಡಿ ತಿನಿಸು, ಪಾನೀಯಗಳನ್ನು ತಯಾರಿಸುವ ಕಲೆ ಮಲೆನಾಡ ಮಹಿಳೆಯರಲ್ಲಿ ಈಗಲೂ ಉಳಿದಿರುತ್ತದೆ. ಈ ವಿಶಿಷ್ಠ ಆಹಾರಗಳ ತಿಂಡಿ, ತಿನಿಸು, ಪಾನೀಯ ದಾಖಲಾತಿಯೂ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಮಹಿಳೆಯರನ್ನು ಪ್ರೋತ್ಸಾಹಿಸುವತ್ತ ಶೃಂಗೇರಿ ಮತ್ತು ಕೊಪ್ಪದಂತಹ ಪಟ್ಟಣಗಳಲ್ಲಿ ಮಲೆನಾಡ ವಿಶಿಷ್ಠ ಆಹಾರದ ಮೇಳಗಳನ್ನು ಏರ್ಪಡಿಸಬೇಕಾಗಿದೆ. ನಮ್ಮ ಈ 12ನೇ ಶೋಧಯಾತ್ರೆಯಲ್ಲಿ ಕೈಜೋಡಿಸಿರುವ ರೋಟರಿ, ಲಯನ್ಸ್ ಮತ್ತು ಜೇಸಿಸ್ ನಂತಹ ಸಂಸ್ಥೆಗಳು ಈ ವಿಚಾರದ ಬಗ್ಗೆ ಗಮನ ಹರಿಸಬೇಕಾಗಿದೆ.

ಇವೆಲ್ಲಕ್ಕಿಂತ ಮುಖ್ಯವಾಗಿ ಇಷ್ಟೆಲ್ಲಾ ಭರವಸೆ, ನಿರೀಕ್ಷೆಗಳನ್ನು ಹುಟ್ಟು ಹಾಕಲು ಕಾರಣವಾಗಿರುವ ಶೋಧಯಾತ್ರೆ ಮಲೆನಾಡ ಮೂಲೆ ಮೂಲೆಗಳಲ್ಲಿ ಪ್ರತೀ ವರ್ಷವೂ ನಡೆಯಬೇಕೆನ್ನುವ ಬಲವಾದ ಅಭಿಪ್ರಾಯ 12ನೇ ಶೋಧಯಾತ್ರೆಯ ಸಂಘಟನೆಯಲ್ಲಿ ಭಾಗಿಯಾದ ಹಲವರಲ್ಲಿ ಎದ್ದಿರುತ್ತದೆ. ಈ ವಿಚಾರವನ್ನು ಕಾರಂತ್, ಚಿಕ್ಕೇಗೌಡ, ರಾಜಶೇಖರ್, ಭಂಡಾರಿ, ರತ್ನಾಕರ್ ಮೊದಲಾದವರು



ತೀವ್ರವಾಗಿ ಪರಿಗಣಿಸುತ್ತಿರುವರು. ಹೊರನಾಡ ಶ್ರೀ ಭೀಮೇಶ್ವರ ಜೋಶಿಯವರು ಮುಂದಿನ ಶೋಧಯಾತ್ರೆ ತಮ್ಮ ಕ್ಷೇತ್ರದಲ್ಲಿ ನಡೆಸಲು ಈಗಾಗಲೇ ಆಹ್ವಾನಿಸಿರುತ್ತಾರೆ. ಈ ವಿಚಾರಗಳೆಲ್ಲಾ ಸಾಕಾರಗೊಂಡು ಪ್ರತೀವರ್ಷವೂ ಕನಿಷ್ಟ ಒಂದು ವಾರದ ಶೋಧಯಾತ್ರೆ ಮಲೆನಾಡ ಮೂಲೆ ಮೂಲೆಗಳಲ್ಲಿ ನೆರವೇರಲಿ ಎಂದು ಹಾರೈಸುತ್ತೇವೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಸಹಕಾರ ಮತ್ತು ಮಾರ್ಗದರ್ಶನವನ್ನು ನೀಡಲು ಮಾತ್ರ 'ಹಿತ್ತಲಗಿಡ' ಎಂದೂ ಹಿಂಜರಿಯುವುದಿಲ್ಲ ಎಂಬ ಆಶ್ವಾಸನೆಯನ್ನೂ ಈ ಮೂಲಕ ನೀಡಲಾಗುತ್ತಿದೆ.

ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ

ಆಡಿನ ಕೂದಲಿನಿಂದ ಇಲಿ ನಿಯಂತ್ರಣ:

ಜೋಳ, ಭತ್ತ , ಗೋಧಿ ಹಾಗೂ ಇನ್ನಿತರ ನೀರಾವರಿ ಆಧಾರಿತ ಕೃಷಿ ಭೂಮಿಯಲ್ಲಿ ಇಲಿಗಳಿಂದ ಆಗುವ ಹಾನಿಯನ್ನು ನಿಯಂತ್ರಿಸಲು ಗುಜರಾತ್ ರಾಜ್ಯದ, ರಾಜಕೋಟೆ ಜಿಲ್ಲೆಯ ಉಡಾಳ ಎಂಬ ಹಳ್ಳಿಯ ಚಿನ್ನುಭಾಯಿ ಜಿವಾಭಾಯಿಯವರು ಒಂದು ಪರಿಹಾರ ಕಂಡುಕೊಂಡಿದ್ದಾರೆ. ಇವರು ಗೋಧಿ ಹಿಟ್ಟಿನ ಜೊತೆ ಬೆಲ್ಲ, ನೀರು ಮತ್ತು ಆಡಿನ ಕೂದಲನ್ನು ಸೇರಿಸಿ ಸಿಹಿ ಉಂಡೆಗಳನ್ನು ಮಡುತ್ತಾರೆ. ಈ ಉಂಡೆಗಳನ್ನು ಹೊಲದಲ್ಲಿ ಇಲಿಗಳು ಓಡಾಡುವ ಪ್ರದೇಶದಲ್ಲಿ ಇಡುತ್ತಾರೆ. ಈ ಉಂಡೆಗಳನ್ನು ತಿಂದ ಇಲಿಗಳು ಉಂಡೆಯಲ್ಲಿರುವ ಆಡಿನ ಕೂದಲಿನ ಪರಿಣಾಮದಿಂದ ಉಸಿರುಕಟ್ಟಿ ಸಾಯುತ್ತವೆಯಂತೆ.

ಮೂಲ: ಹನಿ ಬೀ, ಸಂಪುಟ 3, ಜುಲೈ – ಸೆಪ್ಟೆಂಬರ್ 2001

ಭತ್ತದ ಕಂದು ಜಿಗಿ ಹುಳುವಿನ ತಡೆಗೆ

ಭತ್ತದ ಗದ್ದೆಯಲ್ಲಿ ಕಾಣಿಸಿಕೊಳ್ಳುವ ಕಂದು ಜಿಗಿ ಹುಳುವನ್ನು ನಿಯಂತ್ರಿಸಲು ಪಶ್ಚಿಮ ಬಂಗಾಳದ ರೈತರಾದ ಕುಡಿರಾವ್ ಎಡ್ವರವರು ಪರಿಹಾರ ಕಂಡುಕೊಂಡಿದ್ದಾರೆ. ಇವರ ಅನುಭವದ ಪ್ರಕಾರ ಕೊಡಸಿಗನ ಮರದ *(Cleiptonthus collinup)* ಎಲೆಗಳನ್ನು ಗದ್ದೆಯಲ್ಲಿ ನೀರು ನಿಲ್ಲಿಸದೆ [ಎಕರೆಗೆ 9–12 ಕ್ವಿಂಟಾಲ್] ಹಾಕುವುದರಿಂದ ಕಂದು ಜಿಗಿಹುಳುಗಳನ್ನು ನಿಯಂತ್ರಿಸಬಹುದು. ಎಲೆಗಳನ್ನು ಹಾಕುವ ಮೂರುದಿನ ಮುಂಚಿನಿಂದ ಗದ್ದೆಗೆ ನೀರು ಬಿಡಬಾರದು. ಕೊಡಸಿಗನ ಮರದ ಕಾಡುಗಳ ಪಕ್ಕದಲ್ಲಿರುವ ಗದ್ದೆಗಳಲ್ಲಿ ಕಂದು ಜಿಗಿಹುಳದ ಬಾಧೆ ಕಡಿಮೆ ಇರುವುದರಿಂದ ಪಶ್ಚಿಮ ಬಂಗಾಳದ ಬಹಳಷ್ಟು ಜನ ರೈತರು ಈ ಪದ್ಧತಿಯನ್ನು ನಂಬಿ ಅನುಸರಿಸುತ್ತಾರೆ.

ಮೂಲ: ಹನಿ ಬೀ, ಸಂಪುಟ 3, ಜುಲೈ–ಸೆಪ್ಟೆಂಬರ್ 2001

ಗಿಡಗಳ ರೋಗ ಹತೋಟಿಯಲ್ಲಿ ದತ್ತೂರ

ಮೂರು ಕೆ.ಜಿ.ಯಷ್ಟು ದತ್ತೂರ (*Datura metal*) ಎಲೆಗಳನ್ನು 20 ಲೀ. ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿ 5 ಲೀಟರ್‌ನಷ್ಟು ದ್ರಾವಣ ಮಾಡಿಕೊಳ್ಳಬೇಕು. ಈ ದ್ರಾವಣವನ್ನು 150 ಮಿಲಿ ಲೀಟರ್‌ನಷ್ಟು ತೆಗೆದುಕೊಂಡು 15 ಲೀ. ನೀರಿನೊಂದಿಗೆ ಬೆರೆಸಿ ಬೆಳೆಗೆ ಸಿಂಪಡಿಸಬೇಕು. ಹೀಗೆ 45, 55, 65 ಮತ್ತು 75 ದಿನಗಳಿಗೊಮ್ಮೆ ಸಿಂಪಡಿಸುವುದರಿಂದ ಗಿಡಗಳಿಗೆ ಬ್ಯಾಕ್ಟೀರಿಯಾದಿಂದ ಬರುವ ರೋಗಗಳನ್ನು ತಡೆಗಟ್ಟಬಹುದೆಂಬುದು ಗುಜರಾತಿನ ಶ್ರೀ ಜಯಂತಿ ದನಂಜಬಾಯಿ ಪಟೇಲ್‌ರವರ ಅನುಭವ.

ಮೂಲ: ಹನಿ ಬೀ, ಸಂಪುಟ 3, ಸೆಪ್ಟೆಂಬರ್ 2002

ಕೀಟಗಳ ನಿಯಂತ್ರಣಕ್ಕೆ ಬೇವಿನ ಎಣ್ಣೆ ದೀಪ:

ಬೇವಿನ ಎಣ್ಣೆ ದೀಪವನ್ನು ಕ್ಯಾಂಡಲ್‌ಗಳ ಬದಲಾಗಿ ಮನೆಯಲ್ಲಿ ಉಪಯೋಗಿಸುವುದರಿಂದ ಅದರ ಘಾಟುವಾಸನೆಗೆ ಸೊಳ್ಳೆ ಮತ್ತು ಇತರ ಕ್ರಿಮಿ ಕೀಟಗಳು ಮನೆಯೊಳಗೆ ಬರುವುದಿಲ್ಲ. ಇದರಿಂದ ಮನೆಯಲ್ಲಿರುವ ಗೋದಾಮುಗಳಿಗೆ ಹುಳದ ಭಾದೆ ಕಡಿಮೆಯಾಗುತ್ತದೆ. ಇದು ಮಾನವನ ಆರೋಗ್ಯದ ಮೇಲೆ ಸಹ ಉತ್ತಮ ಪರಿಣಾಮ ಬೀರುತ್ತದೆ. ಇದರ ಘಾಟಿನಿಂದ ತಲೆನೋವು, ಕಣ್ಣು ಉರಿ, ವಾಕರಿಕೆ, ಚರ್ಮದಲ್ಲಿ ಕಜ್ಜಿ ಗುಳ್ಳೆ, ಮುಖದ ಮೊಡವೆಗಳು ಇತ್ಯಾದಿ ತೊಂದರೆಗಳ ನಿವಾರಣೆಯಾಗುತ್ತವೆ ಎಂಬುದು ಹಾಸನ ಜಿಲ್ಲೆಯ ಮಲ್ಲಿಕಾರ್ಜುನಪುರದ ಸಿದ್ದರಾಮೇಗೌಡ ಎಂಬ ರೈತರ ಅನುಭವ.

ಸಂಗ್ರಹ: ಸಿದ್ಧರಾಜು


ಹೊಗೆಸೊಪ್ಪಿನಿಂದ ಕೀಟನಾಶಕ

ಹೊಗೆಸೊಪ್ಪನ್ನು ನೀರಿನಲ್ಲಿ ಹಾಕಿ ಕುದಿಸಿ ದ್ರಾವಣವನ್ನು ತಯಾರಿಸಬೇಕು. ಇದನ್ನು ಕೀಟನಾಶಕವಾಗಿ ಬಳಸುವುದರಿಂದ ಕೋಸಿನ ಬೆಳೆಗೆ ತಗಲುವ ಕೀಟಗಳಾದ ಡೈಮಂಡ್ ಮೋತ್, ಬ್ಲಾಕ್ ಮೋತ್ (*Plutella maushpennis*), ಕಂಬಳಿ ಹುಳು (*Diocrisia obligue*), ಚಿಟ್ಟೆಗಳು ಮುಂತಾದುವನ್ನು ನಿಯಂತ್ರಿಸಬಹುದು ಎಂಬುದು ಪಶ್ಚಿಮ ಬಂಗಾಳದ ಅಶ್ವಿನಿ ಮಂಡಲ್ ಎಂಬ ರೈತರ ಅನುಭವ.

ಮೂಲ: ಹನಿ ಬಿ ಸಂ.12, ಪು 17, ಜುಲೈ–ಸೆ., 2001

ಮೂಗಿಲಿಯಿಂದ ಇಲಿ ನಿಯಂತ್ರಣ

ಮನೆ, ಹೊಲ, ಗದ್ದೆ ಹಾಗೂ ಗೋದಾಮುಗಳಲ್ಲಿ ಇಲಿಗಳ ಕಾಟ ಹೆಚ್ಚಾಗಿದ್ದರೆ, ಇಲಿಗಳನ್ನು ನಿಯಂತ್ರಿಸಲು ಇಲಿ ಜಾತಿಯಲ್ಲಿರುವ ಇನ್ನೊಂದು ಪ್ರಾಣಿಯಾದ ಮೂಗಿಲಿ (Musk Rat)ಯನ್ನು ಸಾಕುವ ಒಂದು ಕುತೂಹಲ ಪದ್ಧತಿ ನಮ್ಮ ಹಾಸನದ ಜಿಲ್ಲೆಯಲ್ಲಿ ಈ ಹಿಂದೆ ಜಾರಿಯಲ್ಲಿತ್ತು. ಈ ಮೂಗಿಲಿ ಇದ್ದ ಜಾಗದಲ್ಲಿ ಇತರ ಇಲಿಗಳು, ಹಾವುಗಳು, ಚೇಳುಗಳು ಕೂಡ ಇರುವುದಿಲ್ಲವಂತೆ! ಕಾರಣ ಈ ಮೂಗಿಲಿ ಒಂದು ರೀತಿಯ ಘಾಟು ವಾಸನೆಯನ್ನು ಬಿಡುತ್ತದೆ. ಈ ಘಾಟು ವಾಸನೆಗೆ ಇಲಿಗಳು, ಹಾವು, ಚೇಳುಗಳು ದೂರ ಹೋಗುತ್ತವೆ. ಮೂಗಿಲಿಯನ್ನು ಸಾಕು ಪ್ರಾಣಿಯಂತೆ ಸಾಕಿದರೆ ಉತ್ತಮ ಹಾಗೂ ಅನುಕೂಲಕರವಾಗಿರುತ್ತದೆ. ಒಂದು ಬಟ್ಟಲಿನಲ್ಲಿ ಹಾಲು ಅನ್ನ ಹಾಕಿ ಮೂಗಿಲಿಗೆ ರೂಢಿ ಮಾಡಿದರೆ ಅದು



Grey Musk Shrew
(*Suncus murinus*)

ಬಟ್ಟಲಿನಲ್ಲಿ ಮಾತ್ರ ತಿನ್ನಲು ರೂಢಿ ಮಾಡಿಕೊಳ್ಳುತ್ತದೆಯಂತೆ. ಈ ರೀತಿ ಮೂಗಿಲಿಯನ್ನು ಸಾಕುವ ಪದ್ಧತಿಯನ್ನು ಬೇಲೂರು ತಾಲ್ಲೂಕಿನ ಮಲ್ಲಿಕಾರ್ಜುನಪುರದ ಸಿದ್ಧರಾಮೇಗೌಡರು ಬಹಳ ಹಿಂದಿನಿಂದ ರೂಢಿಸಿಕೊಂಡಿದ್ದಾರೆ. ರೇಷ್ಮೆ ಬೆಳೆ ಜಮೀನಿನಲ್ಲಿ ಗೋಣಿ ಚೀಲದಿಂದ ನಿರ್ಮಿಸಿದ ಹುಳು ಸಾಕಣೆ ಮನೆಯಲ್ಲಿ ರೇಷ್ಮೆ ಹುಳು ಸಾಕುತ್ತಿದ್ದಾಗ ಇಲಿಗಳು ಹುಳುಗಳನ್ನು ತಿನ್ನಲು ಬರುತ್ತಿದ್ದವು. ಕೆಲವು ಅನುಭವಗಳ ಆಧಾರದ ಮೇಲೆ ಮೂಗು ಇಲಿ ಸಾಕಿ ರೇಷ್ಮೆ ಹುಳು ಹಾಗು ರೇಷ್ಮೆ ಗೂಡನ್ನು ಇಲಿಗಳ ಹಾವಳಿಯಿಂದ ಪಾರು ಮಾಡಿದರು. ಮೂಗಿಲಿ ಬೆಕ್ಕಿನಂತೆ ಮಾನವನಿಗೆ ಹೊಂದಿಕೊಳ್ಳುತ್ತದೆ ಎಂಬುದು ಇವರ ಸ್ವ ಅನುಭವ.

ಸಂಗ್ರಹ: ಸಿದ್ಧರಾಮೇಗೌಡ

ಕರಿಬೇವಿನ ಎಲೆಯಿಂದ ಹಸುಗಳ ಅತಿಸಾರ ಬೇಧಿ ನಿಯಂತ್ರಣ

ಮಳೆಗಾಲದಲ್ಲಿ ಜಾನುವಾರುಗಳಲ್ಲಿ ಕಾಣಿಸಿಕೊಳ್ಳುವ ಅತಿಸಾರ ಬೇಧಿಯನ್ನು ನಿಯಂತ್ರಿಸಲು ಗುಜರಾತಿನ ವಡೋಧರ ಜಿಲ್ಲೆಯ ಶ್ರೀ ಮಾದ್ಲಾಭಾಯಿ ರಾತ್ವರವರು ಕರಿಬೇವಿನ ಎಲೆಯಿಂದ ಪರಿಹಾರ ಕಂಡುಕೊಂಡಿದ್ದಾರೆ. 500 ಗ್ರಾಂ ಕರಿಬೇವಿನ ಎಲೆಯ ರಸವನ್ನು ಒಂದು ಲೀಟರ್ ನೀರಿನಲ್ಲಿ ಸೇರಿಸಿ, ಒಂದು ಗಂಟೆಯ ನಂತರ ಚೆನ್ನಾಗಿ ಕಲಕಿ, 500 ಮಿ.ಲಿ.ನಷ್ಟು ದ್ರಾವಣವನ್ನು ಬಾಧಿತ ಜಾನುವಾರಿಗೆ ಕುಡಿಸುವುದರಿಂದ ಜಾನುವಾರುಗಳಲ್ಲಿ ಕಾಣಿಸಿಕೊಳ್ಳುವ ಅತಿಸಾರ ಭೇದಿಯನ್ನು ನಿಯಂತ್ರಿಸಬಹುದು ಎನ್ನುವುದು ಶ್ರೀ ಮದ್ಲಾಬಾಯಿ ತಾತ್ವಾರವರ ಅನುಭವ.

ಮೂಲ: ಹನಿ ಬೀ, ಸಂ. 14(3), ಪುಟ 6, ಸೆಪ್ಟೆಂಬರ್, 2003

ತಮಿಳುನಾಡಿನ ಕುಂಬೇರಿಪಟ್ಟಿ ಹಳ್ಳಿಯ ರೈತ ವಿ. ಅರಸನ್‌ರವರ ಜಾನುವಾರು ಚಿಕಿತ್ಸಾ ವಿಧಾನಗಳು

ಹಸುಗಳಲ್ಲಿನ ಹಾಲು ವೃದ್ಧಿಗೆ

ಎಳ್ಳುಹಿಂಡಿ(Sepamum indicum) ಮತ್ತು ತಾಳೆ ಬೆಲ್ಲ ಸೇರಿಸಿ ಪುಡಿ ಮಾಡಿ ಹಾಲು ಕರೆಯುವ ಹಸುವಿಗೆ ಪ್ರತಿದಿನ ತಿನ್ನಿಸುವುದರಿಂದ ಹಸುವಿನಲ್ಲಿ ಹಾಲು ಉತ್ಪಾದನೆ ವೃದ್ಧಿಸುತ್ತದೆಯಂತೆ.

ಜಾನುವಾರುಗಳ ಗಾಯಕ್ಕೆ ಪರಿಹಾರ

ತುಂಬೆ ಎಲೆ(Leucas aspera) ರಸವನ್ನು ಜಾನುವಾರುಗಳ ಗಾಯಕ್ಕೆ ಹಚ್ಚುವುದರಿಂದ ಗಾಯದಲ್ಲಿರುವ ಹುಳುಗಳು ಬಿದ್ದು ಹೋಗಿ ಗಾಯವು ಶೀಘ್ರವಾಗಿ ಗುಣಮುಖವಾಗುತ್ತದೆಯಂತೆ.

ಜಾನುವಾರುಗಳ ಹೊಟ್ಟೆ ಹುಳುವಿಗೆ:


ತುಪ್ಪಕೀರೆ(Aearypha indica) ಗಿಡದ ಬೇರನ್ನು ಚೆನ್ನಾಗಿ ತೊಳೆದು ಅದರ ಜಜ್ಜಿದ ರಸವನ್ನು ಬಿಸಿ ನೀರಿನೊಂದಿಗೆ ಸೇರಿಸಿ ದಿನವೂ ಕುಡಿಸುವುದರಿಂದ ಜಾನುವಾರುಗಳ ಹೊಟ್ಟೆಹುಳ ನಿಯಂತ್ರಣವಾಗುತ್ತದೆಯಂತೆ.

ಜಾನುವಾರುಗಳ ಕಾಲುಬಾಯಿ ರೋಗ ನಿಯಂತ್ರಣಕ್ಕೆ

ಕಾಲುಬಾಯಿ ರೋಗ ಪೀಡಿತ ಜಾನುವಾರುಗಳು ಬಾಯಿಯಲ್ಲಿ ಉಂಟಾದ ಹುಣ್ಣಿನಿಂದ ಯಾವಾಗಲೂ ಜೊಲ್ಲು ಸುರಿಸುತ್ತಿರುತ್ತವೆ ಮತ್ತು ಅವುಗಳ ಪಾದದಲ್ಲಿಯೂ ಕೂಡ ಹುಣ್ಣಿನ ಲಕ್ಷಣಗಳು ಕಂಡು ಬರುತ್ತವೆ. ಇದನ್ನು ನಿಯಂತ್ರಿಸಲು ಬಾರ್ಲಿ (Pennisetum americonum) ಗಂಜಿಯನ್ನು ಜಾನುವಾರುಗಳಿಗೆ ಕುಡಿಸಬೇಕಂತೆ

ಮೂಲ: ಹನಿ ಬೀ, ಸಂ. 14(7), ಪುಟ 6, ಸೆಪ್ಟೆಂಬರ್, 2003

ರಾಸುಗಳಲ್ಲಿ ಉಣ್ಣೆ ನಿಯಂತ್ರಣ



ಚಿತ್ರದಲ್ಲಿ ತೋರಿಸಿರುವಂತೆ ಒಂದು ಚೀಲದಲ್ಲಿ ಒಣಗಿದ ಹುಡಿಗೊಬ್ಬರ ತುಂಬಿ ಇದರೊಳಗೆ ಒಂದು ಹೊಸ ಮಣ್ಣಿನ ಮಡಕೆಯಲ್ಲಿ ಅನ್ನದ ಗಂಜಿ ಹಾಕಿಡಬೇಕು. ಮಡಕೆ ಬಾಯನ್ನು ಬಟ್ಟೆಯಿಂದ ಭದ್ರಪಡಿಸಬೇಕು ಮತ್ತು ಮಣ್ಣಿನ ಮಡಕೆಯನ್ನು ಹುಡಿಗೊಬ್ಬರದಲ್ಲಿ ಕಂಠದವರೆಗೆ ಹೂತುಬಿಟ್ಟಿರಬೇಕು. 15 ದಿನಗಳ ನಂತರ ಈ ಮಣ್ಣಿನ ಮಡಕೆಯಲ್ಲಿ ಅನ್ನದ ಗಂಜಿಯ ಲೇಹ ತಯಾರಾಗಿರುತ್ತದೆ. ಈ ಲೇಹಕ್ಕೆ 10 ಗ್ರಾಂ ಬೆಲ್ಲ ಮತ್ತು ಒಂದು ಗಡ್ಡೆ ಬೆಳ್ಳುಳ್ಳಿಯನ್ನು ಚೆನ್ನಾಗಿ ಅರೆದು ಲೇಹದೊಂದಿಗೆ ಮಿಶ್ರ ಮಾಡಿ ರಾಸುಗಳ ಮೈತೊಳೆದು ಲೇಹವನ್ನು ಲೇಪಿಸಿ 4-5 ಗಂಟೆಗಳ ನಂತರ ತೊಳೆದರೆ ಉಣ್ಣೆಗಳು ಉದುರಿ ಹೋಗುತ್ತವೆ. ಈ ರೀತಿ 3 ಸಾರಿ, 3 ವಾರಗಳಲ್ಲಿ ಮಾಡಿದರೆ ಉಣ್ಣೆಗಳು ಸಂಪೂರ್ಣ ನಿಯಂತ್ರಣವಾಗುತ್ತವೆ ಎಂಬುದು ನಮ್ಮ ಹಾಸನದ ಸಾವಯವ ಕೃಷಿಕ ಬಸವರಾಜು ಸಂತೇಶಿವರರ ಅನುಭವ. ಮೈಮೇಲೆ ಉದ್ದನೆಯ ಕೂದಲುಗಳಿದ್ದಲ್ಲಿ ಅವೂ ಉದುರಿಹೋಗಿ ನಂತರ ಕುದುರೆ ಮೈನಂತೆ ನುಣಪಾಗಿ ಮಿಂಚುತ್ತದೆ. ಸೊಳ್ಳೆ, ನೊಣ ಕೂತರೂ ಸಹ ನಿಲ್ಲಲಾರದೆ ಉದುರಿ ಹೋಗುತ್ತವೆಯಂತೆ. ಇದಕ್ಕೆ ಪಶುವೈದ್ಯರು "Alphos 40 ml" ಚುಚ್ಚು ಮದ್ದು ಕೊಡುವುದು ರೂಢಿಯಲ್ಲಿದ್ದು, ಇದರಿಂದ ಪಶುಗಳಿಗೇ ಅಪಾಯವಾಗುವ ಸಾಧ್ಯತೆಯಿದೆಯೆಂಬುದು ಬಸವರಾಜರ ಅಭಿಮತ.

ವಿಶೇಷ ಸೂಚನೆ

ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.

ರೈತರು ಮೊದಲು ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳು, ಪ್ರದೇಶದೊಡನೆ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ, ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.

ಈ ಬಗ್ಗೆ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ಹಿತ್ತಲಗಿಡ ಜವಾಬ್ದಾರಿಯಲ್ಲ.

- ಸಂಪಾದಕ

ಗ್ರಾಮಾಂತರ ಬದುಕನ್ನು ಹಸನು ಮಾಡುವಲ್ಲಿ ಮತ್ತು ಪರಿಸರ ಹಾಗು ಜೀವ ವಿವಿಧತೆ ಸಂರಕ್ಷಣೆಯಲ್ಲಿ ನೂರಾರು ಸ್ಥಳೀಯ ಪರಿಣಿತರು ಮತ್ತು ತಳಮಟ್ಟದ ಅನುಶೋಧಕರು ತಮ್ಮ ಅಮೂಲ್ಯ ಕಾಣಿಕೆಯನ್ನು ನೀಡುತ್ತಲೇ ಇರುವರು.





ನಾಟೀ ವೈದ್ಯರು, ರೈತರು, ಮಹಿಳೆಯರು, ಬುಡಕಟ್ಟು ಜನಾಂಗಗಳು, ಕರಕುಶಲಕರ್ಮಿಗಳು, ಕೃಷಿ ಕೂಲಿಗಳ ಕುಟುಂಬದಿಂದ ಬಂದಿರುವ ಇಂತಹ ಬಹು ಪಾಲು ವ್ಯಕ್ತಿಗಳು ಪ್ರತಿ ಹಳ್ಳಿಯಲ್ಲೂ ಇದ್ದಾರೆ. ಇಂತಹ ವ್ಯಕ್ತಿಗಳು ತಮ್ಮ ಸೇವೆಯನ್ನು ಯಾವುದೇ ಪ್ರಚಾರ ಪ್ರತಿಫಲವಿಲ್ಲದೆ ನಿಸ್ವಾರ್ಥ ಮನೋಭಾವನೆಯಿಂದ ನೀಡುತ್ತಾ ಬಂದಿದ್ದರೂ ಇವರನ್ನು ಗುರುತಿಸಿ ಪುರಸ್ಕರಿಸುವುದರತ್ತ ನಮ್ಮ ಸರ್ಕಾರ ಮತ್ತು ಸಮಾಜ ಈವರೆಗೆ ಯಾವ ಪ್ರಯತ್ನವನ್ನೂ ಮಾಡಿಲ್ಲದಿರುವುದು ಒಂದು ದುರಂತ. ಇಂತಹ ಸ್ಥಳೀಯ ಪರಿಣಿತರು ಮತ್ತು ತಳಮಟ್ಟದ ಅನುಶೋಧಕರನ್ನು ಅವರ ಸ್ಥಳದಲ್ಲೇ ಗುರುತಿಸಿ ಸನ್ಮಾನಿಸುವ ವಿನೂತನ ಶೋಧ ಯಾತ್ರೆ 'ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನ' (National Innovation Foundation)ದ ಮುಖ್ಯಸ್ಥರು ಮತ್ತು ಅಹಮದಾಬಾದಿನ ಭಾರತೀಯ ನಿರ್ವಹಣಾ ಸಂಸ್ಥೆಯ ಪ್ರಾಧ್ಯಾಪಕರೂ ಆದ ಪ್ರೊ. ಅನಿಲ್ ಕೆ. ಗುಪ್ತಾರವರ ನೇತೃತ್ವದಲ್ಲಿ, ಭಾರತದ ವಿವಿಧ ಭಾಗಗಳಲ್ಲಿ ಕೆಲ ವರ್ಷಗಳಿಂದ ನಡೆದುಕೊಂಡು ಬಂದಿರುತ್ತದೆ. ಈ ಶೋಧಯಾತ್ರೆ ಸಾಮಾನ್ಯವಾಗಿ ಒಂದು ವಾರದಿಂದ ಹತ್ತು ದಿನಗಳ ಕಾಲ ನಡೆಯಲಿದ್ದು, ಪ್ರತಿ ದಿನ ಕನಿಷ್ಠ ಹತ್ತು ಕಿ.ಮೀ. ದೂರ ಕಾಲು ನಡಿಗೆಯಲ್ಲೇ ಕ್ರಮಿಸಲಾಗುವುದು. ಹೀಗೆ ದಾರಿಯಲ್ಲಿ ಬರುವ ಹಳ್ಳಿಗಳಲ್ಲಿ ಸ್ಥಳೀಯ ಪರಿಣಿತರು ಮತ್ತು ತಳಮಟ್ಟದ ಅನುಶೋಧಕರನ್ನು ಭೇಟಿಯಾಗಿ ಗೌರವಿಸಲಾಗುವುದು. ಇಂತಹ ಹನ್ನೊಂದು ಶೋಧಯಾತ್ರೆಗಳನ್ನು ಭಾರತದ ವಿವಿಡೆಡೆ ಈಗಾಗಲೇ ಕೈಗೊಳ್ಳಲಾಗಿದ್ದು ಹನ್ನೆರಡನೇ ಶೋಧಯಾತ್ರೆಯನ್ನು "ಹಿತ್ತಲಗಿಡ ಬಳಗ"ದ ಸಹಯೋಗದಿಂದ ಮಲೆನಾಡಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಶೋಧಯಾತ್ರೆಯ ಏಳು ದಿನಗಳ ದಿನಚರಿ ಬಗ್ಗೆ ವಿವರ ನೀಡಲಾಗಿದೆ.

ಮೊದಲನೇ ದಿನ (25.12.2003)

ಗುಡ್ಡೇ ತೋಟ

ಈ 12ನೇ ಶೋಧಯಾತ್ರೆಯನ್ನು ವಿದ್ಯುಕ್ತವಾಗಿ ಡಿಸೆಂಬರ್ 25ರಂದು ಮಲೆನಾಡಿನ ಗುಡ್ಡೇತೋಟದ ಚಿತ್ರಕೂಟದ ಅನಂತರಾವ್‌ರವರ ಸ್ವಗೃಹದಲ್ಲಿ ಹೊರನಾಡಿನ ಧರ್ಮದರ್ಶಿ ಶ್ರೀ ಭೀಮೇಶ್ವರ ಜೋಷಿಯವರು ಉದ್ಘಾಟಿಸಿದರು. ಜೇಸೀ ವೆಂಕಟಪ್ಪ ಹೆಬ್ಬಾರರು ಈ ಸಮಾರಂಭದ ಅಧ್ಯಕ್ಷತೆ ವಹಿಸಿದಂತೆ, ಶ್ರೀ ಜಿ.ಕೆ. ರತ್ನಾಕರ್‌ರವರಿಂದ ಸ್ವಾಗತ ಭಾಷಣ, ಹಿತ್ತಲ ಗಿಡ ಸಂಪಾದಕ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿಯವರಿಂದ ಶೋಧಯತ್ರೆಯ ಹಿನ್ನೆಲೆ ಮತ್ತು ಬೆಳವಣಿಗೆಯ ಬಗ್ಗೆ ಪ್ರಸ್ತಾವನೆ ನಡೆಯಿತು.

ಭಾರತೀಯ ನಿರ್ವಹಣಾ ಸಂಸ್ಥೆಯ ಪ್ರೊ. ಅನಿಲ್ ಗುಪ್ತರವರು ಈ ಸಮಾರಂಭದ ಮುಖ್ಯ ಅತಿಥಿಯಾಗಿದ್ದರು ಹಾಗು ಬಿ.ಕೆ. ವೆಂಕಪ್ಪಯ್ಯ ಬಾಳೆಕುಡಿಗೆ, ಜೇಸಿ ನಟರಾಜ್‌ರವರು ಅತಿಥಿಗಳಾಗಿದ್ದರು. ಉದ್ಘಾಟನಾ ಸಮಾರಂಭದ ನಂತರ ಗುಡ್ಡೇತೋಟದಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಎಸ್.ಯು. ಸುಬ್ರಾಯ ಗೌಡ	ನಾಟಿ ವೈದ್ಯ
2. ಸೀತಾಲಕ್ಷ್ಮಿ ಲೋಕನಾಥಪುರ	ಕಟ್ಟಡ ಗುತ್ತಿಗೆ
3. ಇಜ್ಜುವಾಸ್	ನಿಸ್ವಾರ್ಥ ಶಿಕ್ಷಕ
4. ಶ.ನಂ. ಶೇಷಗಿರಿ	ಪತ್ರಿಕಾ ಸಂಗ್ರಾಹಕ
5. ಶಾರದಮ್ಮ	ಪ್ರಸೂತಿ ಸೇವೆ
6. ವೆಂಕಮ್ಮ ತಿಮ್ಮೇಗೌಡ	ಪ್ರಸೂತಿ ಸೇವೆ
7. ಜಗದೀಶ್ ಕರಿಮನೆ	ಸಾವಯವ ಕೃಷಿ





ಇವರಲ್ಲಿ ಲೋಕನಾಥಪುರದ ಸೀತಾಲಕ್ಷ್ಮಿ ಮೊಟ್ಟ ಮೊದಲ ಗೌರವಕ್ಕೆ ಪಾತ್ರರಾದರು. 35 ವರ್ಷದ ಈಕೆ ತನ್ನ ಸಂಸಾರದ ನಿರ್ವಹಣೆ ತಾನೇ ಹೊತ್ತಿದ್ದಾಳೆ. ಬದುಕಲು ಈಕೆ ಆರಿಸಿಕೊಂಡಿದ್ದು ಗಾರೆ ಕೆಲಸದ ವೃತ್ತಿ. 7ನೇ ತರಗತಿ ಮಾತ್ರ ಓದಿರುವ ಈಕೆ ಈಗ ಈ ಪ್ರದೇಶದ ಏಕೈಕ ಗುತ್ತಿಗೆಗಾರ್ತಿ. ಇದರಲ್ಲಿ 40 ಕಟ್ಟಡ ಕಟ್ಟಿದ್ದು, ಆಸ್ಪತ್ರೆ, ನರ್ಸ್ ಕ್ವಾರ್ಟರ್ಸ್, ಶೌಚಾಲಯ ಇತ್ಯಾದಿ ಕಟ್ಟಡಗಳೂ ಸೇರಿವೆ. ಈಕೆ ಈ ರೀತಿ ಧೈರ್ಯದಿಂದ ಕುಟುಂಬ ನಿರ್ವಹಣೆ ಮಾಡುತ್ತಾ ಹತ್ತಾರು ಕುಟುಂಬಕ್ಕೆ ಅನ್ನ ನೀಡುತ್ತಿದ್ದಾಳೆ.



60 ವರ್ಷ ವಯಸ್ಸಿನ ಜಯಪುರದ ಇಜ್ಜುವಾಸ್ ಕಳೆದ ನಾಲ್ಕು ದಶಕಗಳಿಂದ ಶಾಲೆ ಇಲ್ಲದ ಊರಿನಲ್ಲಿ ವಿದ್ಯಾದಾನ ಮಾಡುತ್ತಾ ಸಹಸ್ರಾರು ವಿದ್ಯಾರ್ಥಿಗಳನ್ನು ಅಕ್ಷರಸ್ಥರನ್ನಾಗಿಸಿದ್ದಾರೆ. ಯಾವುದೇ ಪ್ರತಿಫಲವಿಲ್ಲದೆ ಇಂದಿಗೂ ಉಪಾಧ್ಯಾಯರ ಕೊರತೆ ಇರುವಲ್ಲಿ ಹೋಗಿ ವಿದ್ಯಾದಾನ ಮಾಡುತ್ತಿದ್ದಾರೆ. ಬಾಲ್ಯದಲ್ಲೇ

ಮಲೆನಾಡಿನಲ್ಲಿ 12ನೇ ಶೋಧಯಾತ್ರೆ





ತಂದೆ ತಾಯಿಯರನ್ನು ಕಳೆದುಕೊಂಡು, ಈಗ ಅನಾರೋಗ್ಯದಿಂದ ಶರೀರದ ಒಂದು ಭಾಗ ಸ್ವಾದೀನವಿಲ್ಲದ ಅವರ ಸೇವೆಗೆ ಚಿತ್ರಕೂಟದಲ್ಲಿ ಪ್ರತಿಫಲ ಸಿಕ್ಕಿತು. ಜಾನುವಾರು ಸೇವೆಯ ಸುಬ್ರಾಯ ಗೌಡ, ಸಾವಯವ ಕೃಷಿಕ ಜಗದೀಶ್, ಸೂಲಗಿತ್ತಿ ಶಾರದಮ್ಮ, ನುಡಿಚಿತ್ರ ಸಂಗ್ರಾಹಕ ಶಂ. ನ. ಶೇಷಗಿರಿ, ನಾಟಿ ವೈದ್ಯ ಬಾಬು ಗೌಡ, ಸೀನಯ್ಯ, ಹೂವಯ್ಯ, ಜಯರಾಮ ಕೆದ್ಲಾಯ, ಅಮ್ಮಣ್ಣ ಭಂಡಾರಿ ಚಿತ್ರಕೂಟದಲ್ಲಿ ಸನ್ಮಾನಿತರಾದರು. ಹಾಗೇ ಚಲಿಸುವ ಗ್ರಂಥಾಲಯದಂತಿರುವ ಶಂ. ನ. ಶೇಷಗಿರಿಯವರೂ ಪತ್ರಿಕೋದ್ಯಮಕ್ಕೊಂದು ದೇಶೀಯ ಆಯಾಮ ಒದಗಿಸಿರುವರು.

ಶಾಂತಿಗ್ರಾಮ

ಗುಡ್ಡೇತೋಟದಲ್ಲಿ ಸನ್ಮಾನಿಸಿದ ನಂತರ ಶೋಧಯಾತ್ರಾ ತಂಡವು ಗುಡ್ಡೇತೋಟದಿಂದ 4–5 ಕಿ.ಮೀ. ದೂರವಿರುವ ಶಾಂತಿಗ್ರಾಮಕ್ಕೆ ಚಲಿಸಿತು. ದಾರಿಯಲ್ಲಿ ಮಲೆನಾಡಿನ ಅತಿಥಿ ಸತ್ಕಾರಕ್ಕೆ ಕನ್ನಡಿ ಹಿಡಿದಂತೆ ಪಾದಯಾತ್ರಿಗಳ ಹಸಿವು ಮತ್ತು ನೀರಡಿಕೆಯನ್ನು ತಣಿಸಲು, ಹಳ್ಳಿಗರಿಂದ ಹಣ್ಣು ಮತ್ತು ಹಣ್ಣಿನ ರಸದ ವಿತರಣೆಯಾಯಿತು. ಅಲ್ಲಿ ಸ್ವಲ್ಪ ದಣಿವಾರಿಸಿಕೊಂಡು ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಬಾಬುಗೌಡ	ನಾಟಿ ವೈದ್ಯ
2. ಹೂವಯ್ಯ	ನಾಟಿ ವೈದ್ಯ
3. ಅಮ್ಮಣ್ಣ ಬಂಡಾರಿ ಕೊಗ್ರೆ	ನಾಟಿ ವೈದ್ಯ
4. ಜಯರಾಂ ಕೆದ್ಲಾಯ	ನಾಟಿ ವೈದ್ಯ
5. ಹಾಡುಗಾರ ಸೀನಯ್ಯ	ಸಾಂಪ್ರದಾಯಿಕ ಹಾಡು

ಇವರಲ್ಲಿ ಹಾಡುಗಾರ ಸೀನಯ್ಯ ವಿವಿಧ ರೀತಿಯ ಮಲೆನಾಡಿನ ಪಾರಂಪರಿಕ ಹಾಡುಗಳನ್ನು ಹೇಳಿ ಎಲ್ಲರಲ್ಲೂ ಅಚ್ಚರಿ ಸಂತೋಷವನ್ನು ಮೂಡಿಸಿದುದಲ್ಲದೆ ಮಲೆನಾಡಿನ ಸಾಂಪ್ರದಾಯಿಕ ಹಾಡುಗಳ ಪರಿಚಯವನ್ನೂ ಮಾಡಿಕೊಟ್ಟರು. ಅಲ್ಲಿಂದ ಹೊರಟ ಶೋಧಯಾತ್ರಿಕರ ಗುಂಪು ಕೋಟೆತೋಟದತ್ತ ಸಂಚರಿಸಿತು.

ಕೋಟೆತೋಟ

ಕೋಟೆ ತೋಟದ ಶ್ರೀ ವಿಜಯರಂಗರವರ ಮನೆಯಲ್ಲಿ ನೆರೆದ ಶೋಧಯಾತ್ರಿಗಳು ಮಧ್ಯಾಹ್ನದ ಭೋಜನಾನಂತರ ಸಭೆ ಸೇರಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಿದರು:

ಅನುಶೋಧಕರು	ಅನುಶೋಧನೆ
1. ಗೋಪಮ್ಮ	ನಾಟಿ ವೈದ್ಯೆ
2. ತಿಮ್ಮಪ್ಪ ಹೆಗ್ಗಡೆ	ಜಾನುವಾರು ಚಿಕಿತ್ಸೆ
3. ಗುಲ್ಲು ಪೂಜಾರಿ	ಜಾನುವಾರು ಚಿಕಿತ್ಸೆ
4. ನಾರಾಯಣಯ್ಯ ಮಡುವಿನಕೆರೆ	ನಾಟಿ ವೈದ್ಯ
5. ಶ್ರೀಮತಿ ಗಂಗಮ್ಮ	ಸಾಂಪ್ರದಾಯಿಕ ಹಾಡು
6. ಶೇಷಮ್ಮ	ಪ್ರಸೂತಿ ಸೇವೆ
7. ಸೆರಿಗಪ್ಪ	ಸಾವಯವ ಕೃಷಿ

ಇವರಲ್ಲಿ ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ ಇಲ್ಲದೆ ಮುರಿದ ಮೂಳೆಗಳನ್ನು ಕ್ರಮವಾಗಿ ಜೋಡಿಸುವ ತಿಮ್ಮಪ್ಪ ಹೆಗ್ಗಡೆಯವರ ಜಾನುವಾರು ಚಿಕಿತ್ಸಾ ವಿಧಾನ ಎಲ್ಲರಲ್ಲೂ ಅಚ್ಚರಿ ಮೂಡಿಸಿತು. ಅಲ್ಲಿಂದ ಕಲ್ಲುಗೋಪುರಕ್ಕೆ ಹೊರಟ ಗುಂಪು ಕಾಲುದಾರಿಯಲ್ಲಿ ಗುಡ್ಡ ಹತ್ತಿದಾಗ ಎಲ್ಲರ ಮುಖದಲ್ಲೂ ಆಯಾಸ ಎದ್ದು






ಕಾಣುತ್ತಿದ್ದರೂ ಉತ್ಸಾಹವಿನ್ನೂ ಬತ್ತಿರಲಿಲ್ಲ. ಗುಡ್ಡ ಹತ್ತುವಾಗ ಮಾರ್ಗಮಧ್ಯದಲ್ಲಿ ಸಿಗುವ ಜೈನ ಬಸದಿಯನ್ನು ಹಾದು ಕಲ್ಲುಗೋಪುರ ಪ್ರವೇಶಿಸಿದಾಗ ಕೆಳಗಿನ ರಮಣೀಯ ದೃಶ್ಯ ಎಲ್ಲರಲ್ಲೂ ಅಚ್ಚರಿ ಮೂಡಿಸಿತು. ಅಲ್ಲಿ ಗುಡಿ ಕೈಗಾರಿಕಾ ನಿಪುಣರಾದ ಲೋಕಪ್ಪ ಗೌಡರನ್ನು ಸನ್ಮಾನಿಸಲಾಯಿತು. ಕಲ್ಲುಗೋಪುರದ ರಮಣೀಯ ಸೂರ್ಯಾಸ್ತಮಾನವನ್ನು ವೀಕ್ಷಿಸಿ, ಬಂಡೆಯಿಂದ ಕೆಳಗಿಳಿಯುವಾಗ ಕತ್ತಲೆಯಲ್ಲಿ ದಾರಿಗಾಗಿ ತಡಕಾಡಬೇಕಾಯಿತು. ಅಷ್ಟರಲ್ಲೇ ಅಲ್ಲಿ ಸಹಾಯಕ್ಕೆ ಆಗಮಿಸಿದ ಹಳ್ಳಿಗರು ಬೆಂಕಿಯ ಪಂಜನ್ನು ಹಿಡಿದು ಎಲ್ಲರಿಗೂ ದಾರಿ ತೋರಿಸುವ ಮೂಲಕ ಹಳ್ಳಿಗರ ಸೌಜನ್ಯತೆಯನ್ನು ಮೆರೆದರು.

ಹಿರೇಹಳ್ಳಿ

ಕೋಟೆತೋಟದಿಂದ ಹಿರೇಹಳ್ಳಿ ದೇವಸ್ಥಾನ ಪ್ರವೇಶಿಸಿದ ಶೋಧಯಾತ್ರಿಗಳು ದೇವಸ್ಥಾನದ ಆವರಣದಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಿದರು.

ಅನುಶೋಧಕರು	ಅನುಶೋಧನೆ
1. ಎಸ್. ಎಸ್. ಬಾಲಕೃಷ್ಣ	ನಾಟಿ ವೈದ್ಯ
2. ಗಣೇಶಯ್ಯ	ನಾಟಿ ವೈದ್ಯ
3. ನಾಗರಾಜ ಗೌಡ	ನಾಟಿ ವೈದ್ಯ
4. ಹೆಚ್. ಸಿಂಗಪ್ಪಯ್ಯ	ಜಾನುವಾರು ಚಿಕಿತ್ಸೆ
5. ಹೆಚ್. ಚಂದ್ರಯ್ಯ	ಜಾನುವಾರು ಚಿಕಿತ್ಸೆ
6. ಬಾಗಿ	ಪ್ರಸೂತಿ ಸೇವೆ
7. ರಾಜಮ್ಮ	ಪ್ರಸೂತಿ ಸೇವೆ

ಹಿರೇಹಳ್ಳಿಯ ಸ್ಥಳೀಯ ಸಂಸ್ಥೆಗಳು ಅಂದು ರಾತ್ರಿ ವಿವಿಧ ರೀತಿಯ ಮಲೆನಾಡಿನ ಸಾಂಸ್ಕೃತಿಕ ನೃತ್ಯಗಳಾದ ಕೋಲಾಟ, ಕರಡಿ ನೃತ್ಯ ಮತ್ತು ನಾಟಕಗಳನ್ನು ಮಾಡಿ ಪಾದಯಾತ್ರಿಗಳ ಆಯಾಸವನ್ನು ಮರೆಯುವಂತೆ ಮಾಡಿದರು. ಅಂದು ರಾತ್ರಿ ಗುಜರಾತಿನ ಶೋಧಯಾತ್ರಿಕರು ತಮ್ಮ ವಿಶಿಷ್ಠ ಶೈಲಿಯ ನೃತ್ಯವನ್ನು ಮಲೆನಾಡಿನ ಜನತೆಗೆ ಪರಿಚಯಿಸಿದರು. ನಂತರ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದವರು ಜೈವಿಕ ಕೀಟ ಮತ್ತು ರೋಗನಿಯಂತ್ರಣದ ಅನೇಕ ರೀತಿಗಳನ್ನು ಗ್ರಾಮಸ್ಥರಿಗೆ ತಿಳಿಸಿ ಅವರಲ್ಲಿ ಜೈವಿಕ ಹತೋಟಿಯ ಪ್ರಜ್ಞೆಯನ್ನು ಮೂಡಿಸಿದರು. ನಂತರ ಹಿರೇಹಳ್ಳಿಯಲ್ಲಿ ತಂಗಿದ ಶೋಧಯಾತ್ರಿಗಳ ಗುಂಪು ಅಂದಿನ ಪಾದಯಾತ್ರೆಗೆ ವಿದಾಯ ಹೇಳಿತು.

ಎರಡನೆಯ ದಿನ (26.12.2003)

ಬೆಳಗ್ಗೆ ಹಿರೇಹಳ್ಳಿ ದೇವಸ್ಥಾನದಲ್ಲಿ ಸೇರಿದ ಎಲ್ಲಾ ಯಾತ್ರಿಕರು ಅಂದಿನ ಕಾರ್ಯಕ್ರಮದ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಂಡು ತಮ್ಮ ಚಲನೆಯನ್ನು ಮುಂದುವರಿಸಿದರು.

ಹೆಗ್ಗಾರುಕುಡಿಗೆ

ಹಿರೇಹಳ್ಳಿಯಿಂದ ಸುಮಾರಾಗಿ ಒಂದು ಕಿ.ಮೀ. ದೂರವಿರುವ ಹೆಗ್ಗಾರು ಕುಡಿಗೆ ದೇವಸ್ಥಾನದಲ್ಲಿ ಸಭೆ ಸೇರಿ ಅಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಬಾಬು ಹೆಗ್ಗಾರುಕುಡಿಗೆ	ನಾಟಿ ವೈದ್ಯ
2. ಮಾರಯ್ಯ	ನಾಟಿ ವೈದ್ಯ
3. ಮರಿಯಪ್ಪ ಗೌಡರು	ನಾಟಿ ವೈದ್ಯ
4. ತಮ್ಮೇ ಗೌಡ	ಕರಕುಶಲ ಕಲೆ
5. ದೇವನಾಯಕ್	ಕರಕುಶಲ ಕಲೆ

ಅಗಳಗಂಡಿ



ಹೆಗ್ಗಾರುಕುಡಿಗೆಯಿಂದ ಮುನ್ನಡೆದ ಸಂಚಲನವು ಅಗಳಗಂಡಿ ಶಾಲೆಯಲ್ಲಿ ಸಭೆ ಸೇರಿತು. ಅಗಳಗಂಡಿ ಶಾಲೆಯಲ್ಲಿ ಶಾಲಾ ಮಕ್ಕಳಿಗಾಗಿ ಏರ್ಪಡಿಸಿದ್ದ ಜೀವವೈವಿಧ್ಯ ಸ್ಪರ್ಧೆಯಲ್ಲಿ ಬಹಳಷ್ಟು ಮಕ್ಕಳು ಪಾಲ್ಗೊಂಡು ಮಕ್ಕಳಲ್ಲಿದ್ದ ಪರಿಸರ ಪ್ರಜ್ಞೆಯನ್ನು ಎತ್ತಿ ಹಿಡಿದರು, ನಂತರದ ಸಭೆಯಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.



ಅನುಶೋಧಕರು	ಅನುಶೋಧನೆ
1. ಕೃಷ್ಣಯ್ಯ, ತೋಟದ ಕುಮರಿ	ನಾಟಿ ವೈದ್ಯ
2. ಶಂಕ್ರಪ್ಪ ಗೌಡರು	ನಾಟಿ ವೈದ್ಯ
3. ಸೀತಾರಾಮಯ್ಯ, ಈಚಲುಗಡ್ಡೆ	ಅಗ್ನಿ ಸರ್ಪ ಚಿಕಿತ್ಸೆ
4. ಪುಟ್ಟಗೌಡರು	ಗುಡಿ ಕೈಗಾರಿಕೆ ಕಲೆ
5. ಗುಂಡೇಗೌಡರು	ಗುಡಿ ಕೈಗಾರಿಕೆ ಕಲೆ
6. ರಾಘವೇಂದ್ರ	ಗುಡಿ ಕೈಗಾರಿಕೆ ಕಲೆ
7. ತಿಮ್ಮಪ್ಪಯ್ಯ, ಕೆರೆಮನೆ	ಕಲಾವಿದರು
8. ತ್ಯಾಗರಾಜ, ಕೊಂಬಟ್ಟಿ	ಕಲಾವಿದ
9. ರಾಮಣ್ಣ ಹೆಗಡೆ	ಸಹಕಾರಿ
10. ರಘುರಾಮ ಭಟ್	ಕೊನೆಗಾರಿಕೆ
11. ರವೀಂದ್ರ , ಗುಡ್ಡೇ ಕೊಪ್ಪ	ಹಳೆ ತಳಿ ಭತ್ತ ಉಳಿಕೆ
12. ಚೀರಮ್ಮ	ಧೀರ್ಘಾಯುಷಿ

ಇವರಲ್ಲಿ ರವೀಂದ್ರ ಗುಡ್ಡೇಕೊಪ್ಪ ತಾವು ಉಳಿಸಿದ ಅಳಿವಿನ ಅಂಚಿನಲ್ಲಿರುವ ಪುಟ್ಟ ಹೆಗ್ಗೆ ಭತ್ತವನ್ನು ಎಲ್ಲರಿಗೂ ಪರಿಚಯಿಸಿದುದಲ್ಲದೆ, ಇತರರಿಗೂ ಮಾಹಿತಿ ನೀಡಿ ಬೆಳೆಯುವಂತೆ ಪ್ರೇರೇಪಿಸಿದರು. ಶತಮಾನ ಕಂಡ ಧೀರ್ಘಾಯುಷಿ ಚೀರಮ್ಮ ಅಂದಿನ ಆಕರ್ಷಣೆಯ ಕೇಂದ್ರ ಬಿಂದುವಾದಳು.

ದಯಂಬಳ್ಳಿ

ಅಗಳಗಂಡಿಯಿಂದ ಹೊರಟ ಶೋಧಯಾತ್ರಾ ತಂಡ ಅಲ್ಲಿಂದ ದಯಂಬಳ್ಳಿ ಶಾಲೆಯಲ್ಲಿ ಸಭೆ ಸೇರಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಿತು.

ಅನುಶೋಧಕರು	ಅನುಶೋಧನೆ
1. ಬೆಳ್ಳಾಚಾರ್, ದಾಸಗದ್ದೆ	ನಾಟಿವೈದ್ಯ
2. ರಾಮಕೃಷ್ಣ ಆಚಾರ್	ನಾಟಿವೈದ್ಯ
3. ಕಳಸಪ್ಪಗೌಡರು	ಗುಡಿ ಕೈಗಾರಿಕೆ
4. ಗುಂಡಣ್ಣ ಗೌಡರು	ಕರಕುಶಲ ಕಲೆ
5. ವೇದಮ್ಮ	ದಿಟ್ಟ ಮಹಿಳಾ ಕಾಂಟ್ರಾಕ್ಟರ್
6. ಕುರ್ತೇಲ	ಅಂಗಹೀನ ಆದರ್ಶ ವ್ಯಕ್ತಿ
7. ಕೊನೆಯಾ, ಕೆಳಕೊಪ್ಪ	ಜಾನಪದ ಕಲೆ

ಇವರಲ್ಲಿ ಹುಚ್ಚು ನಾಯಿ ಮತ್ತೊಂದು ನಾಯಿಗೆ ಕಚ್ಚಿದಾಗ ತೊಂದರೆ ಆಗದಂತೆ, ಹುಚ್ಚು ಹರಡದಂತೆ ನೋಡಿಕೊಳ್ಳುವ ನಾಟಿ ವೈದ್ಯ ರಾಮಕೃಷ್ಣ ಆಚಾರ್ ಮತ್ತು ವಿಶಿಷ್ಟ ರೀತಿಯ ಹಾಡು ಹಾಗೂ ವೇಷದ ಜನಪದ ಕಲಾವಿದ ಕೊನೆಯಾ ಗಮನ ಸೆಳೆದರು. ವಿವಿಧ ರೀತಿಯ ಜನಪದ ಹಾಡು ಮತ್ತು ನೃತ್ಯಗಳು ಅಂದಿನ ಸಭೆಗೆ ಮೆರುಗನ್ನು ತಂದಿತ್ತು. ಅಲ್ಲಿಂದ ಸಂಜೆಯ ತಂಪಾದ ವಾತಾವರಣದಲ್ಲಿ ಬೆಳವಿನ ಕೊಡಿಗೆಗೆ ಮುಂದುವರೆದ ಶೋಧಯಾತ್ರಾ ಗುಂಪಿಗೆ ದಾರಿಯಲ್ಲಿಯೇ ವಿವಿಧ

ಮಲೆನಾಡಿನಲ್ಲಿ 12ನೇ ಶೋಧಯಾತ್ರೆ





ರೀತಿಯ ವೇಷಭೂಷಣ, ತಾಳಮದ್ದಳೆಗಳಿಂದ ಸ್ವಾಗತಿಸಲಾಯಿತು.

ಬೆಳವಿನಕೊಡಿಗೆ



ಬೆಳವಿನ ಕೊಡಿಗೆಯಲ್ಲಿ ಶ್ರೀ ವಿನಾಯಕ ಗ್ರಾಮೋದ್ಯೋಗ ಸಂಸ್ಥೆಯ ಸಹಕಾರದೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಬಹಳಷ್ಟು ಅನುಶೋಧಕರು, ಹಾಗು ಪೌರರು ಭಾಗವಹಿಸಿದ್ದರು. ವಿವಿಧ ರೀತಿಯ ಮಲೆನಾಡಿನ ಅಡಿಗೆಗಳನ್ನು ಪರಿಚಯಿಸುವ ಅಡಿಗೆ ಸ್ಪರ್ಧೆ, ಜೀವ ವೈವಿಧ್ಯವನ್ನು ಪರಿಚಯಿಸಿದುದಲ್ಲದೆ ಔಷಧೀಯ ಗುಣಗಳುಳ್ಳ ಸಸ್ಯ ಖಾದ್ಯಗಳ ಬಗ್ಗೆ ಪ್ರಜ್ಞೆಯನ್ನು ಮೂಡಿಸುವಂತಿತ್ತು. ಬೆಳವಿನಕುಡಿಗೆಯ ಅಂದಿನ ಸಭೆಯಲ್ಲಿ ಬಹಳಷ್ಟು ಅನುಶೋಧಕರು ಗೌರವಕ್ಕೆ ಪಾತ್ರರಾದರು.

ಅನುಶೋಧಕರು	ಅನುಶೋಧನೆ
1. ಜಯಮ್ಮ, ಕುಳಗಾರು	ನಾಟಿ ವೈದ್ಯೆ
2. ಮರಿಗೌಡ, ಕುಳಗಾರು	ಜಾನುವಾರು ಚಿಕಿತ್ಸೆ
3. ಸಿ.ಟಿ. ಗಣೇಶ್, ಬೆಟ್ಟಮಕ್ಕಿ	ಜಾನುವಾರು ಚಿಕಿತ್ಸೆ
4. ನಾಗೇಶ	ನಾಟಿ ವೈದ್ಯ
5. ಗೋಪಿ , ಹೊಸಹಳ್ಳಿ	ಮನೆ ಮದ್ದು
6. ಸಯ್ಯದ್ ಅಹಮದ್, ಹರಿಹರ ಪುರ	ಆಯುರ್ವೇದ ಚಿಕಿತ್ಸೆ
7. ಶಿವಣ್ಣ, ಮಾಚಿಕೊಪ್ಪ	ನಾಟಿ ವೈದ್ಯ
8. ಸಂಜೀವ ಪೂಜಾರ್, ತೆಂಗಿನ ಮನೆ	ನಾಯಿ ಕಡಿತಕ್ಕೆ ಚಿಕಿತ್ಸೆ
9. ಕೃಷ್ಣರಾವ್, ಕಲ್ಕೆರ	ಜಾಂಡೀಸ್ ಚಿಕಿತ್ಸೆ
10. ವಾಸುದೇವ ಉರಾಳ್, ಶೃಂಗೇರಿ	ಅಡಿಕೆಯಿಂದ ಕಷಾಯ
11. ಕೆಂಚಯ್ಯ, ಹೊಸಳ್ಳಿ	ಮನೆ ಮದ್ದು
12. ಶಿವಪ್ಪ ಆಚಾರ್, ಹೊಸಳ್ಳಿ	ಹಾವು ಕಡಿತಕ್ಕೆ ಚಿಕಿತ್ಸೆ
13. ಪುಟ್ಟಮ್ಮ, ಉರುಗುಡಿಗೆ	ಮನೆ ಮದ್ದು
14. ಚೌಡಮ್ಮ, ಉರುಗುಡಿಗ	ಮನೆ ಮದ್ದು
15. ವಿಜಯೇಂದ್ರ, ಹಡ್ಲೆ	ಹಾವು ಕಡಿತಕ್ಕೆ ಚಿಕಿತ್ಸೆ
16. ಶ್ರೀಧರ ಜೋಯಿಸ್, ಸಿಂಗಾಪುರ	ಮದ್ದು ಹಾಕಿದ್ದಕ್ಕೆ ಚಿಕಿತ್ಸೆ
17. ದಡ್ಡಯ್ಯ, ಬಸ್ತಿಗದ್ದೆ	ಜಾನಪದ ಕಲೆ
18. ಹೆಚ್. ಯು. ಅನಂತಯ್ಯ	ಹಾಸ್ಯಕಲೆ
19. ಸುಬ್ಬಯ್ಯ, ಸೆಟ್ಟಿಕೆರ	ಜಾನಪದ ಕಲೆ
20. ಲೀಲಾವತಿ ಪ್ರಸನ್ನ.ಬಿ	ಕಲಾವಿದೆ
21. ಬಿ.ಕೆ. ರಾಘವೇಂದ್ರ	ಪೋಟೋಗ್ರಫಿ
22. ಸುಬ್ರಹ್ಮಣ್ಯ ನಾಯ್ಡು	ಅಡಿಗೆ ಕಲೆ
23. ಕೃಷ್ಣಮೂರ್ತಿ, ನಾಗುವಾನೆ	ಅಡಿಗೆ ಕಲೆ
24. ಕೃಷ್ಣಭಟ್, ಕೆಳಕುಡಿಗೆ	ಅಡಿಗೆ ಕಲೆ
25. ಗಿಡ್ಡಯ್ಯ, ಜೈನರ ಮಕ್ಕಿ	ಉತ್ತಮ ಕೊನೆಗಾರಿಕೆ
26. ಮಲ್ಲಯ್ಯ, ಹೊಸಳ್ಳಿ	ಗುಡಿಕೈಗಾರಿಕೆ
27. ಮಂಜಯ್ಯ, ಉರುಗುಡಿಗೆ	ರೇಡಿಯೋ ರಿಪೇರಿ
28. ಚಿನ್ನಮ್ಮ	ಅಂಗವಿಕಲ ಆದರ್ಶ ವ್ಯಕ್ತಿ
29. ಶ್ರೀನಿವಾಸ, ಅಗರವಳ್ಳಿ	ಅಂಗವಿಕಲ ಆದರ್ಶ ವ್ಯಕ್ತಿ
30. ಪುಟ್ಟಹುಡುಗಿ	ದೀರ್ಘಾಯುಶಿ
31. ಅಮರಜೋತಿ ಸಂಘ	ಯುವಕ ಸಂಘ
32. ಜೀವನ ಜ್ಯೋತಿ ಸಂಘ	ಮಹಿಳಾ ಸಂಘ

ಇವರಲ್ಲಿ ತೆಂಗಿನ ಮನೆಯ ಹರಿಜನ ಮಹಿಳೆ ಪುಟ್ಟ ಹುಡುಗಿಗೆ 104 ವರ್ಷ. ಅಪಾರ ಪಾರಂಪರಿಕ ಜ್ಞಾನ ಆಕೆಗಿದೆ, ಜಾನಪದ ಭಂಡಾರವೂ ಈಕೆಯ ತಲೆಯೊಳಗಿದೆ. ಅಂತೆಯೇ, ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ಸಾಮಗ್ರಿಗಳ ರಿಪೇರಿಯನ್ನು ನಾಜೂಕಾಗಿ ಯಾವ ಮೆಕ್ಯಾನಿಕ್‌ಗೂ ಕಡಿಮೆ ಇಲ್ಲದಂತೆ ಮಾಡುವ ಉರುಗುಡಿಗೆ ಮಂಜಯ್ಯ ಕೂಡ ನೋಡುಗರಲ್ಲಿ ಅಚ್ಚರಿ ಹುಟ್ಟಿಸಿದರು. ಅಂದಿನ ಸಭೆಯಲ್ಲಿ ಶ್ರೀ ವಿನಾಯಕ ಗ್ರಾಮಾಭ್ಯುದಯ ಸಂಸ್ಥೆಯ ಶ್ರೀ ರಾಜಶೇಖರ್, ಶ್ರೀ ಸುಬ್ರಹ್ಮಣ್ಯ, ಶ್ರೀ ರಾಘವೇಂದ್ರ ಬಿ.ಕೆ., ಶ್ರೀ ವಿನಯ್ ಹಾಗೂ ಇನ್ನು ಹಲವರು ಸಹ ಭಾಗಿಗಳಾಗಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಅಂದು ರಾತ್ರಿ ಬೆಳವಿನ ಕೊಡಿಗೆಯಲ್ಲಿ ತಂಗಿದ ಶೋಧಯಾತ್ರಿಗಳ ಗುಂಪು ಮುಂದಿನ ದಿನದ ಕಾರ್ಯಕ್ರಮಕ್ಕೆ ಅಣಿವು ಮಾಡಿತು.

ಮೂರನೆ ದಿನ (27.12.2003)

ಹುರಳಿಹಕ್ಕಲು





ಮರು ದಿನ ಬೆಳಗ್ಗೆ ಬೆಳವಿನ ಕೊಡಿಗೆಯಿಂದ ಮಲೆನಾಡಿನ ಭತ್ತದ ಗದ್ದೆಗಳು, ಹಳ್ಳಗಳನ್ನು ದಾಟಿ ಶೋಧಯಾತ್ರಿಗಳು ಹುರಳಿ ಹಕ್ಕಲಿನಲ್ಲಿ ಸಭೆ ಸೇರಿದರು. ಅಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಪುಟ್ಟಮ್ಮ, ಹುರಳಿಹಕ್ಕಲು	ಪ್ರಸೂತಿ ತಜ್ಞೆ
2. ರಾಮಚಂದ್ರ, ಹುರಳಿಹಕ್ಕಲು	ಕಲಾವಿದ

ಕಿಕ್ರೆ

ಹುರಳಿ ಹಕ್ಕಲಿನಿಂದ ಮುಂದುವರೆದ ಸಂಚಲನವು ಸುಮಾರು 8–10 ಕಿ.ಮಿ.ಗಳ ಸುಧೀರ್ಘ ಪಾದಯಾತ್ರೆಯ ಮೂಲಕ ಕಿಕ್ರೆ ಶಾಲೆಯಲ್ಲಿ ಸಭೆ ಸೇರಿತು. ಅಲ್ಲಿ

ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಮಾಬಲ, ಜೈನರಮಕ್ಕಿ	ನಾಟಿವೈದ್ಯ
2. ಮಾಧವರಾವ್, ತೊಂಡಗೇರಿ	ನಾಟಿವೈದ್ಯ
3. ಬೆಳ್ಳಮ್ಮ	ಪ್ರಸೂತಿ ತಜ್ಞೆ

ಸಸಿಮನೆ



ಕಿಕ್ರೆ ಶಾಲೆಯಿಂದ ಸಸಿ ಮನೆಗೆ ಸಂಚರಿಸಿದ ಶೋಧಯಾತ್ರಿಕರು ಸಸಿ ಮನೆಯಲ್ಲಿ ಏರ್ಪಡಿಸಿದ್ದ ಅಡಿಗೆಸ್ಪರ್ಧೆಯಲ್ಲಿ ವಿವಿಧ ರೀತಿಯ ಮಲೆನಾಡಿನ ಖಾದ್ಯಗಳಾದ ಕಾಯಿವಡೆ, ಕುಂಬಳಕಾಯಿ ಲೇಹ, ಕಾಯಿ ಸುಕ್ಕಿನುಂಡೆ, ಇತ್ಯಾದಿ ತಿನಿಸುಗಳ ಸವಿಯನ್ನು ಸವಿದರು. ಸಸಿ ಮನೆಯಲ್ಲಿ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಕೃಷ್ಣಯ್ಯ, ಸಸಿಮನೆ	ನಾಟಿವೈದ್ಯ
2. ಕೆ.ಎನ್. ವೆಂಕಟರಾವ್, ಕವಿಲ್‌ಕೂಡಿಗೆ	ಮಧುಮೇಹ
3. ಶಾಂತಮ್ಮ ಮಲ್ಲೇಶರಾವ್, ಕಲ್ಕಟ್ಟೆ	ನಾಟಿವೈದ್ಯ
4. ಈಶ್ವರನಾಯಕ್, ಮೆಡಬಾ	ನಾಟಿವೈದ್ಯ
5. ದಿವಾಕರ, ಹನಕೋಡು	ವ್ಯಂಗ್ಯ ಚಿತ್ರಕಲೆ
6.ಹೆಚ್.ಸಿ. ರಾಮಚಂದ್ರ ಹೆಬ್ಬಿಗೆ, ಅಡ್ಡಗದ್ದೆ	ಗುಡಿ ಕೈಗಾರಿಕೆ
7. ಕೆ.ಆರ್. ಭಾಸ್ಕರ ರಾವ್, ಕೆರೆಮನೆ	ಸಾವಯವ ಕೃಷಿ

ಸಸಿಮನೆಯಲ್ಲಿ ನಡೆದ ಜೀವ ವೈವಿಧ್ಯ ಸ್ಪರ್ಧೆಯಲ್ಲಿ ಸೂಕ್ತ ಸ್ಥಾನ ಪಡೆದವರಿಗೆ ಬಹುಮಾನ ನೀಡಲಾಯಿತು. ಸಸಿಮನೆಯಿಂದ ಕೆರೆಮನೆಗೆ ಹೋದಾಗ ಕೆರೆಮನೆ



ಭಾಸ್ಕರರಾವ್‌ರವರ ಅದ್ಭುತ ತೋಟಗಾರಿಕೆಯನ್ನು ಕಂಡು ರೈತರೂ, ವಿಜ್ಞಾನಿಗಳೂ, ಸಂಶೋಧಕರೂ ಬೆರಗಾದರು.

ಶೃಂಗೇರಿ

ಕೆರೆಮನೆಯಿಂದ ಮೆಣಸೆ ಮೂಲಕ ಶೃಂಗೇರಿಗೆ ಪ್ರವೇಶಿಸಿದ ಶೋಧಯಾತ್ರಿಗಳು ಶೃಂಗೇರಿಯ ಭಾರತೀ ಬೀದಿಯಲ್ಲಿ ಹಾದು ಸೀದಾ ನರಸಿಂಹ ವನಕ್ಕೆ ತೆರಳಿ ಜಗದ್ಗುರು ಶ್ರೀ ಭಾರತೀ ತೀರ್ಥ ಸ್ವಾಮೀಜಿಯವರ ಆಶೀರ್ವಚನ ಪಡೆದರು. ನಂತರ ಶಾರದೆಯ ದರ್ಶನದೊಂದಿಗೆ ಶ್ರೀ ಮಠದ ಪ್ರವಚನ ಮಂದಿರದಲ್ಲಿ ನಡೆದ ಸರಳ ಸಮಾರಂಭದಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಮಂಜುನಾಥ್ ನಾಯಕ್‌ಗಾರ್	ನಾಟಿವೈದ್ಯ
2. ಚಂದ್ರಶೇಖರ್ ಸೂರಡಿ, ತೆಕ್ಕೂರ್	ನಾಟಿ ವೈದ್ಯ
3. ಚಂದ್ರಶೇಖರಯ್ಯ, ಅಂಬಲಮನೆ	ನಾಟಿ ವೈದ್ಯ
4. ರತ್ನಮ್ಮ	ನಾಟಿ ವೈದ್ಯ
5. ಕೆ.ಯು. ನರಸಿಂಹ ಭಟ್, ಕಿಗ್ಗ	ನಾಟಿ ವೈದ್ಯ
6. ಎಸ್. ಕೆ. ಗಣೇಶಯ್ಯ	ಪ್ರಥಮ ಮುದ್ರಣಾಲಯ
7. ಗೋಪಾಲಕೃಷ್ಣ ಭಟ್	ಅವಿಭಕ್ತ ಕುಟುಂಬ
8. ಜಿ.ಬಿ. ಗಣೇಶ ಭಟ್	ವಿದ್ಯುತ್ ಶೋಧನೆ
9. ಡಿ.ಪಿ. ಸುಂದರಾಚಾರ್	ಅವಿಭಕ್ತ ಕುಟುಂಬ
10. ತಮ್ಮಣ್ಣ ಶೃಂಗೇರಿ	ನಿಸ್ವಾರ್ಥ ವ್ಯಕ್ತಿ
11. ಸುಬ್ರಾಯಣ್ಣ	ನಿಸ್ವಾರ್ಥ ವ್ಯಕ್ತಿ
12. ಕೆಂಚಣ್ಣ	ಸಾಹಸಿಗ
13. ಕೆ.ಬಿ. ಗಣಪತಿ	ಕೃಷಿ ಆವಿಷ್ಕಾರ
14. ಎ.ಪಿ. ರಾವ್ ಧನ್ವಂತರಿ	ಅಂಗವಿಕಲ ಸೇವೆ



ಸಮಾರಂಭಕ್ಕೆ ಕೆಲವೇ ಗಂಟೆಗಳ ಮುನ್ನ ಅಡ್ಡಗದ್ದೆಯ ಮನೆಯೊಂದರಲ್ಲಿ ಕಾಣಿಸಿ ಕೊಂಡಿದ್ದ ಸುಮಾರು 8 ಅಡಿ ಉದ್ದದ ಬೃಹತ್ ಕಾಳಿಂಗಸರ್ಪವನ್ನು ಹಿಡಿದು ತಂದಿದ್ದ ಸನ್ಮಾನಿತ ಕೆಂಚಣ್ಣ ಸಭೆಯಲ್ಲಿ ಪ್ರದರ್ಶಿಸಿ ಸಭಿಕರ ಮೈ ನವಿರೇಳುವಂತೆ ಮಾಡಿದರು. 75ರ ಈ ವೃದ್ಧ ಶೃಂಗೇರಿಯಲ್ಲಿ ವೃತ್ತಿಯಲ್ಲಿ ಹಮಾಲಿ, ಹಾವಾಡಿಗನಲ್ಲದ ಈತ ಮನೆಯಲ್ಲಿ ಮರಿನಾಗರ ಹಿಡಿದು ಹಾವು ಹಿಡಿಯುವ ಅಭ್ಯಾಸ ನಡೆಸಿದರು. ಶೃಂಗೇರಿಯಲ್ಲಿ ಯಾತ್ರಾರ್ಥಿಗಳು ಸ್ನಾನ ಮಾಡಲು ಹೋಗಿ ನದಿಗೆ ಬಿದ್ದ 5 ಜನರನ್ನು ಈತ ರಕ್ಷಿಸಿದ್ದಾರೆ. 50ಕ್ಕೂ ಹೆಚ್ಚು ನದಿ ಪಾಲಾದವರ ಕಳೇಬರ ಹುಡುಕಿಕೊಟ್ಟಿದ್ದಾರೆ. 54 ವರ್ಷದ ಹಿಂದೆ ಶೃಂಗೇರಿಗೆ ಪ್ರಥಮವಾಗಿ ಮುದ್ರಣ ತಂತ್ರಜ್ಞಾನ ಪರಿಚಯಿಸಿದ ಶಾರದ ಪ್ರೆಸ್‌ನ ಎಸ್.ಕೆ. ಗಣೇಶಯ್ಯ, ಅವಿಭಕ್ತ ಕುಟುಂಬದ ಯಜಮಾನ ಜವಳಿ ವ್ಯಾಪಾರಿ ಕೆ. ಗೋಪಾಲಕೃಷ್ಣ ಭಟ್, ಸಿರಿಮನೆಯ ವಿದ್ಯುತ್ ಉತ್ಪಾದನೆಯ ಪ್ರೇರಕ ಜಿ.ಜಿ. ಗಣೇಶ್, ಅವಿಭಕ್ತ ಕುಟುಂಬದ ಯಜಮಾನ ಹಾಗೂ ದೋಬಿ ಸಾರದ ಬಾಗಿಲು ತಮ್ಮಯ್ಯ, ನಿಸ್ವಾರ್ಥ ವ್ಯಕ್ತಿ ಹಮಾಲಿ ಸುಬ್ರಾಯ, ಅಂಗವಿಕಲ ಆಸ್ಪತ್ರೆಯ ಸಹಾಯಕ ಎ.ಪಿ. ರಾವ್ ಅವರನ್ನು ಪ್ರಶಸ್ತಿ ಪತ್ರ ಸ್ಮರಣಿಕೆಯಿತ್ತು ಸನ್ಮಾನಿಸಲಾಯಿತು. ಶೃಂಗೇರಿಯ ಅಂದಿನ ಸಭೆಯನ್ನು ಶೃಂಕೋಣ ಪತ್ರಿಕೆಯ ಶ್ರೀ ಪಾಂಡುರಂಗ ಹಾಗು ಶ್ರೀ ಎಸ್. ಪ್ರಕಾಶ್‌ರವರು ಸಾಂಗವಾಗಿ ನೆರವೇರುವಂತೆ ಮಾಡಿದರು.

ನಾಲ್ಕನೆ ದಿನ (28.12.2003)

ಕೆಳಕೊಪ್ಪ

ಶೃಂಗೇರಿಯಿಂದ ಮರುದಿನ ಕೆಳಕೊಪ್ಪಕ್ಕೆ ಹೋಗುವ ಶೋಧಯಾತ್ರಿಗಳ ಗುಂಪು ಕಾಡುದಾರಿಯ ಮೂಲಕ ಸಂಚರಿಸುವಾಗ ದಾರಿ ತಪ್ಪುವಂತಾಗಬಾರದೆಂದು ದಾರಿಯಲ್ಲಿ ಮರದ ಗೆಲ್ಲುಗಳನ್ನು ಮುರಿದು ಹಾಕಿ, ಪಾದಯಾತ್ರಿಗಳಿಗೆ ಸ್ಥಳೀಯರು ಅನುಕೂಲ ಮಾಡಿಕೊಡುತ್ತಿದ್ದರು. ನಂತರ ಕೆಳಕೊಪ್ಪ ಶಾಲೆಯಲ್ಲಿ ಸಭೆ ಸೇರಿದ ಶೋಧಯಾತ್ರಿಗಳು ಈ ಕೆಳಗಿನವರನ್ನು ಸನ್ಮಾನಿಸಿದರು.

ಅನುಶೋಧಕರು	ಅನುಶೋಧನೆ
1. ಗಣಪತಿ, ಚಗತೆ	ಹಾವು ಕಡಿತಕ್ಕೆ ಚಿಕಿತ್ಸೆ
2. ಎಂ.ಜಿ. ಗೋಪಾಲ್, ಮಾಲುಗಡಿಗೆ	ನಾಟಿ ವೈದ್ಯ
3. ರುಕ್ಮಿಣಿಯಮ್ಮ, ಚಗತೆ	ನಾಟಿ ವೈದ್ಯ
4. ಸಿ.ಕೆ. ಸತ್ಯನಾರಾಯಣ, ಕಾವಡಿ	ನಾಟಿ ವೈದ್ಯ
5. ಸುಬ್ರಾಯಗೌಡ	ನಾಟಿ ವೈದ್ಯ
6. ಶೇಷಯ್ಯ, ಬೇಗಾನೆ	ಬೇರು ಹುಳು ಜ್ಞಾನ
7. ಕೃಷ್ಣಮೊಯಿಲಿ, ಬೇಗಾನೆ	ಬೇರು ಹುಳು ಜ್ಞಾನ
8. ನಾರಾಯಣ ನಾಯಕ್, ಬೇಗಾನೆ	ಬೇರು ಹುಳು ಜ್ಞಾನ
9. ಕಾಡಪ್ಪ ಗೌಡರು, ಬೇಗಾನೆ	ವಿಶೇಷ ಬೇರು ಹುಳು ಜ್ಞಾನ
10. ಕೃಷ್ಣಮೂರ್ತಿ ಭಟ್, ಹೆಗ್ಗದ್ದೆ	ಅಡಿಕೆ ಸುಲಿಯುವ ಯಂತ್ರ

ಕೆಳಕೊಪ್ಪ ಶಾಲೆಯಲ್ಲಿ ನಡೆದ ಸಮಾರಂಭದಲ್ಲಿ ಗ್ರಾಮೀಣ ಮಹಿಳೆಯರಿಗೆ ಸಸ್ಯ ಮೂಲಗಳನ್ನಾಧರಿಸಿ ತಯಾರಿಸುವ ದೇಶೀಯ ಅಡಿಗೆಗಳು, ಔಷಧಿಗಳು, ಕಷಾಯಗಳ ಸ್ಪರ್ಧೆ ಏರ್ಪಡಿಸಲಾಗಿತ್ತು. ಹಾಗೇ ಸಭೆಯಲ್ಲಿ, ಒಣಗಿದ ಅಡಿಕೆ ಸಿಪ್ಪೆಗೋಟು ಸುಲಿಯುವ ಯಂತ್ರದ ಅನುಶೋಧಕರಾದ ಹೆಗ್ಗದ್ದೆ ಕೃಷ್ಣಮೂರ್ತಿ ಭಟ್ ಅವರನ್ನು ಸನ್ಮಾನಿಸಲಾಯಿತು. ಕಡಿಮೆ ಖರ್ಚಿನಲ್ಲಿ ಗೋಟಡಿಕೆ ಸುಲಿಯುವ ಈ ಯಂತ್ರದ ಪ್ರಾತ್ಯಕ್ಷಿಕೆ ನಡೆಯಿತು. ಟಿಲ್ಲರ್ ಬಿಡಿ ಭಾಗ ಬಳಸಿ ರೂಪಿಸಿದ ಅಡಿಕೆ ಸುಲಿಸುವ ಯಂತ್ರ, ತಂತ್ರಜ್ಞರು ಮೂಗಿನ ಮೇಲೆ ಬೆರಳಿಡುವಂತಿದೆ. 1/2 ಎಚ್.ಪಿ. ಮೋಟಾರ್ ಬಳಸಿ ಓಡುವ ಈ ಯಂತ್ರ, ವಿದ್ಯುತ್ ಇಲ್ಲದಿದ್ದರೆ ಹ್ಯಾಂಡಲ್ ಹೊಡೆದರೂ ನಡೆಯುತ್ತದೆ. ವ್ಯಕ್ತಿಯೊಬ್ಬ ಗಂಟೆಗೆ 3 ಕಿಲೋ ಒಣ ಅಡಿಕೆ ಸುಲಿದರೆ ಈ ಯಂತ್ರ 10 ಕಿಲೋ ಸುಲಿಯುತ್ತದೆ. ಡಬ್ಬಿಯಲ್ಲಿ ಅಡಿಕೆ ತುಂಬಿದರೆ ಯಂತ್ರವು ಒಂದೊಂದೇ ಅಡಿಕೆಯನ್ನು ಕತ್ತರಿಯತ್ತ ಸಾಗಿಸುತ್ತದೆ. ಫ್ಲೈವ್ಹೀಲ್ ಆಗಿ ಜೀಪಿನ ಚಕ್ರ ಒಂದನ್ನು ಇವರು ಬಳಸಿದ್ದಾರೆ. ಅಡಿಕೆ, ಸಿಪ್ಪೆ ಒಟ್ಟಿಗೇ ಬೀಳುತ್ತದೆ. ಯಂತ್ರ ಸುಧಾರಣೆಗೊಂಡರೆ ಇನ್ನಷ್ಟು ಉಪಯುಕ್ತವಾಗುತ್ತದೆ. ಸಣ್ಣ ರೈತರ ಕೈಗೆಟುಕುವ ಬೆಲೆಗೇ ದೊರೆಯುವ ಈ ಯಂತ್ರದ ಬೆಲೆ ಸುಮಾರು 5000/-ದಷ್ಟಾಗುತ್ತದೆ. ಅಂದು ಕೆಳಕೊಪ್ಪ ಶಾಲೆಯಲ್ಲಿ ಅಡಿಕೆ ಬೇರುಹುಳ ಮತ್ತು ಅದರ ಹತೋಟಿ ಕ್ರಮಗಳ ಬಗ್ಗೆ ಬೇಗಾನೆ ಕಾಡಪ್ಪನವರೊಂದಿಗೆ ದೀರ್ಘ ಚರ್ಚೆ ನಡೆಯಿತು. ಸಭೆಯಲ್ಲಿ ಬೇಗಾನೆ ಕಾಡಪ್ಪನವರು ಬೇರುಹುಳುಗಳ ಬಗೆಗಿನ ತಮ್ಮ ಜ್ಞಾನವನ್ನು ಇತರರಿಗೂ ತಿಳಿಸಿದರು. ಇವರೇ ತರಬೇತಿ ನೀಡಿ ಮುಂದೆ ತಂದಿರುವ ಶೇಷಯ್ಯ, ನಾರಾಯಣ ನಾಯಕ್ ಮತ್ತು ಕೃಷ್ಣ ಮೊಯಿಲಿ ಬೇರುಹುಳುವಿನ ತಜ್ಞರೇ ಆಗಿರುವರು. ಇವರಲ್ಲಿ ಸ್ಪರ್ಶ ಮಾತ್ರದಿಂದ ಬೇರುಹುಳದ ದುಂಬಿಯ ಲಿಂಗ ಕಂಡು ಹಿಡಿಯುವ ಕೃಷ್ಣ ಮೊಯಿಲಿಯವರ ಚತುರತೆಗೆ ಸರಿಸಮಾನರಿರುವುದಿಲ್ಲ.

ಹುಲುಗಾರು

ಹುಲುಗಾರಿನಲ್ಲಿ ಸಭೆ ಸೇರಿದ ಶೋಧಯಾತ್ರಿಗಳು ಮಲೆನಾಡಿನ ಪ್ರಮುಖ ಬೆಳೆಯಾದ ಅಡಿಕೆಯ ಸುಲಿಯುವಿಕೆ ಮತ್ತು ಅದರ ಸಂಸ್ಕರಣಾ ವಿಧಾನವನ್ನು ಪ್ರತ್ಯಕ್ಷವಾಗಿ ವೀಕ್ಷಿಸಿದರು. ಹುಲುಗಾರಿನಲ್ಲಿ ಇಬ್ಬರು ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಚಂದ್ರಶೇಖರ್, ಹುಲುಗಾರು	ನಾಟಿವೈದ್ಯ
2. ಮಹೇಶ್, ಹುಲುಗಾರು	ಶಿಲ್ಪಿ



ಹುಲುಗಾರಿನ ಚಂದ್ರಶೇಖರ್‌ರವರು ಹುಟ್ಟು ಅಂಗವಿಕಲರಲ್ಲದಿದ್ದರೂ ಆಕಸ್ಮಿಕವಾಗಿ ಸಂಭವಿಸಿದ ಅನಾಹುತದಿಂದಾಗಿ ತಮ್ಮ ಎರಡು ಕಾಲುಗಳ ಸ್ವಾಧೀನ ಕಳೆದುಕೊಂಡರೂ ಧೃತಿಗೆಡದೆ ಬದುಕನ್ನು ಸವಾಲಾಗಿ ಸ್ವೀಕರಿಸಿದ್ದಾರೆ. ಇವರ ಆತ್ಮವಿಶ್ವಾಸ ನಿಜವಾಗಿಯೂ ಪ್ರಶಂಸನಾರ್ಹ. ಚಂದ್ರಶೇಖರ್‌ರವರು ಗಿಡ ಮೂಲಿಕೆ ವೈದ್ಯರಾಗಿದ್ದು, ಬಹಳಷ್ಟು ಜನರಿಗೆ ತಮ್ಮ ಮೂಲಿಕಾ ಚಿಕಿತ್ಸೆಯಿಂದ ಜೀವದಾನ ಮಾಡಿದ್ದಾರೆ. ಔಷಧಿಯ ಸಸ್ಯಜ್ಞಾನದ ಆಗರವಾದ ಚಂದ್ರಶೇಖರ್‌ರವರು ಅಂದಿನ ಸಭೆಯಲ್ಲಿ ವಿಶೇಷವಾದ ಪೌರಾಣಿಕ ಹಿನ್ನೆಲೆಯುಳ್ಳ ಸಸ್ಯದ ಎಲೆ "ಸೀತೆ ದೀಪ" (*Linociera malaborica*)ವನ್ನು ಎಲ್ಲರಿಗೂ ಪರಿಚಯಿಸಿ, ಅಚ್ಚರಿ ಮೂಡಿಸಿದರು. "ಸೀತೆ ದೀಪ" ಬೆಂಕಿ ಹೊತ್ತಿಸಿದರೆ ದೀರ್ಘಕಾಲದವರೆಗೂ ದೀಪದಂತೆ ಉರಿಯುವ ಒಂದು ಅಪರೂಪದ ಸಸ್ಯದ ಎಲೆ, ಸೀತೆ ದೀಪ ಅಂದಿನ ಸಭೆಯ ಆಕರ್ಷಣೆಯ ಕೇಂದ್ರ ಬಿಂದುವಾಯಿತು. ನಂತರ ಶೋಧಯಾತ್ರಿಗಳು ಹುಲುಗಾರು ಗಣಪತಿ ದೇವಸ್ಥಾನದಲ್ಲಿ ಸಭೆ ಸೇರಿ, ಅಲ್ಲಿ ಏರ್ಪಡಿಸಿದ್ದ ಅಂಚೆ ಚೀಟಿಗಳ ಸಂಗ್ರಹ, ನಾಣ್ಯಗಳ ಸಂಗ್ರಹ ಹಾಗೂ ವಿಶಿಷ್ಟ ತಿನಿಸುಗಳ ಅಡಿಗೆ ಸ್ಪರ್ಧೆಯನ್ನು ವೀಕ್ಷಿಸಿ ಅಡಿಗೆಯ ರುಚಿ ಸವಿದು, ಶಿಲ್ಪಿ ಹುಲುಗಾರು ಮಹೇಶ್‌ರವರನ್ನು ಸನ್ಮಾನಿಸಿದರು. ಹುಲುಗಾರು ಮಹೇಶ್ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಅಪರೂಪದ ಸಾಧನೆ ಮಾಡಿದ ಕಲಾಕಾರ. ಈತ ಸೀಮೆ ಸುಣ್ಣದಲ್ಲಿ ಮಾಡಿದ ಮೂರ್ತಿ, ಮಂದಿರಗಳು ನಿಜಕ್ಕೂ ಅದ್ಭುತ, ಕಲ್ಲಿನಿಂದ ವಿಗ್ರಹ ಮಾಡುವ ಕರ್ನಾಟಕದ ಮಹಾನ್ ಶಿಲ್ಪಿಗಳನ್ನು



ಅವರ ಶಿಲ್ಪ ಕಲೆಗಳನ್ನು ಜ್ಞಾಪಿಸುವ ಈತ ಅದ್ಭುತ ಶಿಲ್ಪಿ. ಈತ ಕೆತ್ತನೆ ಮಾಡಿದ ವಿಗ್ರಹಗಳು ಹೊರದೇಶದಲ್ಲೂ ಬೇಡಿಕೆ ಪಡೆದಿವೆ. ಮಲೆನಾಡಿನ ಈ ಎಲೆ ಮರೆಯ ಕಾಯಿಯಂತಿರುವ ಇವನ ಸಾಧನೆ ಬಹಳ



ಅಪರೂಪವಾದದ್ದು. ಹುಲುಗಾರಿನಿಂದ ಮಾವಿನ ಕಟ್ಟೆ ಶಾಲೆ ಪ್ರವೇಶಿಸುವಾಗ ದಾರಿಯಲ್ಲಿ ಬೆಂಕಿ ಕುಣಿತ, ಡೋಲು, ತಾಳ, ಮದ್ದಳೆಗಳ ಭರ್ಜರಿ ಸ್ವಾಗತ, ಶೋಧ ಯಾತ್ರಿಗಳಿಗೆ ಉತ್ಸವದಂತೆ ಕಂಡಿತು.

ಮಾವಿನಕಟ್ಟೆ

ಹುಲುಗಾರಿನಿಂದ ಮಾವಿನ ಕಟ್ಟೆ ಶಾಲೆಯಲ್ಲಿ ಅಂದು ಸಭೆ ಸೇರಿದ ಶೋಧಯಾತ್ರಿಗಳ ಗುಂಪು, ಶೋಧಯಾತ್ರೆಯ ಉದ್ದೇಶವನ್ನು ಜನರಿಗೆ ತಿಳಿಸಿ ಕೆಳಗಿನ ಅನುಶೋಧಕರನ್ನು ಸನ್ಮಾನಿಸಿದರು.

ಅನುಶೋಧಕರು	ಅನುಶೋಧನೆ
1. ಬಸಪ್ಪ ಶೆಟ್ಟರು	ಜಾನುವಾರು ಚಿಕಿತ್ಸೆ
2. ಎ.ಪಿ. ಶ್ರೀನಿವಾಸಯ್ಯ	ನಾಟಿವೈದ್ಯ
3. ಕೆ. ಶಾಮಭಟ್	ನಾಟಿ ವೈದ್ಯ
4. ಹೆಚ್.ಬಿ. ಪ್ರಕಾಶ್	ನಾಟಿ ವೈದ್ಯ
5. ಗಿರಿಯಪ್ಪ ಆಚಾರ್, ನಿಲುವಾಗಿಲು	ರಿಪೇರಿ
6. ಮಂಜುನಾಥ	ಗೋಬಾರ್ ಆಸ್ಪತ್ರೆ
7. ಅಪ್ಪಚಾರ್, ಶಾನುವಳ್ಳಿ	ಮರಗೆಲಸ
8. ಲಕ್ಷ್ಮಣಾಚಾರ್	ತಾಂತ್ರಿಕ ರಿಪೇರಿ
9. ನಟರಾಜ, ಅಗಲಿ	ಕಲಾವಿದ
10. ಟಿ.ಎಂ. ಗೋಪಾಲರಾವ್, ತಿರುಳೆ ಬೈಲ್	ವಯೋವೃದ್ಧ
11. ವೆಂಕಮ್ಮ, ಮಾವಿನ ಕಟ್ಟೆ	ಪ್ರಸೂತಿ
12. ಬೆಳ್ಳಯ್ಯ, ಬೆಳವಿನಕೊಡಿಗೆ	ಕೊನೆಗಾರಿಕೆ

ಅಗಲಿ

ಅಂದು ರಾತ್ರಿ ಬೆಂಕಿಯ ನೃತ್ಯದೊಂದಿಗೆ ಅಗಲಿ ಪ್ರವೇಶಿಸಿದ ಶೋಧಯಾತ್ರಿಗಳು ಸಭೆ ಸೇರಿ ಇಬ್ಬರು ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಪಾರ್ವತಿ, ಹುಲುಗಾರು	ಸಾವಿರಾರು ಸಾಂಪ್ರದಾಯಿಕ ಹಾಡು ರಚನೆ
2. ನಾಗೇಶ್ ಎ.ಪಿ., ಅಗಲಿ	ಅಡಿಕೆ ರೋಗದ ವಿಶೇಷ ಅಧ್ಯಯನ

ಮರುದಿನ ಬೆಳಗ್ಗೆ ಅಗಲಿ ನಾಗೇಶ್‌ರವರ ಅಡಿಕೆ ಬೇರುಹುಳದ ಸಂಶೋಧನೆಯ ಸ್ಲೈಡ್ ಪ್ರದರ್ಶನ ಏರ್ಪಡಿಸಲಾಗಿತ್ತು. ಯಾವ ಕೃಷಿ ವಿಜ್ಞಾನಿಗೂ ಕಡಿಮೆ ಇಲ್ಲದೆ ಅಡಿಕೆ ಬೇರುಹುಳದ ಬಗ್ಗೆ ಸ್ವಯಂ ಅನುಭವದ ಆಧಾರದ ಮೇಲೆ ಸುದೀರ್ಘ ಅಧ್ಯಯನ ನಡೆಸಿದ ನಾಗೇಶ್‌ರ ಸಾಧನೆ ಗಮನಾರ್ಹ. ವಿವಿಧ ರೈತರಿಗೆ ಈ ಬಗ್ಗೆ ತಿಳುವಳಿಕೆ ನೀಡುವ ಇವರ ಪಯತ್ನ ಕೂಡ ಅಷ್ಟೇ ಪ್ರಶಂಸಾರ್ಹ.



ಐದನೆಯ ದಿನ (29.12.2003)

ಕಡ್ತೂರು

ಶೋಧಯಾತ್ರೆಯ 5ನೇ ದಿನದಂದು ಅಗಲಿ ನಾಗೇಶ್ ಮನೆಯಿಂದ ಹೊರಟ ಶೋಧಯಾತ್ರಿಕರ ತಂಡ ಕಡ್ತೂರು ಸಮೀಪಿಸುತ್ತಿದ್ದಂತೆ ಕಡ್ತೂರು ಶಾಲಾ ಮಕ್ಕಳಿಂದ ಭವ್ಯ ಸ್ವಾಗತ ದೊರಕಿತು. ಪಥ ಸಂಚಲನದ ಮೂಲಕ ಕಡ್ತೂರಿನ ವಿವಿಧ ಸಂಘ ಸಂಸ್ಥೆಗಳು, ಶಾಲಾ ಮಕ್ಕಳು ಹಾಗೂ ಶಾಲಾ ಸಿಬ್ಬಂದಿ ವರ್ಗ, ಬರಮಾಡಿಕೊಂಡ ರೀತಿ ಶೋಧಯಾತ್ರಿಗಳಿಗೆ ಮರೆಯಲಾಗದ ಅನುಭವ ನೀಡಿತು. ಅಲ್ಲಿನ ಶಾಲೆ ಮೈದಾನದ ಆವರಣದಲ್ಲಿ ನಡೆದ "ಅನುಶೋಧಕರ ಪುರಸ್ಕಾರ" ಸಭೆಯಲ್ಲಿ ಕೆಳಗಿನ ಎಂಟು ಅನುಶೋಧಕರನ್ನು ಗೌರವಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಪುಟ್ಟನಾಯಕ, ಸಂಪಗೋಡು	ಜಾನುವಾರು ಚಿಕಿತ್ಸೆ
2. ಬೆಳ್ಳಯ್ಯ, ಹಂದಿಗೋಡು	ನಾಟಿವೈದ್ಯ
3. ಮಂಜಪ್ಪನಾಯಕ, ಪಡುಬಯಲು	ನಾಟಿ ವೈದ್ಯ
4. ಮರಿನಾಯಕ್, ಬಿದಿರುಗೋಡು	ಜಾನುವಾರು ಚಿಕಿತ್ಸೆ
5. ಬುಳ್ಳಯ್ಯಗೌಡರು, ಹೆಬ್ಬಯಲು	ನಾಟಿ ವೈದ್ಯ
6. ಗೋಪಾಲ, ಕಡ್ತೂರು	ಹಾವು ಕಡಿತಕ್ಕೆ ಚಿಕಿತ್ಸೆ
7. ಫಾತಿಮಾ, ಏರಿಗದ್ದೆ	ಪ್ರಸೂತಿ ತಜ್ಞೆ
8. ಸೀತಮ್ಮ ಬ್ಯಾರಳಿ, ಕಡ್ತೂರು	ಪ್ರಸೂತಿ ತಜ್ಞೆ

ಕಡ್ತೂರಿನಲ್ಲಿ ನಡೆದ ಜೀವ ವೈವಿಧ್ಯ ಸ್ಪರ್ಧೆಯಲ್ಲಿ ಬಹಳಷ್ಟು ಮಕ್ಕಳು ಭಾಗವಹಿಸಿದ್ದು, ತಮ್ಮಲ್ಲಿರುವ ಪರಿಸರ ಪ್ರಜ್ಞೆಯನ್ನು ಮೆರೆದಿದ್ದಾರೆ.

ಕಮ್ಮರಡಿ

ಕಮ್ಮರಡಿಯಲ್ಲಿ ವಿವಿಧ ಸಂಘ ಸಂಸ್ಥೆ ಹಾಗೂ ಶಾಲಾ ಸಿಬ್ಬಂದಿಗಳು ಸೇರಿ ಆಯೋಜಿಸಿದ್ದ ಅನುಶೋಧಕರ ಪುರಸ್ಕಾರ ಸಭೆ ವಿಶ್ವ ತೀರ್ಥ ಬಾಲಿಕಾ ಪ್ರೌಢಶಾಲೆಯ ಆವರಣದಲ್ಲಿ ಜರುಗಿತು. ಕಮ್ಮರಡಿ ಶಾಲೆಯಲ್ಲಿ ನಡೆದ ಜೀವ



ವೈವಿಧ್ಯ ಸ್ಪರ್ಧೆಯಲ್ಲಿ ವಿವಿಧ ಜಾತಿಯ ಎಲೆ, ಸಸ್ಯ ಹಾಗೂ ಅದರ ಉತ್ಪನ್ನಗಳನ್ನು ಮಕ್ಕಳು ಗುರುತಿಸಿ, ಇತರರಿಗೂ ಇದರ ಬಗ್ಗೆ ಜ್ಞಾನ ಬೆಳೆಯುವಂತೆ ಮಾಡಿದರು. ಕಮ್ಮರಡಿಯಲ್ಲಿ ನಡೆದ ಅಡಿಗೆ ಸ್ಪರ್ಧೆಯಲ್ಲಿ ಅನೇಕ ಮಹಿಳೆಯರು ವಿವಿಧ ರೀತಿಯ ಸಾಂಪ್ರದಾಯಿಕ ಅಡಿಗೆಗಳನ್ನು ಮಾಡಿ ತಂದು ಮಲೆನಾಡಿನ



ರುಚಿಯನ್ನು ದೇಶದ ವಿವಿಧ ಭಾಗದ ಜನರಿಗೆ ಪರಿಚಯಿಸಿದರು. ಅಂದು ಕಮ್ಮರಡಿಯ ಶಾಲಾ ಮಕ್ಕಳಿಂದ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭೆಗೆ ಕಳೆ ನೀಡಿದವು. ಕಮ್ಮರಡಿಯಲ್ಲಿ ಗಮನ ಸೆಳೆದ ಇನ್ನೊಂದು ವಿಚಾರವೆಂದರೆ ಕಳೆದ 10 ವರ್ಷಗಳಿಂದಲೂ ಸಂಬಳ ಪಡೆಯದೆ ವಿಶ್ವತೀರ್ಥ ಬಾಲಿಕಾ ಪ್ರೌಢಶಾಲೆಯಲ್ಲಿ ಕೆಲಸ ಮಾಡುವ ಶಿಕ್ಷಕರು, ಪ್ರತೀ ವರ್ಷ ಶೇ 100ರ ಫಲಿತಾಂಶ ದೊರಕಿಸುತ್ತಿದ್ದಾರೆಂಬ ಸಂಗತಿ ಯಾತ್ರಿಕರಿಗೆ ಅಚ್ಚರಿ ತಂದಿತು. ಕಮ್ಮರಡಿಯಲ್ಲಿ ಕೆಳಗಿನವರನ್ನು ಸನ್ಮಾನಿಸಲಾಯಿತು.













ಅನುಶೋಧಕರು	ಅನುಶೋಧನೆ
1. ನೀಲಕಂಠ ಜೋಯಿಸ್, ಹಾಲುಗೋಡು	ನಾಟಿ ವೈದ್ಯ
2. ವಾಸುದೇವ ಹೆಬ್ಬಾರ್, ವಾರಳಿ	ನಾಟಿ ವೈದ್ಯ
3. ಕೃಷ್ಣಮೂರ್ತಿ ಜೋಯಿಸ್	ನಾಟಿ ವೈದ್ಯ
4. ಶ್ರೀನಿವಾಸ ಗೌಡ, ಚಿಕ್ಕಳೂರು	ನಾಟಿ ವೈದ್ಯ
5. ಲಕ್ಷ್ಮಿನಾರಾಯಣ ಭಟ್, ಕಮ್ಮರಡಿ	ನಾಟಿ ವೈದ್ಯ
6. ಚೂಡಪ್ಪ, ಶಂಕರಮನೆ	ನಾಟಿ ವೈದ್ಯ
7. ಲಕ್ಷ್ಮಿಕಾಂತಯ್ಯ, ಕುಂಬರಗೋಡು	ನಾಟಿ ವೈದ್ಯ
8. ಗಣೇಶಯ್ಯ, ಬಿ.ಆರ್., ಬೈರಣ	ನಾಟಿ ವೈದ್ಯ
9. ನರಸಿಂಹ ಮೂರ್ತಿ, ಬೈರಣ	ನಾಟಿ ವೈದ್ಯ
10. ಡಾಕಪ್ಪ ನಾಯಕ್, ವಾರಳಿ	ನಾಟಿ ವೈದ್ಯ
11. ಪುಟ್ಟಮ್ಮ, ಕೊಂಗವಳ್ಳಿ	ನಾಟಿ ವೈದ್ಯ
12. ವೆಂಕಪ್ಪ, ವರ್ತೆ	ಜಾನುವಾರು ಚಿಕಿತ್ಸೆ
13. ವೆಂಕಟರಾಮ ಭಟ್	ನಾಟಿ ವೈದ್ಯ
14. ಸಿದ್ದಣ್ಣ, ಅರೇಹಳ್ಳಿ	ನಾಟಿ ವೈದ್ಯ
15. ಜನಾರ್ಧನ ಗೌಡ, ಬೆಳ್ಮಡಿ	ನಾಟಿ ವೈದ್ಯ
16. ಶಂಕರ ಶೆಟ್ಟಿ, ಕಮ್ಮರಡಿ	ಸಂಗ್ರಹಕಾರ
17. ಇಬ್ರಾಹಿಂ, ಏರಿಗದ್ದೆ	ನಿಸ್ವಾರ್ಥ ಸೇವಕ
18. ಉಮೇಶ್, ಕಮ್ಮರಡಿ	ಅಂಗವಿಕಲ
19. ವಾದಿರಾಜ ಆಚಾರ್, ಕಮ್ಮರಡಿ	ಕುಶಲಕರ್ಮಿ
20. ಕಮಲಮ್ಮ, ಬಾನೊಳ್ಳಿ	ಪ್ರಸೂತಿ ತಜ್ಞೆ
21. ಪುನರ್ನವ ಬೀಜ ನಿಧಿ ಕೇಂದ್ರ	ಹಳೆ ತಳಿ ಬತ್ತ ಉಳಿಕೆ

ಇದೇ ಸಂದರ್ಭದಲ್ಲಿ ಕಮ್ಮರಡಿ ಸಮೀಪದ ನಡಬೇಳುವಿನ 103 ವರ್ಷದ ಅಕ್ಕಮ್ಮ ಅವರನ್ನು ಸನ್ಮಾನಿಸಲಾಯಿತು. ಅಕ್ಕಮ್ಮಳ ಹಲ್ಲು ಗಟ್ಟಿಯಿದೆ. ಅಡಕೆ ಜಗಿಯಲು ಶಕ್ತಿ ಇದೆ. ಕಣ್ಣು ಕಾಣುತ್ತದೆ. ಆಕೆಯ ಬೆನ್ನು ಬಾಗಿಲ್ಲ. ಅಕ್ಕಮ್ಮ ಊರಿನ ಅಜ್ಜಿಯಾಗಿದ್ದಾಳೆ. ಅಪಾರ ತಾಳ್ಮೆಯ ಈಕೆ ಊರಿನವರ ಪ್ರೀತಿಗೆ ಪಾತ್ರಳಾಗಿದ್ದಾಳೆ.

ಹಾಲ್ಮುತ್ತೂರು

ಕಮ್ಮರಡಿಯಿಂದ ಹಾಲ್ಮುತ್ತೂರಿಗೆ ಸಂಚರಿಸಿದ ಪಾದಯಾತ್ರೆ ಅಂದು ಸಂಜೆ ಹಾಲ್ಮುತ್ತೂರು ಶಾಲೆಯ ಆಟದ ಮೈದಾನದಲ್ಲಿ ಸೇರಿದ ಸಭೆಯಲ್ಲಿ ಪ್ರಾಂತ್ಯದ ಅನುಶೋಧಕರನ್ನು ಅನನ್ಯ ರೀತಿಯಲ್ಲಿ ಸನ್ಮಾನಿಸಲಾಯಿತು.

ಮಲೆನಾಡಿನಲ್ಲಿ 12ನೇ ಶೋಧಯಾತ್ರೆ



ಅನುಶೋಧಕರು	ಅನುಶೋಧನೆ
1. ಬಾಸ್ಕರ ಕೆ.ಟಿ., ಹಾಲ್ಮುತ್ತೂರು	ನಾಟಿ ವೈದ್ಯ
2. ದಾಸಪ್ಪ ಭೋವಿ	ಜಾನುವಾರು ಚಿಕಿತ್ಸೆ
3. ಕೃಷ್ಣಮೂರ್ತಿ	ಜಾನುವಾರು ಚಿಕಿತ್ಸೆ
4. ಉಪೇಂದ್ರ	ನಾಟಿ ವೈದ್ಯ
5. ಕುಮಾರಗೌಡರು, ಹೊಸೂರು	ಜಾನುವಾರು ಚಿಕಿತ್ಸೆ
6. ಗೋಪಾಲಕೃಷ್ಣ ಭಟ್	ನಾಟಿ ವೈದ್ಯ
7. ಸಿದ್ದಮ್ಮ	ನಾಟಿ ವೈದ್ಯೆ
8. ನಾಗಭಟ್, ಹಾಲ್ಮುತ್ತೂರು	ಹಾವು ಕಡಿತಕ್ಕೆ ಚಿಕಿತ್ಸೆ
9. ಶ್ರೀಯಲ್ಲಯ್ಯ	ಪರೋಪಕಾರಿ
10. ಕೃಷ್ಣಪ್ಪ, ಹೊಸಕೇರಿ	ಅಂಗವಿಕಲ
11. ಶ್ರೀನಿವಾಸ ಬೋವಿ	ಜಾನಪದ ಕಲೆಯ ಉಳಿಕೆ
12. ಬಾಲುನಾಯಕ್	ಧೀರ್ಘಾಯುಷಿ
13. ಲೋಕಯ್ಯ	ತಟ್ಟೆ ಬುಟ್ಟಿ ಕಲೆ
14. ಗೋಪಾಲಕೃಷ್ಣ	ಕುಶಲಕರ್ಮಿ
15. ಶ್ರೀಕಂಠಭಟ್, ಹಾಲ್ಮುತ್ತೂರು	ಗಿಡಮೂಲಿಕೆ ಸಂಗ್ರಹಕಾರ
16. ಗುಂಡಿ, ಕುಡುನೆಲ್ಲಿ	ಪ್ರಸೂತಿ ತಜ್ಞೆ
17. ನಾಗರತ್ನ, ಶಂಕರಮನೆ	ಜೀವವೈವಿಧ್ಯ ಸಂರಕ್ಷಣೆ

ಹಾಲ್ಮುತ್ತೂರಿನಲ್ಲಿ ಮಲೆನಾಡಿನ ವಿಶಿಷ್ಟ ಕಲೆಗಳಾದ ಅಂಟಿಗೆ ಪಂಟಿಗೆ, ಜನಪದ ಹಾಡುಗಳು, ಕೋಲಾಟ, ಇತ್ಯಾದಿಗಳನ್ನು ಪ್ರದರ್ಶಿಸಲಾಯಿತು. ಇದರ ಜೊತೆಗೆ ಗುಜರಾತಿಗಳ ವಿಶಿಷ್ಟ ನೃತ್ಯವಾದ ದಾಂಡಿ ನೃತ್ಯ ಸ್ಥಳೀಯರ ಗಮನ ಸೆಳೆಯಿತು. ಅಂದಿನ ಕಾರ್ಯಕ್ರಮವು ಜೇಸಿಸ್ ಅಧ್ಯಕ್ಷೆ ಅನ್ನಪೂರ್ಣ ಮೋಹನ್, ವಿಶ್ವತೀರ್ಥ ಬಾಲಿಕಾ ಪ್ರೌಢ ಶಾಲೆಯ ಮುಖ್ಯಸ್ಥರಾದ ಎನ್.ಟಿ. ಸುರೇಶ್ ಮತ್ತು ಶ್ರೀಮತಿ ರೇವತಿ ಅನಂತಮೂರ್ತಿಯವರ ಸಂಪೂರ್ಣ ಸಹಕಾರದೊಂದಿಗೆ ಯಶಸ್ವಿಯಗಿ ಮುಕ್ತಾಯವಾಯಿತು.

ಆರನೇ ದಿನ (30.12.2003)

ಬಂಡಿಗಡಿಗೆ

ಹಾಲ್ಮುತ್ತೂರಿನಿಂದ ಬಂಡಿಗಡಿಗೆ ಪ್ರವೇಶಿಸುವ ಮೂಲಕ ಶೋಧಯಾತ್ರೆಯ ಆರನೇ ದಿನ ಬಂಡಿಗಡಿಯಲ್ಲಿ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಸೀನಪ್ಪ, ನಾಯಕರು	ನಾಟಿ ವೈದ್ಯ
2. ಪಿಡ್ಡಯ್ಯ, ಬಂಡಿಗಡಿ	ಸೇವೆ
3. ರತ್ನಮ್ಮ, ಕೆಸುವಿನಮನೆ	ಪ್ರಸೂತಿ ತಜ್ಞೆ

ನಂತರ ಬಂಡಿಗಡಿಯಿಂದ ಹೊರಟ ಶೋಧಯಾತ್ರಿಗಳು ತುಂಗಾ ನದಿಯನ್ನು ದಾಟಿ ಕೊಳಾವರ ದೇವಾಲಯವನ್ನು ಪ್ರವೇಶಿಸಿದರು. ಅಂದಿನ ಆ ಬೇಸಿಗೆಯಲ್ಲೂ ದಟ್ಟವಾದ ನಿತ್ಯ ಹರಿದ್ವರ್ಣ ಕಾಡುಗಳ ಮಧ್ಯೆ ಹರಿಯುತ್ತಿರುವ ಹೊಳೆ ಮಲೆನಾಡಿನ ಪ್ರಕೃತಿ ಸೌಂದರ್ಯವನ್ನು ಪ್ರತಿಬಿಂಬಿಸುತ್ತಿತ್ತು.

ಕೊಳಾವರ

ಕೊಳಾವರ ದೇವಸ್ಥಾನದಲ್ಲಿ ಸೇರಿದ ಶೋಧಯಾತ್ರಾ ಸಭೆಯಲ್ಲಿ ಈ ಕೆಳಗಿನವರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಸುಬ್ರಹ್ಮಣ್ಯ ಉಡುಪ, ಗಣಪತಿ ಕಟ್ಟೆ	ರುಚಿಕರ ಅಡಿಗೆ
2. ಸಿ.ಎನ್. ಮೂರ್ತಿ, ಚಾರಣ ಬೈಲ್	ನಾಟಿ ವೈದ್ಯ
3. ರಾಮಯ್ಯ, ಎ.ಎಲ್, ಬಸವಾನಿ	ನಾಟಿ ವೈದ್ಯ
4. ಲಕ್ಷ್ಮಿನಾರಾಯಣ ಭಟ್	ನಾಟಿ ವೈದ್ಯ
5. ಕೃಷ್ಣಮೂರ್ತಿ, ಹಂಡಿಬೈಲ್	ನಾಟಿ ವೈದ್ಯ
6. ಲಲಿತಾ ಶಂಕರಪ್ಪ ಕಾಂಬೈಲ್	ನಾಟಿ ವೈದ್ಯ
7. ಉಮೇಶ್ ಚಂದ್ರನ್	ಪತ್ರಕರ್ತ
8. ಪದ್ಮಾವತಿ, ಕವಡೇ ಕಟ್ಟೆ	ಪ್ರಸೂತಿ ತಜ್ಞೆ
9. ಹೂವಮ್ಮ, ಕವಡೇ ಕಟ್ಟೆ	ಪ್ರಸೂತಿ ತಜ್ಞೆ

ಹೊಲಗೋಡು

ಕೊಳಾವರ ದೇವಾಲಯದಿಂದ ಹೊರಟ ಪಾದಯಾತ್ರೆ ಹೊಲಗೋಡು ಶಾಲೆ ಪ್ರವೇಶಿಸಿ ಈ ಕೆಳಗಿನವರನ್ನು ಸನ್ಮಾನಿಸಿತು.

ಅನುಶೋಧಕರು	ಅನುಶೋಧನೆ
1. ಮಂಜುನಾಥ, ಹೊಲಗೋಡು	ಕಲಾವಿದ
2. ಬಡಿಯಣ್ಣ	ನಾಟಿ ವೈದ್ಯ
3. ರಾಮಿ	ಸಾಂಪ್ರದಾಯಿಕ ಹಾಡು
4. ಸಣ್ಣಮ್ಮ	ಪ್ರಸೂತಿ ತಜ್ಞೆ





ಬೊಮ್ಮಲಾಪುರ

ಹೊಲಗೋಡು ಶಾಲೆಯಿಂದ ಹೊರಟ ಶೋಧಯಾತ್ರಾ ತಂಡ ಬೊಮ್ಮಾಪುರ ದೇವಾಲಯದಲ್ಲಿ ಸಭೆ ಸೇರಿ ಈ ಕೆಳಗಿನವರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಎಂ.ಎ. ಸುಬ್ಬಣ್ಣ ಭಟ್	ನಾಟಿ ವೈದ್ಯ
2. ಅನಂತ ಭಟ್	ನಾಟಿ ವೈದ್ಯ
3. ಗೌರಮ್ಮ ಮಠಗೋಡು	ನಾಟಿ ವೈದ್ಯ
4. ಸೂರ್ಯನಾರಾಯಣ, ಕತ್ತಲಗಿರಿ	ಗಿಡಮೂಲಿಕೆ ತಜ್ಞ
5. ಸೀತಾರಾಮ, ಬೊಮ್ಮಾಪುರ	ನಾಟಿ ವೈದ್ಯ
6. ಸಿದ್ದಣ್ಣ, ಮೆಣಸೂರು	ನಾಟಿ ವೈದ್ಯ
7. ಕೃಷ್ಣ, ಮೆಣಸೂರು	ಜಾನುವಾರು ಚಿಕಿತ್ಸೆ
8. ಉಪೇಂದ್ರನಾಯಕ್, ಕೊಪ್ಪ	ನಾಟಿ ವೈದ್ಯ
9. ಸುಧಾಕರ ಭಂಡಾರಿ	ಜಾದೂ ವಿದ್ಯೆ
10. ರಾಜಶಂಕರ್, ಬೊಮ್ಮಾಪುರ	ಜಾದೂ ವಿದ್ಯೆ
11. ಶೇಷಮ್ಮ	ಪ್ರಸೂತಿ ತಜ್ಞೆ
12. ಗೋಪಣ್ಣ, ಸೆಟ್ಟಿಗದ್ದೆ	ಕರಕುಶಲ ಕಲೆ
13. ಗೋಪಾಲ, ಬೊಮ್ಮಾಪುರ	ತಟ್ಟಿ ಬುಟ್ಟಿ ಕಲೆ
14. ಶೇಷಣ್ಣ, ಬಿಳಿಗೆರೆ	ತಟ್ಟಿ ಬುಟ್ಟಿ ಕಲೆ
15. ಎಸ್.ಟಿ. ರಾಮಕೃಷ್ಣ	ಯಕ್ಷಗಾನ ಕಲಾವಿದ






ಹರಿಹರಪುರದಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಚಾಂದ್ ಹುಸೇನ್ ಸಾಬ್	ಸ್ವಯಂ ಬಾವಿ ತೋಡಿರುವುದು
2. ಮರಿಯಪ್ಪ, ಹೊಸಕೊಪ್ಪ	ನಾಟಿ ವೈದ್ಯ
3. ಹೆಚ್.ಯು. ನಾಗಭೂಷಣಯ್ಯ	ನಾಟಿ ವೈದ್ಯ
4. ಹೆಚ್.ಎಸ್. ಕೃಷ್ಣಪ್ಪ, ಚಂಡೆಗುಡ್ಡೆ	ಚಿಕಿತ್ಸೆ
5. ಅಜೀಜಮ್ಮ, ಹೊನಗೋಡು	ಪ್ರಸೂತಿ ತಜ್ಞೆ
6. ಕಮಲ ಸೆಡ್ತಿ, ಹೊನಗೋಡು	ಪ್ರಸೂತಿ ತಜ್ಞೆ
7. ವೆಂಕಮ್ಮ, ಹೊಸಕೊಪ್ಪ	ಪ್ರಸೂತಿ ತಜ್ಞೆ
8. ಚೂಡಣ್ಣ ಗೌಡರು	ಆಶು ಕವಿ
9. ಜಗನ್ನಾಥ ಪೂಜಾರಿ	ತೆಂಗಿನ ಮರದ ಚಿಕಿತ್ಸೆ
10. ಶ್ರಿ ವೆಂಕಟ ಕೃಷ್ಣಪ್ಪ, ನುಗ್ಗಿಮಕ್ಕಿ	150 ವರ್ಷಗಳ ದಾಖಲೆ ಸಂಗ್ರಹ




ಹರಿಹರಪುರ

ಬೊಮ್ಮಾಲಾಪುರದಿಂದ ಹರಿಹರಪುರದೆಡೆ ಕಾಲ್ನಡಿಗೆಯು ಮುಂದುವರಿಯಿತು. ಹರಿಹರ ಪುರಕ್ಕೆ ಪ್ರವೇಶಿಸುವಾಗ ತೂಗು ಸೇತುವೆ ಮೂಲಕ ತುಂಗಾನದಿಯನ್ನು ದಾಟಿದ ಅನುಭವ ಶೋಧಯಾತ್ರಿಗಳಿಗೆ ಮರೆಯಲಾಗದ್ದು. ಬಹಳಷ್ಟು ಜನ ತೂಗುಸೇತುವೆಯನ್ನು ಅದೇ ಮೊದಲ ಬಾರಿಗೆ ನೋಡಿದ್ದರು. ಮುಸ್ಸಂಜೆಯ ಇಳಿಹೊತ್ತಿನಲ್ಲಿ ಹರಿಹರ ಪುರ ಪ್ರವೇಶಿಸಿದಾಗ ಅಲ್ಲಿಯ ಜನರ ಸ್ವಾಗತವು ಎಲ್ಲರನ್ನೂ ಬೆರಗು ಮಾಡಿತು. ಹರಿಹರ ಪುರದ ಬೀದಿ ಬೀದಿಗಳಲ್ಲಿ ಜನರು ರಸ್ತೆಯನ್ನು ಸಾರಿಸಿ ರಂಗೋಲಿ ಹಾಕಿ ಪಾದಯಾತ್ರಿಗಳಿಗೆ ಸ್ವಾಗತ ಕೋರಿದರು. ಹರಿಹರ ಪುರ ಮಠ ಪ್ರವೇಶಿಸಿದ ಶೋಧಯಾತ್ರಿಕರ ತಂಡ ಅಲ್ಲಿ ದೇವಿಯ ದರ್ಶನವನ್ನು ಪಡೆದು ನಂತರ ಹರಿಹರಪುರ ಛತ್ರದಲ್ಲಿ ಅನುಶೋಧಕರ ಸನ್ಮಾನ ಸಭೆಯಲ್ಲಿ ಭಾಗವಹಿಸಿತು.

ಇವರಲ್ಲಿ ದೇವರಮನೆಯ ಚಾಂದ್ ಹುಸೇನ್ ಸಾಬ್ ಎಲ್ಲರ ಗಮನ ಸೆಳೆದರು. ಈತ 2 ವರ್ಷದ ಹಿಂದೆ ನೀರಿಗಾಗಿ ಪರದಾಟ ನಡೆಸಿದ್ದರು. ನೀರು ತರಲು ಹೋದ ಆತನ ಹೆಂಡತಿಗೆ ಊರಿನ ಕೆಲವರು ಅವಮಾನ ಮಾಡಿ ಹಲ್ಲೆನಡೆಸಿದ್ದರು. ಅದಕ್ಕಾಗಿ ಆ ದಂಪತಿಗಳು ಸ್ವಯಂ ಬಾವಿ ತೋಡಲು ನಿರ್ಧರಿಸಿದರು. ಹಗಲೆಲ್ಲಾ ಈತ ಗಾರೆ ಕೆಲಸಕ್ಕೆ ಹೋಗುತ್ತಿದ್ದ. ಮನೆಗೆ ಬಂದು ಬಾವಿ ತೋಡಲು ಆರಂಭಿಸುವಾಗ 7 ಗಂಟೆಯಾಗುತ್ತಿತ್ತು. ಅವರು ರಾತ್ರಿ 12ರವರೆಗೂ ಬಾವಿ ತೋಡುತ್ತಿದ್ದರು. ಹೀಗೆ ಸುಮಾರು 1 ವರ್ಷ ಬಾವಿ ತೋಡಿದರು. ಮಧ್ಯೆ 48 ಅಡಿ ತೋಡಿದಾಗ ಗಟ್ಟಿ ಕಲ್ಲು ಸಿಕ್ಕಿತು. ಅವರೇ ಕಲ್ಲು ಕುಟ್ಟಿ ಒಡೆದರು. ಹೀಗೆ ಮಾಡುವಾಗ ಅವರ ಕೈ ಗಾಯವಾಗಿ ಊದಿಕೊಳ್ಳುತ್ತಿತ್ತು. 60 ಅಡಿ ತೋಡಿ ನೀರು ಬಾರದಿದ್ದಾಗಲೂ ಅವರು ಧೃತಿಗೆಡಲಿಲ್ಲ. 70 ಅಡಿ ತೆಗೆದು ನೀರು ಕಂಡ ಘಟನೆ ವಿವರಿಸುವಾಗ ದಂಪತಿಗಳು ಗಳಗಳನೇ ಅತ್ತು ಬಿಟ್ಟರು. ಸನ್ಮಾನಿಸಿದ ರಾಷ್ಟ್ರೀಯ ಅನುಶೋಧನಾ

ಮಲೆನಾಡಿನಲ್ಲಿ 12ನೇ ಶೋಧಯಾತ್ರೆ



ಪ್ರತಿಷ್ಠಾನದ ಮುಖ್ಯಸ್ಥ ಪ್ರೊ. ಅನಿಲ್ ಕೆ. ಗುಪ್ತ ಈತನ ಹೆಂಡತಿ ಮಕ್ಕಳನ್ನು ಕರೆ ತರಲು ಹೇಳಿ ನಾಲ್ವರನ್ನೂ ಕೂರಿಸಿ ಸನ್ಮಾನ ಮಾಡಿದರು. ಅಂದು ರಾತ್ರಿ ಶ್ರೀಯುತ ಹೆಬ್ಬಾರ್‌ರವರು ಚಿತ್ರಿಸಿ ಸಂಗ್ರಹಿಸಿರುವ ಪಶ್ಚಿಮ ಘಟ್ಟಗಳ ಜೀವ ವೈವಿಧ್ಯತೆಯನ್ನು ಸಾರುವ ಛಾಯಾಚಿತ್ರಗಳ ಸ್ಲೈಡ್ ಷೋ ಏರ್ಪಡಿಸಲಾಗಿತ್ತು. ಶೋಧಯಾತ್ರಿಗಳ ತಂಡ ಅಂದು ಪರಿಹರಪುರ ಛತ್ರದಲ್ಲಿ ತಂಗಿತು. ಹರಿಹರಪುರದ ಶ್ರೀಕಂಠ ಜೋಯ್ಸರವರು ಅಂದಿನ ಸಭೆಗೆ ಸಂಪೂರ್ಣ ಸಹಕಾರ ನೀಡಿದರು.





ಏಳನೇ ದಿನ (31.12.2003)

ಜಮ್ಮಿಟಗೆ

ಅಂದು ಶೋಧಯಾತ್ರೆಯ ಅಂತಿಮ ದಿನವಾಗಿದ್ದು ಅಂದಿನ ಪಾದಯಾತ್ರೆ ಜಮ್ಮಿಟಗೆ ದೇವಾಲಯದಿಂದ ಪ್ರಾರಂಭವಾಯಿತು. ಜಮ್ಮಿಟಗೆ ದೇವಾಲಯದಲ್ಲಿ ಸಭೆ ಸೇರಿ, ಅಲ್ಲಿನ ಅಪರೂಪದ ಕಲಾಕೃತಿಗಳನ್ನು, ಪುರಾತನ ತತ್ವಗಳನ್ನು ಸಾರುವ ಕೆತ್ತನೆ ಕಲೆಗಳನ್ನೂ, ಛಾಯಾ ಚಿತ್ರಗಳನ್ನೂ ವೀಕ್ಷಿಸಲಾಯಿತು. ಅಲ್ಲಿ ವಿಶೇಷ ಫೋಟೊಗ್ರಾಫಿಗಾಗಿ ಜಮ್ಮಿಟಗೆ ಅಗ್ರಹಾರದ ಶ್ರೀಯುತ ಶ್ರೀಕಂಠ ಅವರನ್ನು ಸನ್ಮಾನಿಸಲಾಯಿತು.

ಅದ್ದಡ

ಜಮ್ಮಿಟಗೆಯಿಂದ ಅದ್ದಡದಲ್ಲಿ ಸಭೆ ಸೇರಿ ಅಲ್ಲಿ ಈ ಕೆಳಗಿನ ಅನುಶೋಧಕರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ಗೋಪಣ್ಣ	ಮೆಶಿನ್ ರಿಪೇರಿ
2. ಭಾಂದವ್ಯ ಯುವಕ ಸಂಘ	ಪರಿಸರ ಹೋರಾಟ
3. ಕೃಷ್ಣಪ್ಪ, ಅದ್ದಡ	ಅಂಧ ಕಲಾವಿದ
4. ಪಾರ್ವತಿ	ಸಾಂಪ್ರದಾಯಿಕ ಹಾಡು

ಕೊಪ್ಪ


ಅದ್ದಡದಿಂದ ಕೊಪ್ಪಕ್ಕೆ ಸಂಚರಿಸಿದ ಶೋಧಯಾತ್ರೆಯ ತಂಡ ರಾಷ್ಟ್ರೀಯ ಪ್ರಶಸ್ತಿ ವಿಜೇತ ಕೊಪ್ಪಾದ ನರಸಿಂಹ ಭಂಡಾರಿಯವರು ಅಭಿವೃದ್ಧಿಪಡಿಸಿದ ಅಡಿಕೆ ಸುಲಿಯುವ ಯಂತ್ರವನ್ನು ಅವರ ಕಾರ್ಯಾಗಾರದಲ್ಲೇ ವೀಕ್ಷಿಸಿ ಅಲ್ಲಿಂದ ಕೊಪ್ಪ ಸಹಕಾರಿ ಸಾರಿಗೆ ಸಂಸ್ಥೆಯಲ್ಲಿ ಸಭೆ ಸೇರಿದರು. ಅಂದಿನ ಸಭೆಯನ್ನು ಸಾರಿಗೆ ಸಹಕಾರ ಸಂಸ್ಥೆಯ ಅಧ್ಯಕ್ಷರಾದ ಚಿಕ್ಕೇಗೌಡರು ಮತ್ತು ಸಿಬ್ಬಂಧಿ ವರ್ಗದವರು ಯಶಸ್ವಿಯಾಗಿ ನಡೆಸಿಕೊಟ್ಟರು. ಅಲ್ಲಿ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆಗಳನ್ನು ಅವಲೋಕಿಸಿ ಸಂಸ್ಥೆಯ ಒಂಬತ್ತು ಜನ ನಿರ್ದೇಶಕರನ್ನು ಪುರಸ್ಕರಿಸಲಾಯಿತು. ಅಲ್ಲಿಂದ ಶೋಧಯಾತ್ರಿಕರ ತಂಡ ಕೊಪ್ಪದ ಪುರಸಭಾ ಭವನದತ್ತ ಸಾಗಿತು. ಅಲ್ಲಿ ಈ ಕೆಳಗಿನವರನ್ನು ಸನ್ಮಾನಿಸಲಾಯಿತು.

ಅನುಶೋಧಕರು	ಅನುಶೋಧನೆ
1. ರಮೇಶ್, ಹುಲುಮಕ್ಕಿ	ಕಲ್ಲು ಬಾವಿ ತೋಡಿದ ಸಾಹಸ
2. ಎ.ಎಂ. ಕೃಷ್ಣಮೂರ್ತಿ, ಆರೂರು	ನಾಟಿ ವೈದ್ಯ
3. ದರ್ಮೇಗೌಡ, ಕೋಡೊಳ್ಳಿ	ನಾಟಿ ವೈದ್ಯ
4. ನಾಗರಾಜ, ಶಿವಮೊಗ್ಗ	ನಾಟಿ ವೈದ್ಯ
5. ಅರುಣ್ ಕುಮಾರ್	ಉಳುಕು ವೈದ್ಯ
6. ನೀಲಯ್ಯ ಪೂಜಾರಿ, ಸಿದ್ದರ ಮಠ	ನಾಟಿ ವೈದ್ಯ
7. ಶಿವಣ್ಣನವರು, ಗುರುಕುಲ	ನ್ಯೂರೊ ತೆರಪಿ
8. ಶ್ರೀಂಗೇಶ್ವರ್ ದೇವಾಲೆ ಕಣಜ	ವಿಶೇಷ ಕೈಗಾಡಿ ತಯಾರಿಕೆ
9. ಗಣೇಶ್ ರಾವ್, ಗಾಡಿಕೆರೆ	ವಿಗ್ರಹ ಕಲಾವಿದ
10. ಎಸ್.ಬಿ. ವಿಠಲ, ಸಿದ್ದರ ಮಠ	ಅಂಟಿಗೆ ಪಿಂಟಿಗೆ
11. ಸಂಜೀವ ಹಾಂಡ, ಅರೇಹಳ್ಳಿ	[illegible]
12. ರತ್ನಮ್ಮ	ನಾಟಿ ವೈದ್ಯ


ಕೊಪ್ಪದಲ್ಲಿ ನಡೆದ ಶೋಧಯಾತ್ರಾ ಮುಕ್ತಾಯ ಸಮಾರೋಪದಲ್ಲಿ ಶ್ರೀ ನರಸಿಂಹ ಭಂಡಾರಿಯವರು ಸ್ವಾಗತ ಭಾಷಣ, ಶ್ರೀ ಪ್ರಭಾಕರ ಕಾರಂತ್‌ರವರು ಯಾತ್ರಾವರದಿ ಹಾಗೂ ಡಾ. ಟಿ.ಎಸ್. ಪ್ರಕಾಶ್ ಕಮ್ಮರಡಿಯವರು ಶೋಧಯಾತ್ರಾ ಪ್ರತಿಕ್ರಿಯೆ ನೀಡಿದರು. ಶ್ರೀ ಆರೂರು ರಮೇಶ್‌ರಾವ್‌ರವರ















ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಪ್ರೊ. ಅನಿಲ್ ಗುಪ್ತಾರವರು ಮುಖ್ಯ ಅತಿಥಿಯಾಗಿದ್ದರು. ಶ್ರೀ ಚಿಕ್ಕೇಗೌಡರು ವಂದನಾರ್ಪಣೆ ಮಾಡಿದರು. ಅಂದಿಗೆ ಮುಕ್ತಾಯವಾದ ಏಳುದಿನಗಳ ಯಶಸ್ವೀ "ಶೋಧಯಾತ್ರೆ" ಭರವಸೆ, ಆಶಯ ಹಾಗೂ ತೃಪ್ತಿಯನ್ನು ಜನರಲ್ಲಿ ಮೂಡಿಸಿ, ಇಂತಹ ಮಹತ್ ಕಾರ್ಯದ ಯಶಸ್ಸಿನೊಂದಿಗೆ ಕರ್ನಾಟಕದ ಮಲೆನಾಡಿನ ಜನರ ಸಂಸ್ಕೃತಿ, ಪರಂಪರೆ, ಹೃದಯ ವೈಶಾಲ್ಯತೆ ಮತ್ತು ಅಲ್ಲಿನ ಪ್ರಕೃತಿ ಸೊಬಗಿನ ಸ್ಪಷ್ಟ ಚಿತ್ರಣದೊಂದಿಗೆ ಅಹಮದಾಬಾದಿನತ್ತ ಪ್ರಯಾಣ ಬೆಳೆಸಿತು.

ಈ ಶೋಧಯಾತ್ರೆಯಲ್ಲಿ ಸಹಕರಿಸಿದ ಸಹಕಾರಿ ಸಾರಿಗೆ, ಕೊಪ್ಪ, ವಿನಾಯಕ ಗ್ರಾಮಾಭ್ಯುದಯ ಸಂಸ್ಥೆ, ಬೆಳವಿನಕೊಡಿಗೆ, ಜೇಸಿಸ್, ಜೂನಿಯರ್ ಛೇಂಬರ್ಸ್ ಬಿಳಾಲು ಕೊಪ್ಪ, ಮಕರಂದ ಸ್ವಸಹಾಯ ಸಂಘ, ಮೇಗುಂದಾ ಹೋಬಳಿ ಕನ್ನಡ ಸಾಹಿತ್ಯ ಪರಿಷತ್, ಸ್ವಸಹಾಯ ಸಂಘ, ಕೆರೆಮನೆ, ಜೇಸಿಸ್, ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್, ಶೃಂಗೇರಿ, ಜೇಸಿಸ್, ಕಮ್ಮರಡಿ, ರೋಟರಿ ಸಮುದಾಯ ದಳ, ಹರಿಹರಪುರ, ಜೇಸಿಸ್, ಲಯನ್ಸ್ ಮತ್ತು ರೋಟರಿ ಕ್ಲಬ್‌ಗಳು (ಗ್ರಾಮೀಣವು ಸೇರಿ), ಕೊಪ್ಪ

ಮ್ಯಾಮ್‌ಕೋಸ್, ಕೊಪ್ಪ ಮತ್ತು ಎಲ್ಲ ಹಳ್ಳಿ ಗಣ್ಯರು, ಗ್ರಾಮಸ್ಥರು ಮತ್ತು ಇತರ ಸಂಘ ಸಂಸ್ಥೆಗಳನ್ನು "ಹಿತ್ತಲಗಿಡ" ಬಳಗವು ಅಭಿನಂದಿಸುತ್ತದೆ.

ಶ್ರೀ ಗರವಾಡರ ಗಂಭೀರ ಪ್ರಯತ್ನ

ವಿಜ್ಞಾನದ ನೈಜ ಪ್ರಗತಿಗೆ ಸಂವಿಧಾನಾತ್ಮಕ ಅಡೆತಡೆಗಳನ್ನು ನಿವಾರಿಸುವಲ್ಲಿ ದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಕನ್ನಡಿಗ ಶ್ರೀ ಎಸ್. ಆರ್. ಗಾರವಾಡರು ಒಂದು ಗಂಭೀರ ಪ್ರಯತ್ನ ನಡೆಸುತ್ತಿರುವರು. ನಮ್ಮ ಹಿತ್ತಲಗಿಡ, ಹನಿಬೀ ಬಳಗ ಮತ್ತು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಮೂಲಕ ನಿಧಾನವಾಗಿ ಹೊರ ಜಗತ್ತಿಗೆ ಪರಿಚಯವಾಗುತ್ತಿರುವ ಪಾರಂಪರಿಕ ಜ್ಞಾನ ಮತ್ತು ತಳಮಟ್ಟದ ಅನುಶೋಧನೆ ಇವೇ ಮೊದಲಾದ ಜನಪರ ವಿಜ್ಞಾನ ಮತ್ತು ತಂತ್ರಜ್ಞಾನಗಳ ಬಗ್ಗೆ ಹಳ್ಳಿ ಹಳ್ಳಿಗಳಲ್ಲಿಯುವ ಜನರಲ್ಲಿ ಅರಿವು ಮೂಡಿಸಿ ಈ ಬಗ್ಗೆ ಪ್ರಯೋಗ ನಡೆಯುವಂತಾಗಲು ಸಂವಿಧಾನಕ್ಕೆ ತಿದ್ದುಪಡಿ ತರುವತ್ತ ಒಂದು ಖಾಸಗಿ ಮಸೂದೆ ಕರಡು ಪ್ರತಿ ತಯಾರಿಸಿರುವರು. ಕೆಲವು ಲೋಕಸಭೆ ಮತ್ತು ರಾಜ್ಯ ಸಭೆ ಸದಸ್ಯರುಗಳ ಮೂಲಕ ಇದನ್ನು ಮಂಡಿಸಲು ಗಂಭೀರ ಪ್ರಯತ್ನ ನಡೆಸಿರುವರು. ಮಿತ್ರ ಶ್ರೀ ಗರವಾಡರ ಈ ಪ್ರಯತ್ನ ಸ್ವಾಗತಾರ್ಹ

- ಸಂಪಾದಕ

ರಾಜ್ಯ ಸರ್ಕಾರದ ಉದ್ದೇಶಿತ ಸಾವಯವ / ಜೈವಿಕ ಗ್ರಾಮಗಳ ಸ್ಥಾಪನೆಗೆ ಸ್ಥಳ ಆಯ್ಕೆ ಬಗ್ಗೆ ಒಂದು ಮನವಿ

ಕರ್ನಾಟಕ ರಾಜ್ಯ ಸರ್ಕಾರವು ಸಾವಯವ ಕೃಷಿ ನೀತಿಯನ್ನು ಹೊರತಂದಿದ್ದು 2004-05ನೇ ಸಾಲಿನಿಂದ ಸಾವಯವ ಕೃಷಿ ಉತ್ತೇಜನಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಸಾವಯವ ಕೃಷಿ ನೀತಿಯನ್ನು ಒಳಗೊಂಡ ಕಿರು ಹೊತ್ತಿಗೆಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ನೀತಿಯ ಪ್ಯಾರಾ 5.9ರ ಅನ್ವಯ ಪ್ರತಿ ಹೋಬಳಿಯ ಕನಿಷ್ಠ ಪಕ್ಷ ಒಂದು ಹಳ್ಳಿಯನ್ನು ಹಂತ ಹಂತವಾಗಿ ಸಾವಯವ ಕೃಷಿ ಗ್ರಾಮವಾಗಿ ಪರಿವರ್ತಿಸಬೇಕಾಗಿರುತ್ತದೆ. ಪ್ರಾರಂಭಕ್ಕೆ 2004-05 ನೇ ಸಾಲಿನಲ್ಲಿ ಪ್ರತಿ ಜಿಲ್ಲೆಯ ಒಂದು ಗ್ರಾಮವನ್ನು ಮಾದರಿ 'ಸಾವಯವ ಕೃಷಿ ಗ್ರಾಮ' ವನ್ನಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ. ಗ್ರಾಮವನ್ನು ಆಯ್ಕೆ ಮಾಡುವಾಗ ಈ ಕೆಳಗೆ ತಿಳಿಸಿರುವ ಅಂಶಗಳತ್ತ ಗಮನ ಹರಿಸಬೇಕಾಗಿದೆ.

- ★ ರಸಗೊಬ್ಬರಗಳು ಮತ್ತು ಕೀಟನಾಶಕಗಳ ಕನಿಷ್ಠ ಬಳಕೆ
- ★ ಬೆಳೆ ಪದ್ಧತಿಗಳು ಮತ್ತು ನಮೂನೆಗಳ ಪ್ರಚಲಿತ ಬೆಳೆ ವೈವಿಧ್ಯತೆ
- ★ ಆ ಪ್ರದೇಶದ ಸಾವಯವ ಕೃಷಿ ಪರಿಕರ ಸಂಪನ್ಮೂಲದ ಸಾಮರ್ಥ್ಯ
- ★ ಕೃಷಿ, ತೋಟಗಾರಿಕೆ, ರೇಷ್ಮೆ ವ್ಯವಸಾಯ, ಪಶು ಸಂಗೋಪನೆ, ಹಂದಿ ಸಾಕಣೆ, ಜೇನು ಸಾಕಣೆ ಇತ್ಯಾದಿಗಳನ್ನೊಳಗೊಂಡ ಪ್ರಚಲಿತ ಬೇಸಾಯ ಪದ್ಧತಿಗಳು
- ★ ವಿವಿದೋದ್ದೇಶ ವೃಕ್ಷಗಳ ಸಾಂದ್ರತೆ
- ★ ಪ್ರಸ್ತುತ ರೈತರು ಅನುಸರಿಸುತ್ತಿರುವ ಸಾವಯವ ಕೃಷಿ ಪದ್ಧತಿಗಳ ಹಂತ
- ★ ರೈತ ಗುಂಪುಗಳು/ಸ್ವಸಹಾಯ ಗುಂಪುಗಳು/ಸರ್ಕಾರೇತರ ಸಂಸ್ಥೆಗಳ ಇರುವಿಕೆ
- ★ ಆ ಪ್ರದೇಶದಲ್ಲಿ ಸಾವಯವ ಉತ್ಪನ್ನಗಳ ರಫ್ತಿಗಿರುವ ಸಾಮರ್ಥ್ಯ
- ★ ಮೂಲಭೂತ ಸೌಕರ್ಯಗಳು ಮತ್ತು ಸಾಗಾಣಿಕೆ ಲಭ್ಯತೆ
- ★ ಸಾವಯವ ಕೃಷಿ ಪದ್ಧತಿಯಲ್ಲಿ ಉತ್ಪಾದನೆ ಕೈಗೊಳ್ಳಲು ವಾಣಿಜ್ಯ / ಔದ್ಯಮಿಕ / ಔಷಧೀಯ / ಸುಗಂಧ / ಆಹಾರ ಮತ್ತು ವ್ಯಾಪಾರೀ ಪ್ರಾಮುಖ್ಯತೆಯುಳ್ಳ ಬೆಳೆಗಳನ್ನು ಗುರುತಿಸಲಾಗುತ್ತದೆ.

ರೈತರ ಕಂಪನಿಗೆ [illegible] ನೀಡುವ ಮೂಲಕ ಪಾಲುದಾರರಾಗಲು ಅಲ್ಲಿಯ ರೈತರ [illegible].

ಆಯ್ಕೆ ಮಾಡುವ ಸ್ಥಳವು ಒಂದೇ ಪ್ರದೇಶದಲ್ಲಿ 250-300 ಹೆಕ್ಟೇರ್ ವಿಸ್ತೀರ್ಣ ಹೊಂದಿರಬೇಕು. ಅತಿ ಮುಖ್ಯವಾಗಿ ಈ ಸ್ಥಳದ ಎಲ್ಲಾ ರೈತರುಗಳು ಸಾವಯವ ಕೃಷಿ ಪದ್ಧತಿಯನ್ನು ಅನುಸರಿಸಲು ಒಲವು ಉಳ್ಳವರಾಗಿರಬೇಕು ಹಾಗೂ ತಮ್ಮಲ್ಲೇ ಸಂಘವೊಂದನ್ನು ರಚಿಸಿಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕೆ ಎಲ್ಲಾ ಅಗತ್ಯ ಸಹಕಾರ ನೀಡಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮೇಲೆ ತಿಳಿಸಿರುವ ಅಂಶಗಳಿಗೆ ಬಹುಪಾಲು ಹೊಂದಿಕೆಯಾಗುವ ಗ್ರಾಮಗಳು / ಸ್ಥಳಗಳು ತಮ್ಮ ಗಮನಕ್ಕೆ ಬಂದಿದ್ದಲ್ಲಿ ಆ ಸ್ಥಳದ ಪೂರ್ಣ ವಿಳಾಸ ಹಾಗೂ ಸಂಬಂಧಪಟ್ಟ ಇತರೆ ಮಾಹಿತಿಯನ್ನು ಕೂಡಲೇ ಅವರ ಕೃಷಿ ನಿರ್ದೇಶಕರು (ಸಾವಯವ ಕೃಷಿ) ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ.

ವಿಭಿನ್ನ ರುಚಿಯ ಹವ್ಯಕ ಪಾಕೋತ್ಸವ

ಯಾವುದೇ ಸಮಾರಂಭ, ಹಬ್ಬ ಹರಿದಿನಗಳ ಪ್ರಮುಖ ಆಕರ್ಷಣೆ ಅಡಿಗೆ. ಯಾವುದೇ ವ್ಯಕ್ತಿ, ಸಂಪ್ರದಾಯ ಅಥವಾ ಜೀವನ ಶೈಲಿಯಲ್ಲಿ ವಿಭಿನ್ನತೆ ಇರುವಂತೆ ಅಡಿಗೆಯೂ ಕೂಡ ಒಂದು ರೀತಿಯ ವಿಭಿನ್ನತೆಯ ಆಗರ. "ಅಡಿಗೆ" ಎಂಬ ಕಲೆಯು ಸಮುದಾಯದಿಂದ ಸಮುದಾಯಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಸಹಜವಾಗಿ ಅನುಗುಣವಾಗುವಂತೆ ಪರಿವರ್ತಿತಗೊಳ್ಳುತ್ತಾ ಹೋಗುತ್ತವೆ. ಇಂತಹ ಒಂದು ವಿಭಿನ್ನ ರುಚಿಯ ಪರಿಚಯವೇ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ "ಹವ್ಯಕ ಪಾಕೋತ್ಸವ".

ಗಿರಿನಗರದ ವಿಶಾಲ ಮೈದಾನದ ಆವರಣದಲ್ಲಿ ಕಳೆದ ಫೆಬ್ರವರಿ 27 ಮತ್ತು 28ರಂದು ನಡೆದ ಎರಡು ದಿನಗಳ ಈ ಸಾಮೂಹಿಕ ಉತ್ಸವ, ಜನಾಕರ್ಷಣೆಯ ಕೇಂದ್ರಬಿಂದುವಾಗಿದ್ದು ನಗರದ ಜನರನ್ನು ತನ್ನೆಡೆಗೆ ಆಕರ್ಷಿಸಿತ್ತು. ಮೂಲತ: ಹವ್ಯಕರ ತವರೂರಾದ ಶಿವಮೊಗ್ಗ, ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಈ ತಿನಿಸುಗಳು ನಗರ ಪ್ರದೇಶಗಳಲ್ಲೂ ತನ್ನ ಪ್ರಭಾವ ಬೀರುತ್ತಿರುವುದು ಧನಾತ್ಮಕ ಲಕ್ಷಣ.

ಮೈದಾನದ ಆವರಣದಲ್ಲಿ ಪ್ರವೇಶಿಸುತ್ತಿರುವಂತೆಯೇ ಘಮ ಘಮಿಸುವ ಪರಿಮಳವು ಜನರನ್ನು ತನ್ನೆಡೆಗೆ ಆಕರ್ಷಿಸುತ್ತಿತ್ತು. ಆಯಾ ಕಾಲಕ್ಕೆ, ಹವಾಗುಣಕ್ಕೆ ಒಗ್ಗುವಂತೆ ತಯಾರಿಸುವ ಈ ವಿಶಿಷ್ಟ ಬಗೆಯ ತಿನಿಸುಗಳು ಆರೋಗ್ಯವರ್ಧಕವೂ ಆಗಿದ್ದು ದೈಹಿಕ ಹಾಗು ಮಾನಸಿಕ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ತಿನಿಸುಗಳಲ್ಲಿ ಕೆಲವಾದ ಗೆಣಸೆಲೆ, ತೊಡದೇವು, ಹಲಸಿನ ಹಣ್ಣಿನ ದೋಸೆ, ಅತ್ರಸ, ವಿವಿಧ ರೀತಿಯ ಹಪ್ಪಳಗಳು, ಉಪ್ಪಿನಕಾಯಿಗಳು, ರುಚಿಕರವಷ್ಟೇ ಅಲ್ಲದೆ ಔಷಧೀಯ ಗುಣಗಳನ್ನೂ ಹೊಂದಿವೆ. ಉದಾಹರಣೆಗೆ ಕಾಲ ಕಾಲಕ್ಕೆ ಸಿಗುವ ಸೊಪ್ಪುಗಳಿಂದ ತಯಾರಿಸುವ ತಂಬುಳಿಗಳು ಆಯಾ ಕಾಲಕ್ಕೆ ಸಹಜವಾಗಿ ಕಾಣಿಸಿಕೊಳ್ಳಬಹುದಾದ ಸಣ್ಣಪುಟ್ಟ ಖಾಯಿಲೆಗಳನ್ನು ನಿವಾರಿಸುವುದಲ್ಲದೆ ಮನುಷ್ಯನ ದೇಹಕ್ಕೆ ಅವಶ್ಯಕವಿರುವ ಹಲವಾರು ಸೂಕ್ಷ್ಮ ಪೋಷಕಾಂಶಗಳನ್ನೂ ಒದಗಿಸುತ್ತವೆ. "ತೊಡದೇವು" ಎಂಬ ಹವ್ಯಕರ ಸ್ವಾದಿಷ್ಟ ತಿನಿಸು ಇತ್ತೀಚೆಗೆ ಮರೆಯಾಗುತ್ತಿರುವ ಒಂದು ವಿಶಿಷ್ಟ ಅಡಿಗೆ. ಶ್ರಮ ಮತ್ತು ಸಮಯ ಎರಡನ್ನೂ ಹೆಚ್ಚು ಕೇಳುವ ತೊಡದೇವು ರುಚಿಯಲ್ಲಿ ಮಾತ್ರ ಒಂದು ಕೈ ಮೇಲೆಯೇ.

ವಿವಿಧ ರೀತಿಯ ತಿನಿಸುಗಳಷ್ಟೇ ಅಲ್ಲದೆ, ಆರೋಗ್ಯ ವರ್ಧಕ, ರೋಗ ನಿವಾರಕ ಪಾನೀಯಗಳೂ ಆದ ನಿಂಬೆಹುಲ್ಲಿನ ಜ್ಯೂಸ್, ಪುನರ್ಪುಳಿ ಜ್ಯೂಸ್, ಶುಂಠಿ ರಸ ಹೀಗೆ ಹಲವಾರು ರೀತಿಯ ಪಾನೀಯಗಳೂ ಇಲ್ಲಿ ಲಭ್ಯವಿದ್ದವು. ಜೊತೆಗೆ ಈ ರೀತಿ ರೋಗಗಳನ್ನು ನಿವಾರಿಸಬಲ್ಲ ಅನೇಕ ಔಷಧಗಳೂ, ವಿವಿಧ ರೀತಿಯ ಕಷಾಯಗಳೂ ಇದ್ದವು. ಬಸಳೆ ಸೊಪ್ಪಿನ ಮಿಶ್ರಣ, ತುಳಸಿ ಕಷಾಯ, ಪನ್ನೀರ್ ಗುಲಾಬಿ ಮಿಶ್ರಣ, ಭಾವನಾ ಶುಂಠಿ ಮುಂತಾದವು ಜೀರ್ಣ ಶಕ್ತಿಯನ್ನು ವೃದ್ಧಿಸಿದರೆ ಮಧು ಮೇಹ, ಹಲ್ಲು ನೋವು ಹೀಗೆ ಹಲವಾರು ರೋಗಗಳನ್ನು ನಿಯಂತ್ರಿಸಬಲ್ಲ ಅನೇಕ ಗಿಡ ಮೂಲಿಕೆ ಔಷಧಗಳೂ ಲಭ್ಯವಿದ್ದವು.

ಒಟ್ಟಿನಲ್ಲಿ ಹೇಳುವುದಾದರೆ, ಎರಡು ದಿನಗಳ "ಹವ್ಯಕ ಪಾಕೋತ್ಸವ" ಜನ ಜಾಗೃತಿ ಉಂಟು ಮಾಡುವ ಒಂದು "ವಿಭಿನ್ನೋತ್ಸವ". ಇಂತಹ ಅನೇಕ ಸಾಂಪ್ರದಾಯಿಕ ಆಚರಣೆಗಳು, ಚಟುವಟಿಕೆಗಳು ಬೆಳಕಿಗೆ ಬಂದು ಅವುಗಳಿಗೆ ಸೂಕ್ತ ಪುರಸ್ಕಾರ ದೊರೆಯುವಂತಾಗಲೆಂದು "ಹಿತ್ತಲ ಗಿಡ" ಹಾರೈಸುತ್ತದೆ.

ಗಂಧಸಾಲೆ ಭತ್ತದ ತಳಿಯ ಪಿ. ಈಶ್ವರ ತೀರ್ಥ

ಕಳೆದ ಬಾರಿ ಪ್ರಕಟಿಸಿದ ಭತ್ತದ ರಕ್ಷಣಾ ಸಂಪ್ರದಾಯದ ಬಂಗಾಡಿ ಕಿಲ್ಲೂರು ದೇವರಾಯರಂತೆಯೇ ಇನ್ನೊಬ್ಬ ಅಪರೂಪದ ಭತ್ತದ ತಳಿ ಸಂರಕ್ಷಕರು ನಮ್ಮಲ್ಲಿದ್ದಾರೆ. ಇವರೇ ಶಿವಮೊಗ್ಗ ಜಿಲ್ಲೆಯ ಭದ್ರಾವತಿಯ ಪಿ. ಈಶ್ವರ ತೀರ್ಥ. ಇವರು ಕಳೆದ ಆರು ವರ್ಷಗಳಿಂದ ಅಪರೂಪದ ಪರಿಮಳ ಭತ್ತದ ತಳಿಯಾದ ಗಂಧಸಾಲೆಯನ್ನು ಬೆಳೆಸುತ್ತಿದ್ದಾರೆ. ಎಕರೆಗೆ 12 ಕ್ವಿಂಟಾಲ್‌ನಂತೆ ಇಳುವರಿ ತೆಗೆಯುವ ಇವರು, ಇಳುವರಿ ಹೆಚ್ಚಿಸಲು ಅಧಿಕ ಇಳುವರಿ ನೀಡುವ ಭತ್ತದ ಗಿಡದ ತೆನೆಯನ್ನು ಮಾತ್ರ ಆರಿಸಿ ಮುಂದಿನ ವರ್ಷದಲ್ಲಿ ಬಿತ್ತುತ್ತಾರೆ. ಈ ರೀತಿಯಾಗಿ ಒಟ್ಟು ಇಳುವರಿ ಹೆಚ್ಚಿಸುವುದು ವೈಜ್ಞಾನಿಕ ಕ್ರಮವೂ ಆಗಿದ್ದು ಈಶ್ವರ ತೀರ್ಥರವರೂ ಕೂಡ ಅದೇ ಕ್ರಮವನ್ನು ಅನುಸರಿಸುತ್ತಿದ್ದಾರೆ. ಇವರಿಂದ ಬೀಜ ಪಡೆದು 60-70 ರೈತರು ಈಗಾಗಲೇ ಗಂಧಸಾಲೆ ಭತ್ತ ಬೆಳೆಯುವುದಕ್ಕೆ ಪ್ರಾರಂಭಿಸಿದ್ದಾರೆ. ಬೀಜ ಪಡೆದ ರೈತರಲ್ಲಿ ಆ ಪ್ರದೇಶದ ಸುತ್ತ ಮುತ್ತಲಿನವರಷ್ಟೇ ಅಲ್ಲದೆ ರಾಯಚೂರು, ಗುಲ್ಬರ್ಗಾ, ಆಂಧ್ರಪ್ರದೇಶದ ರೈತರೂ ಇದ್ದಾರೆ. ಇವರು ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸುವ ಬೆಂಗಳೂರಿನ "ಸಾವಯವ ಸಿರಿ" ಎಂಬ ಸಂಸ್ಥೆಯ ಮೂಲಕ ಗಂಧಸಾಲೆ ಭತ್ತಕ್ಕೆ ಮಾರುಕಟ್ಟೆ ಕಲ್ಪಿಸಿಕೊಂಡಿದ್ದಾರೆ. ಒಂದು ಕೆ.ಜಿ. ಅಕ್ಕಿಯ ಬೆಲೆ 30 ರೂಪಾಯಿಗಳಾಗುತ್ತದೆ. ಆಸಕ್ತರು ಗಂಧಸಾಲೆ ಅಕ್ಕಿಯನ್ನು ಖರೀದಿಸಲು ಅವರೂರಿನ ಈ ನಂಬರ್‌ಗೆ ಸಂಪರ್ಕಿಸಬಹುದು. ಫೋ: 08282/636811

ಕೊಡುಗೆ ಭಟ್ಟ

ನಮ್ಮೂರಿನ ನೆನಪುಗಳು

ಲೇಖಕರು: ಡಾ. ಚಂದ್ರಪ್ಪ ಗೌಡ

ನೆಲಮನೆ ಪ್ರಕಾಶನ, ಬೆಂಗಳೂರು, 78 ಪುಟಗಳು, ಬೆಲೆ ರೂ.40

ಚಂದ್ರಪ್ಪಗೌಡರ 'ನಮ್ಮೂರಿನ ನೆನಪುಗಳು' ಅಕ್ಷರ ರೂಪದಲ್ಲಿ ದಾಖಲಾಗುತ್ತಿದೆ. ತಮ್ಮ ಬಾಲ್ಯದ ದಿನಗಳ ನೆನಪಿನ ಸುರಳಿಯನ್ನು ಬಿಚ್ಚುತ್ತ ಹೋಗುವ ಗೌಡರು ಅವರ ಊರಿನ ಹೊಳೆಗೂ ಅಲ್ಲಿನ ಜನಕ್ಕೂ ಇದ್ದ ಸಂಬಂಧದ ಎಳೆಯನ್ನು ನವಿರಾಗಿ ವಿವರಿಸುತ್ತಾರೆ. ಮತ್ತೆ ಬಾರದ ಬಾಲ್ಯ, ಇನ್ನಿಲ್ಲವಾದ ಆ ಪರಿಸರ, ಗೌಡರನ್ನು ಕಾಡುತ್ತವೆ. ನಮ್ಮಿಂದ ಮರೆಯಾಗಿರುವ ಮಲೆನಾಡಿನ ಹಲವಾರು ಜೀವನ ಕ್ರಮ, ವೈದ್ಯ ಪದ್ಧತಿ, ಮದುವೆ-ದಿಬ್ಬಣ ಸಡಗರ, ಈ ಭೂಭಾಗಕ್ಕೇ ವಿಶೇಷವಾದ ನೆಲದ ಸಿರಿಗೆ ಸಂಬಂಧಿಸಿದ ಹಬ್ಬ-ಹರಿದಿನಗಳ ವಿವರ ಇಲ್ಲಿ ದೊರೆಯುತ್ತವೆ. 'ಹಸಿಗೆ', 'ಹೊಳೆ-ಬಾಳೆಕಾಯಿ', 'ಹತ್ತು-ಮೀನು', 'ಯೂಪೆ', 'ಕೂಣಿ', 'ಅಂಡೆ', 'ಕಡ' ಹಾಕುವುದು ಮುಂತಾದ ಗ್ರಾಮ್ಯ ಶಬ್ದಗಳ ಭಂಡಾರವೇ ಇಲ್ಲಿ ದೊರೆಯುತ್ತದೆ. ಆ ಭಾಗದಲ್ಲಿ ಬಾಲ್ಯವನ್ನು ಕಳೆದ ನನ್ನಂಥವರಿಗೆ ತೀರ ಪರಿಚಯವಿದ್ದ ಈ ಶಬ್ದಗಳು, ಅಲ್ಲಿನ ಜೀವನ ಕ್ರಮದ ಏರುಪೇರು, ನಮ್ಮ ಬದುಕಿನ ಮಾರ್ಗಕ್ಕಾಗಿ ಅನಿವಾರ್ಯವಾದ ವಲಸೆಯಿಂದಾಗಿ ಈ ಶಬ್ದಗಳು ನಮ್ಮ ಸ್ಮೃತಿ ಪಟಲದಲ್ಲಿ ಅಳಿಸುತ್ತ ಬಂದಿವೆ.

ಡಾ. ಚಂದ್ರಪ್ಪಗೌಡರು, ಈ ಕೃತಿಯನ್ನು ಇನ್ನಷ್ಟು ವಿಸ್ತೃತವಾಗಿ ಬರೆದಿದ್ದಲ್ಲಿ, ಬಹುಶ: ಬಹಳಷ್ಟು ವಿಷಯಗಳು ಬೆಳಕಿಗೆ ಬರುತ್ತಿದ್ದವು : ದಾಖಲೆಯಾಗುಳಿಯುತ್ತಿದ್ದವು. ಅವರ ಪುಸ್ತಕದಲ್ಲಿನ ಒಂದು ಮೀನು ಹಿಡಿಯುವ ದೇಶೀಯ ಜಾಣ್ಮೆ ಬಗೆಗಿನ ವಿವರ ಈ ಮುಂದೆ ಕೊಡಲಾಗಿದೆ.

(ಡಾ. ಎಚ್.ಸಿ. ವಿಷ್ಣುಮೂರ್ತಿ, ಸಾಹಿತಿ ಮತ್ತು ಶಸ್ತ್ರವೈದ್ಯ, ಮೈಸೂರು)

ಶೇಂಗಾ ಕಾಯಿ ಕೀಳಲು ಕಡಿಮೆ ಶ್ರಮ:

ಸಾಮಾನ್ಯವಾಗಿ ಶೇಂಗಾ ಹೊಲಗಳಲ್ಲಿ ಅದನ್ನು ಕೀಳುವ ಸಮಯದಲ್ಲಿ ಬೇರು ಮತ್ತು ಕಾಯಿಗಳು ತುಂಡಾಗುವುದರಿಂದ ಬಹಳಷ್ಟು ಇಳುವರಿ ಕಡಿಮೆಯಾಗುತ್ತದೆ. ಇದನ್ನು ಕೀಳುವುದು ಕೂಡ ಒಂದು ಪರಿಶ್ರಮದ ಕೆಲಸ. ಇದಕ್ಕೆ ಸೌರಾಷ್ಟ್ರದ ಮೊಟಕಾಂತಾರಿಯಾ ಹಳ್ಳಿಯ ರೈತರಾದ ಶ್ರೀ ಘನಶ್ಯಾಮ್‌ರವರು ಒಂದು ಪರಿಹಾರ ಕಂಡುಕೊಂಡಿದ್ದಾರೆ. ಇವರು ಇಟ್ಟಿಗೆ ಹಾಗೂ ಮಡಿಕೆ ಪುಡಿಯನ್ನು ಸಂಗ್ರಹಿಸಿ ಎಕರೆಗೆ ಸುಮಾರು 100 ರಿಂದ 150 ಕೆ.ಜಿ.ಯಷ್ಟು ಪುಡಿಯನ್ನು ಹೊಲಕ್ಕೆ ಸೇರಿಸುತ್ತಾರೆ. ಬಿತ್ತನೆ ಆದ ಮೇಲೆ ಇಟ್ಟಿಗೆ / ಮಡಿಕೆ ಪುಡಿ ಸೇರಿಸುವುದಾದರೆ ಸಾಲುಗಳ ಮಧ್ಯದಲ್ಲಿ ಇದನ್ನು ಮಿಶ್ರಣ ಮಾಡಬೇಕು. ಘನಶ್ಯಾಮ್‌ರವರು ಈ ಕ್ರಮವನ್ನು ಸುಮಾರು 30 ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದು, ಇವರ ಹೊಲದಲ್ಲಿ ಶೇಂಗಾ ಗಿಡಗಳು ಹೆಚ್ಚು ಇಳುವರಿ ನೀಡುವುದಲ್ಲದೇ, ಕಾಯಿಗಳು ಕೀಳುವ ಸಮಯದಲ್ಲಿ ತುಂಡಾಗುವುದಿಲ್ಲವಂತೆ.

ಉಪ್ಪಿನಿಂದ ಧಾನ್ಯಗಳ ಸಂರಕ್ಷಣೆ

ಧಾನ್ಯಗಳಿರುವ ಡಬ್ಬಿಗಳು ಪಾತ್ರೆಗಳ ಅಡಿಯಲ್ಲಿ ಉಪ್ಪನ್ನು ಹಾಕಿ ಇಡುವುದರಿಂದ ಕೀಟಗಳು ಇದರ ಮೇಲೆ ಹರಿದಾಡಲು ಆಗದೆ ಧಾನ್ಯವು ಸುರಕ್ಷಿತವಾಗಿರುತ್ತದೆ ಎಂಬುದು ಪಾಂಡಿಚೆರಿಯ ಶ್ರೀ ಪಾಂಡುವಾತನ್ ಗೋವಿಂದರಾಜುರವರ ಅನುಭವ.

ಮೂಲ: ಹನಿ ಬೀ, ಸಂಪುಟ 11, ಪುಟ 4, ಅಕ್ಟೋಬರ್–ಮಾರ್ಚ್ 2001

ಬಳ್ಳಿಗಳಲ್ಲಿ ಇರುವೆಗಳ ನಿಯಂತ್ರಣ

ತರಕಾರಿ ಹಾಗೂ ಹಣ್ಣಿನ ಬಳ್ಳಿಗಳಲ್ಲಿ ಇರುವೆಗಳನ್ನು ನಿಯಂತ್ರಿಸಲು ಸೀಮೆ ಎಣ್ಣೆಯಲ್ಲಿ ಅದ್ದಿದ ಹತ್ತಿ ಬಟ್ಟೆಯನ್ನು ಬಳ್ಳಿಗಳಲ್ಲಿ ಕಟ್ಟಬೇಕು. ಸೀಮೆ ಎಣ್ಣೆಯ ವಾಸನೆಯಿಂದ ಇರುವೆಗಳು ಬಳ್ಳಿಯ ಹತ್ತಿರ ಹೋಗುವುದಿಲ್ಲ ಎಂಬುದು ಪಾಂಡಿಚೆರಿಯ ರೈತರಾದ ವಿ. ಕಣ್ಣಪ್ಪನ್ ವೈರಕಣ್ಣುರವರ ಅನುಭವ.

ಕೆಂಪು ಮಣ್ಣಿನಿಂದ ಕೀಟ ನಿಯಂತ್ರಣ

ಕೆಂಪು ಮಣ್ಣನ್ನು ನೀರಿನೊಂದಿಗೆ ಸೇರಿಸಿ ಸಣ್ಣ ಉಂಡೆಗಳನ್ನಾಗಿ ಮಾಡಿ ಬಿಸಿಲಿನಲ್ಲಿ ಒಣಗಿಸಬೇಕು. ಇದನ್ನು ದ್ವಿದಳ ಧಾನ್ಯಗಳ ಜೊತೆಗೆ ಬೆರಸಿ ಸಂಗ್ರಹಿಸುವುದರಿಂದ ಕೀಟಗಳನ್ನು ನಿಯಂತ್ರಿಸಬಹುದು. ಕೆಂಪು ಮಣ್ಣಿನಲ್ಲಿ ಆಮ್ಲ ಗುಣವು ಹೆಚ್ಚಾಗಿರುವುದರಿಂದ ಕೀಟಗಳು ಇದರ ಹತ್ತಿರ ಸುಳಿಯುವುದಿಲ್ಲ ಎಂಬುದು ತಿರುಕ್ಕುವೆಲ್ಲೈನ ಮುತ್ತು ಅರುಣಾಚಲಂರವರ ನಂಬಿಕೆ. ಇವರು ರೈತರಾಗಿದ್ದು ಈ ಪದ್ಧತಿಯನ್ನು ಬಹುಕಾಲದಿಂದ ಅನುಸರಿಸುತ್ತಿದ್ದಾರೆ.

ಮೂಲ: ಹನಿ ಬಿ, ಸಂ 11, ಪು 27, ಅಕ್ಟೋಬರ್–ಮಾರ್ಚ್ 2001

ಕಡ ಹಾಕುವುದು

ಮೀನುಗಳು ಸಾಮಾನ್ಯವಾಗಿ ಬಂಡೆಗಳ ತಳ ಅಥವಾ ಹೊಳೆಯ ದಡದ ಬದಿಯಲ್ಲಿ ನೀರಿಗಿಳಿದ ಬೇರುಗಳ ಸಂದಿಗೊಂದಿಗಳಲ್ಲಿ ತಂಗುತ್ತವೆ. ಅಂತಹ ಜಾಗಗಳಲ್ಲಿ ಹಲವು ದಿನಗಳ ವೀಕ್ಷಣೆಯಿಂದ ಖಾತರಿಪಡಿಸಿಕೊಳ್ಳುತ್ತಾರೆ. ಘಾಟು ವಾಸನೆ ಬರುವ ಒಂದು ಮರದ ಸೊಪ್ಪನ್ನು–ಮುಕ್ಕಡಕನ ಸೊಪ್ಪನ್ನು ಜಪ್ಪಿ ರಸ ಹೊರಬರುವಂತೆ ಮಾಡಿ, ಅದರ ಗೊಂಚಲನ್ನು ಬಂಡೆ ಅಥವಾ ಬೇರುಗಳಿರುವ ಪೊಟರೆಗಳ ಸಂದುಗಳಲ್ಲಿ ಅದ್ದಿ ಜಾಳಿಸಿದರೆ ಸೊಪ್ಪಿನ ರಸ ನೀರಿನಲ್ಲಿ ಸೇರಿಹೋಗುತ್ತದೆ. ರಸದ ಘಾಟು ಮೀನುಗಳಿಗೆ ತಾಗಿದಾಕ್ಷಣ ಅವು ಸಂಕಟದಿಂದ ಸಿಡಿಮಿಡಿಗೊಂಡು ಹಾರಿ ಹಾರಿ ಬೀಳಲಾರಂಭಿಸುತ್ತವೆ. ಒಂದು ತರಹೆಯ ಮತ್ತು ಬಂದಂತಾಗಿ ನಿಶ್ಚೇತನಗೊಳ್ಳುತ್ತವೆ. ಅವುಗಳನ್ನು ಸುಲಭವಾಗಿ ಹಿಡಿದುಕೊಳ್ಳಬಹುದು. ಸೊಪ್ಪಿನ ರಸದ ಘಾಟು ಅದನ್ನು ಜಪ್ಪುವವರ ಮುಖಕ್ಕೆ ಹಾರಿದರೂ ಮುಖ 3–4 ದಿನ ಬಾತು ಊದಿಕೊಳ್ಳುತ್ತದೆ. ಹೊಳೆಯಲ್ಲಿ ನೀರು ಕಡಿಮೆಯಾಗುವ ಸಮಯದಲ್ಲಿ ಈ ರೀತಿ "ಕಡಹಾಕಿ" ಮೀನು ಹಿಡಿಯುವ ಹವ್ಯಾಸಕ್ಕಿಳಿಯುತ್ತಾರೆ ನಮ್ಮ ಜನ.

ಅದೇ ತತ್ವದ ಆಧಾರದಿಂದ ಇಡೀ ಹೊಳೆ ಅಥವಾ ನೀರು ನಿಂತಿರುವ ಮಡುವಿಗೆ ಒಂದು ಬಗೆಯ ಮರದ ಕಾಯಿಗಳನ್ನು ಒಡೆದು ಪುಡಿಮಾಡಿ ಹಾಕುವ ರೂಢಿಯಿದೆ. ಕಾರೇ–ಕಾಯಿ *(Canthium paviflorum?)* ಯೆಂದು ಹೇಳಲಾಗುವ ಅವುಗಳನ್ನು ಕಾಡಿನಿಂದ ಮೂಟೆಗಟ್ಟಲೆ ತಂದು ಇಡೀ ಊರಿನವರು, ಕೆಲ ಸಾರಿ ಅಕ್ಕಪಕ್ಕದ ಊರಿನವರೂ ಸೇರಿಕೊಂಡು ಈ ಕಾರ್ಯಕ್ರಮದಲ್ಲಿ ತೊಡಗುವುದು ವಾಡಿಕೆ. ದೀಪಾವಳಿ, ಯುಗಾದಿ ಹಬ್ಬಗಳ ಹಿಂದಿನ ಒಂದೆರಡು ದಿನ "ಕಡ ಹಾಕುವುದು" ಎನ್ನುವ ಈ ಪದ್ಧತಿ ಸಾಮೂಹಿಕವಾಗಿ ನಡೆಯುತ್ತದೆ. ಈ ಕಾಯಿಗಳ ಪುಡಿಯನ್ನು ನೀರಿಗೆ ಹಾಕಿ ಒಂದೆರಡು ಗಂಟೆಗಳೊಳಗೇ ಆ ಮಡುವಿನಲ್ಲಿರುವ ಮೀನುಗಳೆಲ್ಲಾ ಸಿಡಿಮಿಡಿಗೊಂಡು ಹಾರಿಬಿದ್ದು ಸಾಯಲಾರಂಭಿಸುತ್ತವೆ. ಸೇರಿದ ಜನರೆಲ್ಲಾ ನೀರಿಗಿಳಿದು ಅವುಗಳನ್ನು ಬುಟ್ಟಿಗಳೊಳಗೆ ತುಂಬಿಕೊಳ್ಳುತ್ತಾರೆ. ಆ ದಿನದ ಸಾಯಂಕಾಲದೊಳಗೆ ದಡಗಳ ಮೇಲೆ ಅಲ್ಲಲ್ಲೇ ಮೀನುಗಳ ರಾಶಿ ರಾಶಿಗಳನ್ನು ನೋಡಬಹುದು. ಸಾಯಂಕಾಲದ ಹೊತ್ತಿಗೆ ಆ ಕಾರ್ಯಕ್ರಮದಲ್ಲಿ ಭಾಗಿಯಾದವರೆಲ್ಲರೂ ಒಟ್ಟಾದ ಮೀನುಗಳನ್ನು ವಿಂಗಡಿಸಿಕೊಂಡು ತಮ್ಮ ತಮ್ಮ ಊರು, ಮನೆಗಳಿಗೆ ಹಿಂದಿರುಗುತ್ತಾರೆ. ಮುಂದಿನ 3–4 ದಿನಗಳಲ್ಲಿ ಎಲ್ಲರ ಮನೆಯಲ್ಲೂ ಮೀನಿನ ವ್ಯಂಜನದ ಘಮ ಘಮ; ಪಕ್ಕದ ಹೊಳೆಯಲ್ಲಿ ಸ್ಮಶಾನ ಮೌನ, ದುರ್ನಾತ ಹಾಗೂ ಹದ್ದುಗಳ ಹಾರಾಟ, ಸತ್ತು ಕೊಳೆಯುತ್ತಿರುವ ಜಲಚರಗಳ ಕಬಳಿಕೆಗಾಗಿ!.

ಮೂಲ: ಡಾ. ಚಂದ್ರಪ್ಪಗೌಡರ "ನಮ್ಮೂರಿನ ನೆನಪುಗಳು"

ಸಂಚಾಲಕರು, ಹಿತ್ತಲಗಿಡ

ನೀವು ಕಳುಹಿಸಿರುವ ಆಹ್ವಾನ ಪತ್ರಿಕೆ ತಲುಪಿರುತ್ತದೆ. ದಿನಾಂಕ 25.12.2003 ರಿಂದ 31.12.2003ರ ತನ್ಕ ಹಿತಲಗಿಡ ಬಳಗ ಮತ್ತು ಪೃಥ್ವಿ, ಬೆಂಗಳೂರು ಇವರ ಸಹಯೋಗದಲ್ಲಿ ಕೊಪ್ಪ - ಶೃಂಗೇರಿ ಪ್ರಾಂತ್ಯದಲ್ಲಿ ತಳಮಟ್ಟದ ಅನುಶೋಧಕರು, ಸ್ಥಳೀಯ ಪರಿಣಿತರು ಮತ್ತು ಜೀವ ವೈವಿಧ್ಯ ಸಂರಕ್ಷಕರನ್ನು ಸ್ಥಳದಲ್ಲೆ ಹುಡುಕಿ ಪುರಸ್ಕರಿಸುವ 12ನೇ ಶೋಧಯಾತ್ರಾ ಕಾರ್ಯಕ್ರಮವನ್ನು ಏರ್ಪಡಿಸಿರುವ ವಿಚಾರ ತಿಳಿದು ಸಂತೋಷವಾಯಿತು. ಮಲೆನಾಡು ಪ್ರದೇಶದ ವಿವಿಧ ಕ್ಷೇತ್ರಗಳಲ್ಲಿ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿರುವ ಪರಿಣಿತ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವ ಯೋಜನೆಯನ್ನು ಹಮ್ಮಿಕೊಂಡಿರುವುದು ಶ್ಲಾಘನೀಯವಾಗಿದೆ. ನಿಯೋಜಿತ ಶೋಧಯಾತ್ರಾ ಕಾರ್ಯಕ್ರಮವು ಸಹೃದಯ ಸಾರ್ವಜನಿಕರ ಪ್ರೋತ್ಸಾಹ - ಸಹಕಾರದೊಂದಿಗೆ ಯಶಸ್ವಿಯಾಗಿ ನೆರವೇರಲೆಂದು ಹಾರೈಸುತ್ತೇನೆ.

ಶ್ರೀ ಡಿ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಧರ್ಮಸ್ಥಳ ಕ್ಷೇತ್ರ

ತಮ್ಮ ಹಾರೈಕೆಯಂತೆ 12ನೇ ಶೋಧಯಾತ್ರೆ ಅದ್ಭುತ ಯಶಸ್ಸು ಕಂಡಿರುತ್ತದೆ. ಈ ಶೋಧಯಾತ್ರೆಯಲ್ಲಿ ಸನ್ಮಾನಿಸಲ್ಪಟ್ಟ ನಾಟಿವೈದ್ಯರ ಔಷಧಿ ಪದ್ಧತಿಗಳ ವ್ಯವಸ್ಥಿತ ರೀತಿಯಲ್ಲಿ ಮೌಲ್ಯ ವರ್ಧನೆ ಆಗಬೇಕಾಗಿದ್ದು ಅದಕ್ಕೆ ತಮ್ಮ ನೆರವು ಅತ್ಯಗತ್ಯವಾಗಿದೆ.

ಸಂಪಾದಕ

ಪ್ರಿಯ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿಯವರಿಗೆ ನಮಸ್ಕಾರಗಳು.

ಕಳೆದ ವರ್ಷ ತೀರ್ಥಹಳ್ಳಿಯಲ್ಲಿ ತಮ್ಮನ್ನು ಭೇಟಿಯಾದಾಗಿನಿಂದ ತಮ್ಮ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಹಿತ್ತಲಗಿಡ' ಚಾತುರ್ಮಾಸಿಕ ಪತ್ರಿಕೆಯನ್ನು ಕಳುಹಿಸುತ್ತಿರುವುದಕ್ಕೆ ತುಂಬಾ ಆಭಾರಿಯಾಗಿದ್ದೇನೆ. ಸಹಜ ಕೃಷಿ ವಿಧಾನಗಳು, ದೇಶೀಯ ಪದ್ಧತಿಗಳ ಮರು ಪರಿಶೀಲನೆ ಮುಂತಾದ ಹಲವು ವಿಚಾರಗಳ ಬಗೆಗೆ ಆಸಕ್ತಿ ವಹಿಸಿ ವರದಿ ತಯಾರಿಸುವ ಸ್ತುತ್ಯ ಕಾರ್ಯ ತಾವು ಮತ್ತು ತಮ್ಮ ಸಂಗಡಿಗರಿಂದ ಜರುಗುತ್ತಿರುವುದು ನನ್ನಂತಹವನಿಗೆ ಸಂತಸ ಉಂಟುಮಾಡಿದೆ.

ಈ ಸಾರಿಯ ಸಂಚಿಕೆ (ಸೆಪ್ಟೆಂಬರ್-ಡಿಸೆಂಬರ್, 2003)ಯಲ್ಲಿ ಮುಕ್ಕಡಕ ದ್ರಾವಣದ ಬಗೆಗಿನ ಬರಹ ನನ್ನ ಗಮನ ಸೆಳೆಯಿತು. ಮುಕ್ಕಡಕದ ಸಸ್ಯ ನಮ್ಮ ಕಡೆಯ ಕಾಡುಗಳಲ್ಲಿ ಬೆಳೆದುಕೊಂಡಿರುತ್ತಿತ್ತು. ನಮ್ಮವರು ಹೊಳೆಗಳಲ್ಲಿರುತ್ತಿದ್ದ ಮೀನುಗಳನ್ನು ಹಿಡಿಯಲು ಅದರ ರಸವನ್ನು ಬಳಸುತ್ತಿದ್ದರು. ನಾನೂ ಸಹ ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮುಖ ಊದಿಸಿಕೊಂಡ ಬಾಲ್ಯದ ನೆನಪು ಮರುಕಳಿಸುವಂತಾಯಿತು. ವಾರಾಹಿ ಜಲವಿದ್ಯುತ್ ಯೋಜನೆಯಡಿ ಮುಳುಗಡೆಯಾದ ನನ್ನೂರಿನ ನೆನಪುಗಳನ್ನು ಉಳಿಸುವ ಸಲುವಾಗಿ ಕಿರುಪುಸ್ತಕ ನಮ್ಮೂರಿನ ನೆನಪುಗಳು (1999)ನಲ್ಲಿ ಈ ವಿಚಾರವನ್ನು 'ಕಡ ಹಾಕುವುದು' ಎಂಬ ಶೀರ್ಷಿಕೆಯಡಿ (ಪುಟ 9) ವಿವರಿಸಿರುವೆ. ಪುಸ್ತಕದ ಒಂದು 'ಗೌರವ ಪ್ರತಿ'ಯನ್ನು ತಮ್ಮ ಅವಗಾಹನೆಗಾಗಿ ಇದರ ಜೊತೆ ಇರಿಸಿರುವೆ. ಪ್ರಸ್ತುತ ಸರು ಗ್ರಾಮದ ಕೃಷಿಕ ಶ್ರೀ. ಬಿ.ಎಸ್. ದಿನೇಶ್ ಭತ್ತದ ಬೇಸಾಯದಲ್ಲಿ ಕೀಟ ಹತೋಟಿಗೆ ಅದನ್ನು ಬಳಸಿ ಒಳ್ಳೆಯ ಫಲಿತಾಂಶ ಪಡೆದಿರುವರಂತೆ, ಇತರ ಸಮಸ್ಯೆಗಳ ಪರಿಹಾರಕ್ಕೂ ಅದು ಉಪಯುಕ್ತವಾಗಬಹುದೇನೋ. ವಿಶೇಷವಾಗಿ ಮಲೆನಾಡು ಪ್ರದೇಶಗಳಲ್ಲಿ ಭತ್ತದ ಬೆಳೆಗೆ ಏಡಿಗಳ ಉಪಟಳ ಇದ್ದೇ ಇರುತ್ತದೆ. ಅಂತಹ ಸಂದರ್ಭಗಳಲ್ಲೂ ಮುಕ್ಕಡಕದ ದ್ರಾವಣದ ಪ್ರಯೋಗ ಮಾಡಬಹುದೆನಿಸುತ್ತದೆ.

ಡಾ. ಚಂದ್ರಪ್ಪ ಗೌಡ, ನೆಲಮನೆ ಪ್ರಕಾಶನ, ಬೆಂಗಳೂರು-78

(ತಮ್ಮ ಪುಸ್ತಕ ತಲುಪಿದೆ. ವಂದನೆಗಳು. ಮಲೆನಾಡಿನ ಈ ಸಸ್ಯ ಮುಕ್ಕಡಕ (Lasiosiphon eriocephalus)ದ ಅದ್ಭುತ ಆಯಾಮಗಳೂ ಹಲವಾರು. ವಿರಳ ಸಸ್ಯವಾದ ಇದು ಪಶ್ಚಿಮಘಟ್ಟದ ಸಸ್ಯ ವೈವಿಧ್ಯದ ಸಂಕೇತವಾಗಿದೆ. ಇದರ ಕಶಾಯ ಒಂದು ಪರಿಣಾಮಕಾರಿ ಜೈವಿಕ ಕ್ರಿಮಿ, ಕೀಟ ನಾಶಕವಾಗಿದ್ದು ಸಾವಯವ / ಸುಸ್ಥಿರ ಕೃಷಿಗೆ ಒಂದು ಒಳ್ಳೆಯ ಕೊಡುಗೆಯಾಗಬಹುದಾಗಿದೆ. ಇಲ್ಲಿ "ಭೌದ್ಧಿಕ ಸನದಿನ ಹಕ್ಕಿನ" (Intellectual Property Rights) ವಿಚರ ಅಡಗಿರುವುದರಿಂದ, ಈ ಜ್ಞಾನ "ಸಮುದಾಯಕ ಸಂಪತ್ತು" (Community Property) ಆಗಿದ್ದು, ಈ ಜ್ಞಾನ ವಾಣಿಜ್ಯಗೊಂಡಲ್ಲಿ ನಮ್ಮ ಮಲೆನಾಡ ಸಮುದಾಯಕ್ಕೆ ಅಪಾರ ಪ್ರತಿಫಲವೂ ದೊರಕಬಹುದಾಗಿದೆ. ಆದರೆ, ಇದು ಹೆಚ್ಚೂ ಕಡಿಮೆಯಾಗಿ, ಒಂದು ಖಾಸಗಿ ಕಂಪನಿಯ ಕುತಂತ್ರಕ್ಕೆ ಒಳಗಾದಲ್ಲಿ ಇದು ಜ್ಞಾನದ ಕಳ್ಳತನದ ಅವಾಂತರಕ್ಕೂ ಎಡೆಗೊಡಬಹುದಾಗಿದೆ. ಈ ನಿಟ್ಟಿನಲ್ಲಿ ಎಚ್ಚರಿಕೆ ಅತ್ಯಗತ್ಯವಾಗಿದೆ. ನಿಮ್ಮ ನೆನಪು ಅನುಭವಗಳ ಪುಸ್ತಕ ಕುತೂಹಲಕಾರಿಯಾಗಿದ್ದು ಮುಖಚಿತ್ರ ಕರುಳು ಕೊರೆಯುವಂತಿದೆ.

ವಂದನೆಗಳು - ಸಂ.)

ಮಾನ್ಯರೆ,

'ಹಿತ್ತಲಗಿಡ' ದಿನದಿಂದ ದಿನಕ್ಕೆ ಸೊಗಸಾಗಿ ಬೆಳೆಯುತ್ತಿರುವುದನ್ನು ಕಾಣುವುದಕ್ಕೆ ಸಂತೋಷವೆನಿಸುತ್ತದೆ. ಇನ್ನೂ ಸುಂದರವಾಗಿ ಮೂಡಿ ಬರಲೆಂದು ಹಾರೈಸುತ್ತೇನೆ. ಈ ಉಪಯುಕ್ತ ಚಾತುರ್ಮಾಸಿಕವು ಇನ್ನೂ ಅಧಿಕ ಜನರಿಗೆ ತಲುಪಬೇಕೆಂಬುದು ನನ್ನ ಆಶಯ.

ಈ ಪತ್ರದೊಂದಿಗೆ ನಮ್ಮ ವಿಶ್ವ ವಿದ್ಯಾನಿಲಯವು ಪ್ರಕಟಿಸಿರುವ 'ದಶಕದ ಕನ್ನಡ ಸಾಹಿತ್ಯ' ಎಂಬ ಪುಸ್ತಕವನ್ನು ತಮಗೆ ಕಳುಹಿಸುತ್ತಿರುವೆ. ಅದರಲ್ಲಿ ಪು.310-19ರವರೆಗೆ 'ವಿಜ್ಞಾನ ಸಾಹಿತ್ಯ' ಎಂಬ ಲೇಖನವನ್ನು ನಾನು ಬರೆದಿದ್ದು, ಅದರಲ್ಲಿ ತಾವು ಕೈಗೊಂಡಿರುವ 'ಹಿತ್ತಲಗಿಡ' ಪ್ರಕಟಣೆಯ ಬಗ್ಗೆ ಉಲ್ಲೇಖಿಸಿರುವೆ. ಕಾರಣಾಂತರಗಳಿಂದ ಇದನ್ನು ತಡವಾಗಿ ಕಳುಹಿಸುತ್ತಿರುವುದಕ್ಕೆ ವಿಷಾಧಿಸುತ್ತೇನೆ.

ತಮ್ಮ ಈ ಪ್ರಯತ್ನವು ಸತತವಾಗಿ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ವಿ.ಸೂ: ಹಿತ್ತಲಗಿಡದ ಬಗೆಗಿನ ಪ್ರಕಟಣೆಯನ್ನು ಕೆಳಗೆ ಬಾಕ್ಸ್‌ನಲ್ಲಿ ಕೊಡಲಾಗಿದೆ.

ಡಾ. ಸಿ.ಎಸ್. ವಾಸುದೇವನ್, ಅಧ್ಯಾಪಕ, ಕನ್ನಡ ವಿಶ್ವ ವಿದ್ಯಾನಿಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ

ವಿಜ್ಞಾನ ಸಾಹಿತ್ಯಕ್ಕೆ ಇನ್ನೊಂದು ನಿಯತಕಾಲಿಕೆಯು ತನ್ನ ಕೊಡುಗೆಯನ್ನು ನೀಡುತ್ತಲಿದೆ. 'ಹಿತ್ತಲಗಿಡ' ಎಂಬ ಚಾತುರ್ಮಾಸಿಕವು ರೈತ, ವಿಜ್ಞಾನಿ, ವಿದ್ಯಾರ್ಥಿ, ಸ್ವಯಂ ಸೇವಾ ಸಂಸ್ಥೆ ಮತ್ತು ವ್ಯಕ್ತಿಗಳ ಸಾಮೂಹಿಕ ಪ್ರಯತ್ನದಿಂದ ಅಡೆತಡೆಯಿಲ್ಲದೆ ಪ್ರಕಟಗೊಳ್ಳುತ್ತಲಿದೆ. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಆಸಕ್ತ ಪ್ರಾಧ್ಯಾಪಕ ಮತ್ತು ಅವರ ಸಹಚರರು ರೈತರಿಗೆ ಮತ್ತು ಕೃಷಿ ಮಾಡುವ ಆಸಕ್ತರಿಗಾಗಿ ಪ್ರಕಟಿಸುತ್ತಿರುವ ನಿಯತಕಾಲಿಕೆಯಲ್ಲಿ ರೈತವರ್ಗದವರು ಅನುಸರಿಸಲು ಯೋಗ್ಯವಾದ ದೇಶೀಯ ಕ್ರಮಗಳು, ಗಿಡ, ಪೈರು, ಮುಂತಾದ ಸಸ್ಯ ವರ್ಗಕ್ಕೆ ತಗಲುವ ರೋಗ ರುಜಿನಗಳು ಮತ್ತು ಅವುಗಳನ್ನು ಹತೋಟಿಯಲ್ಲಿಡುವ ಕ್ರಮಗಳನ್ನು ನುರಿತ ತಜ್ಞರ ಸಲಹೆಗಳೊಂದಿಗೆ ಮೂಡಿಸುತ್ತಿದ್ದಾರೆ. ಸೂಕ್ತ ಅಂಕಣಗಳು ಮತ್ತು ಶೀರ್ಷಿಕೆಗಳು ನಿಯತಕಾಲಿಕೆಯ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿವೆ. ಇಂತಹ ಪ್ರಾಮಾಣಿಕ ಪ್ರಯತ್ನಗಳು ವಿಜ್ಞಾನ ಸಾಹಿತ್ಯಕ್ಕೆ ನೀಡುವ ಕೊಡುಗೆಯಾಗಿವೆ. ಇದರೊಂದಿಗೆ ಆಯಾ ಕ್ಷೇತ್ರಕ್ಕೆ ಅವರು ಸಲ್ಲಿಸುತ್ತಿರುವ ಸೇವೆಯಾಗಿದೆ. ಇವರ ಪ್ರಯತ್ನಗಳು ಕೃಷಿಕರಿಗೆ ತಲುಪಿ, ಅವರಲ್ಲಿ ಜಾಗೃತಿಯನ್ನು ಮೂಡಿಸುತ್ತದೆ ಹಾಗೂ ವ್ಯವಸಾಯ ಪದ್ಧತಿಯು ಸುಧಾರಿಸುತ್ತದೆ. 'ಹಿತ್ತಲಗಿಡ' ಮಾಡುತ್ತಿರುವ ಪ್ರಯತ್ನವು ನಿಜಕ್ಕೂ ಶ್ಲಾಘನೀಯ.

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ನಾಲ್ಕನೇ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ (Department of Science and Technology) ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವ ವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು (Intellectual Property Rights) ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪು–ರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3 ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 7,500 ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ಸ್ಕೌಟ್‌ಗಳು ಹಾಗು ಪರಿಶೋಧಕರಿಗೆ ಪ್ರತಿಯೊಬ್ಬರಿಗೂ 7,500 ಸಾಂತ್ವಾನ ಪುರಸ್ಕಾರಗಳಿವೆ. ಹಾಗೇ ರಾಜ್ಯ ಮಟ್ಟದಲ್ಲೂ ಪ್ರೋತ್ಸಾಹ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು ರಾಷ್ಟ್ರೀಯ ದಾಖಲಾತಿ ಪುಸ್ತಕದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿ ತರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಬಹದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂಬ ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಪೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ನಾಲ್ಕನೆಯ ಸ್ಪರ್ಧೆಗೆ ಡಿಸೆಂಬರ್ 2004 ರವರೆಗೆ ಅವಕಾಶವಿದೆ.

ಪೂರ್ವ ಸೂಚಿತ ಸಮ್ಮತಿ

ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಮುಂದೆ ಬಳಸಿಕೊಳ್ಳುವ ವಿಧಾನವನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹಾ ಅನುಶೋಧನೆಗಳ ನೈಜ ವಾರಸುದಾರರಿಂದ ಒಂದು "ಪೂರ್ವ ಸೂಚಿತ ಸಮ್ಮತಿ" (Prior Informed Concent) ಪಡೆದ ನಂತರವೇ ಮುಂದುವರೆಯಲಾಗುವುದು.

ಪ್ರವೇಶ ಪತ್ರ ಕಳುಹಿಸಬೇಕಾದ ವಿಳಾಸ:

ಡಾಃ ಟಿ.ಎನ್. ಪ್ರಕಾಶ್ ಕಮ್ಮರಡಿ, ಸಹ ಪ್ರಾಧ್ಯಾಪಕ ಮತ್ತು ಸಂಪಾದಕ 'ಹಿತ್ತಲಗಿಡ', ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು – 560 065 ದೂರವಾಣಿ: 2362 0025, email: prakashtnk@yahoo.com

(ಎಂತಹ ಶೋಧನೆಗಳನ್ನು ಕಳುಹಿಸಬಹುದು ಎನ್ನುವ ಉದಾಹರಣಾ ಮಾಹಿತಿಗಾಗಿ ಹಳೆಯ 'ಹಿತ್ತಲಗಿಡ' ಪುಸ್ತಕಗಳನ್ನು ನೋಡಬಹುದು)

ರಾಷ್ಟ್ರೀಯ ಸ್ಪರ್ಧೆಯ ಸಂಚಾಲಕರು:

National Co-ordinator, National Innovation Foundation, Satellite complex, Bangalow No.1,
Premchand Nagar Road, Ahmedabad - 380 015, Gujarat, e-main: campaign@nifindia. org

ಪತ್ರಿಕೆ ನೋಂದಣಿ ಸಂಖ್ಯೆ 66842/96

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *"ಸಂಪಾದಕರು, ಹಿತ್ತಲಗಿಡ, ಬೆಂಗಳೂರು"* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

ತೆರೆದ ಅಂಚೆ

ಗೆ, ...

....

....

....

ವಿಳಾಸ
ಡಾ.ಟಿ.ಎನ್. ಪ್ರಕಾಶ್ ಕಮ್ಮರಡಿ
ಸಹ ಪ್ರಾಧ್ಯಾಪಕ ಮತ್ತು ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065

Ph: 080-3620025 (O)
email: hittalu@bgl.vsnl.net.in

Printed by Sri. S. Sridhar, Published by Smt. K. Meenakshi (Owner). Printed at "Navabharath Enterprises" No.10, Sirur Park `B' Street, Sheshadripuram, Bangalore - 560 020 and Published at No.399, 14-B Cross, New Town Yelahanka, Bangalore - 560 064. Edited by Dr. T.N. Prakash Kammaradi